

ಸಂಪುಟ 24 ಸಂಚಿಕೆ 52
ಡಿಸೆಂಬರ್ 29, 2002 ಬೆಲೆ ರೂ. 3.00


ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಾರ್ವಜನಿಕ ಉದ್ದಿಮೆ: ಕಾಮಧೇನುವಿನ ಕತ್ತು ಕೊಯ್ಯುವ ಸರಕಾರ







ಗುಜರಾತ್ ಫಲಿತಾಂಶ ಎಚ್ಚರಿಕೆಯ ಗಂಟೆ

ಪಂಚವಾರ್ಷಿಕ ಯೋಜನೆಯ ಪ್ರಹಸನ





ವೆನಿಜುವೆಲಾ : ಅಧ್ಯಕ್ಷ ಪದಚ್ಯುತಿಗೆ ಪಿತೂರಿ




ದಿನಕರ್‌ರವರ ಪೊಲೀಸ್ ಕರ್ತವ್ಯ ?

ವಿನಾಶಕ್ಕೆ ಬಂದ ಮೋಹನಾಂಗಿ..

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ

9

ಹಿಂದಿನ ಸಂಚಿಕೆಯಲ್ಲಿ ಲಂಬ ವ್ಯವಸ್ಥೆಯ ಸಂಘಟನೆ, ಸ್ಥಳದಲ್ಲೇ ಉದ್ಭವಿಸುವ ಸಂಘರ್ಷ ನಿವಾರಣೆ, ಆಕಾಶದಿಂದ ಧರೆಗಿಳಿದ ಕ್ರಾಂತಿಕಾರಿ ಬಾಂಬುಗಳು,ಸ್ಮರಣ ಸಿಂಗರ ಹೊಡೆದಾಟ ಮತ್ತು ನಿಮಗೆ ಸ್ವಾತಂತ್ರ್ಯ ಸಿಗುವುದಿಲ್ಲ..... ಈ ಬಗ್ಗೆ ಓದಿರುವಿರಿ. ಮುಂದೆ ಓದಿ....



ಕನ್ನಡಕ್ಕೆ: ವಿಶ್ವ ಕುಂದಾಪುರ

"ಈ ಆಂಗ್ಲೋ ಇಂಡಿಯನ್ನರಿಗೆ ಭಾರತದಲ್ಲಿ ಅಧಿಕಾರಿಗಳನ್ನು ಅವಮಾನಿಸುವ ಧಾರ್ಷ್ಟ್ಯವಿದೆ. ಇನ್ನು ಬ್ರಿಟೀಷ್ ಅಧಿಕಾರಿಗಳು ಹುಡುಗಿಯರನ್ನು ತೊಡೆ ಮೇಲೆ ಕೂರಿಸಿಕೊಂಡು ಲಲ್ಲೆಗರೆಯುತ್ತಾ ಇರುವುದು ನಿನಗೆ ಗೊತ್ತಿದೆಯೋ?" ಎಂದನಾತ.

ಆತನಿಗೆ ಒಂದಷ್ಟು ಸ್ಕಾಚ್ ಕುಡಿಸಿ ಮೌನಗೊಳಿಸಿದೆ. ಆಗ ಅಲ್ಲಿಗೆ ಬಂದರು ಲೆಫ್ಟಿನೆಂಟ್ ಖರೆ.

"ನನ್ನನ್ನು ಇಲ್ಲಿ ನೇಮಿಸಲಾಗಿದೆ. ಬಹುಶಃ ಅವರು ನನನ್ನು ಮಧ್ಯಪೂರ್ವಕ್ಕೆ ಕಳಿಸಬಹುದು. ಆ ಭಯಾನಕ ಮರಳುಗಾಡಿನಲ್ಲಿ ನಾನು ಸತ್ತರೆ ಅವರಿಗೆ ಖುಷಿಯಾಗುತ್ತದೆ, ದರಿದ್ರದವರು!" ಖರೆ ತನ್ನ ಅಳುವನ್ನು ಬಿಚ್ಚಿಟ್ಟ. ಸ್ಮರಣ್‌ಸಿಗ್ ಮೇಳ ಸೇರಿಸಿದ. ತನ್ನ ಕರುಣಾಜನಕ ಕತೆಯನ್ನು ಹೇಳಿದ. ಆಂಗ್ಲೋ ಇಂಡಿಯನ್ನರನ್ನು ಹಿಗ್ಗಾ ಮುಗ್ಗಾ ಬಡಿಯಲು ಅವರಿಬ್ಬರು ಯೋಜನೆ ರೂಪಿಸಿದರು. ಏನೋ ವಿಪತ್ತು ಕಾದಿದೆಯೆಂದು ನನಗನಿಸಿತು. ನನ್ನ ಮೆಟ್ರೋಪೋಲ್ ರೂಮಿಗೆ ಬನ್ನಿ ಎಂದು ಅವರಿಗೆ ಸಲಹೆ ಮಾಡಿದೆ. ಬಾರ್‌ನಲ್ಲಿರುವ ನನ್ನ ಕೇಂದ್ರವನ್ನು ಹಾಳು ಮಾಡಿಕೊಳ್ಳಲು ನನಗೆ ಇಷ್ಟವಿರಲಿಲ್ಲ.

ನನ್ನ ಕೋಣೆಗೆ ತೆರಳಿ ಹಳೆ ಖರೆಯ ಆಗಮನವನ್ನು ಅಲ್ಲಿ ಆಚರಿಸೋಣ ಎಂಬ ನನ್ನ ಸಲಹೆಗೆ ಅವರು ಸಮ್ಮತಿಸಿದರು.

ಹೋಗುವಾಗ ಸಹೋದ್ಯೋಗಿಗೆ ಬ್ರಿಟೀಷ್ ಅಧಿಕಾರಿಯೊಬ್ಬ ಸಿಕ್ಕ. ಅವನೂ ನಮ್ಮ ಜತೆ ಬಂದ. ನಾವೆಲ್ಲ ಒಟ್ಟಾಗಿ ರೂಮಿನಲಲ್ಲಿ ಗುಂಡುಹಾಕುತ್ತಾ ಕುಳಿತೆವು. ಬ್ರಿಟೀಷ್ ಅಧಿಕಾರಿ ನಮ್ಮೊಂದಿಗೆ ಇರುವುದನ್ನು ಖರೆಗೆ ಸಹಿಸಿಕೊಳ್ಳಲಾಗಲಿಲ್ಲ. ಏನೋ ತೊಂದರೆ ಆಗಬಹುದು ಅಂದುಕೊಂಡೆ. ನನ್ನ ರೂಮನ್ನಾದರೂ ಯುದ್ಧಭೂಮಿಯನ್ನಾಗಿ ಮಾಡಿಕೊಳ್ಳಲು ನಾನು ಸಿದ್ಧನಿದ್ದೆ: ಆದರೆ ಬಾರ್ ಕೇಂದ್ರ ಸುರಕ್ಷಿತವಾಗಿರಬೇಕೆಂಬುದು ಬಯಕೆಯಾಗಿತ್ತು. ಸ್ವಲ್ಪ ಸಮಯ ಎಲ್ಲವೂ ಸರಿಯಾಗಿತ್ತು. ಖರೆ ಸುಮ್ಮನೆ ಕುಳಿತಿದ್ದರು. ಸ್ಮರಣ್ ಮಾತ್ರ ಬ್ರಿಟಿಷ್ ಅಧಿಕಾರಿ ಜತೆ ಲಘುವಾಗಿ ವಾದ ಮಾಡುತ್ತಿದ್ದ. ಆ ಆಧಿಕಾರಿಯ ರಕ್ತಕ್ಕೆ ಮದ್ಯ ಸೇರ್ಪಡೆ ಮಾಡುತ್ತಿದ್ದ. ಆ ಅಧಿಕಾರಿಯ ರಕ್ತಕ್ಕೆ ಮದ್ಯ ಸೇರ್ಪಡೆ ಆಗುತ್ತಲೇ ಇತ್ತು. ತರುಣ ಸ್ಮರಣ್‌ಸಿಂಗ್ ಸಿಟ್ಟಿನಿಂದ ಆತನ ಗ್ಲಾಸಿಗೆ ಸುರಿಯುತ್ತಲೇ ಇದ್ದ: ಜತೆಯಲ್ಲೇ ಭಾರತದ ಸ್ವಾತಂತ್ರ್ಯದ ಬೇಡಿಕೆಯನ್ನು ಕಿವಿಗೆ ಉಸುರುತ್ತಿದ್ದ.

ಗ್ಲಾಸು ತುಂಬಾ ತುಂಬಾ ಮದ್ಯ ಆಸ್ವಾದಿಸುತ್ತಿದ್ದ ಆ ಬ್ರಿಟೀಷ್ ಅಧಿಕಾರಿ ಇದ್ದಕ್ಕಿದ್ದಂತೆ ಎದ್ದು ನಿಂತು ಗ್ಲಾಸನ್ನು ಎಡಗೈಯಲ್ಲಿ ಹಿಡಿದು ಬಲಗೈಯನ್ನು ಬೀಸುತ್ತಾ ಸಿಟ್ಟಿನಿಂದ ಎಗರಾಡತೊಡಗಿದ.

"ಸ್ವಾತಂತ್ರ್ಯವಂತೆ ಸ್ವಾತಂತ್ರ್ಯ, ಮೈ ಫುಟ್! ನಾವು ನಮ್ಮ ಅಸ್ತಿತ್ವಕ್ಕಾಗಿ ಯುದ್ಧ ಮಾಡುತ್ತಿರುವಾಗ ನೀವು ದರಿದ್ರ ಭಾರತೀಯರು ನಮ್ಮ ಬೆನ್ನಿಗೆ ಚೂರಿ ಹಾಕುತ್ತಿದ್ದೀರಾ. ನಾನು ನಿಮಗೆ ಹೇಳುತ್ತಿದ್ದೇನೆ, ನಿಮಗೆ ಸ್ವಾತಂತ್ರ್ಯ ದೊರಕುವುದಿಲ್ಲ. ಎಂದೆಂದಿಗೂ ಸಿಗುವುದಿಲ್ಲ. ಯುದ್ಧ ಮುಗಿದ ಮೇಲೆಯೂ ಸಿಗುವುದಿಲ್ಲ" ಎಂದಾತ ಅರಚಿದ.

ಸ್ಮರಣ್‌ಸಿಂಗ್‌ಗೆ ರೇಗಲು ಇದು ಬೇಕಷ್ಟಾಯಿತು. ತಕ್ಷಣವೇ ಅವರಿಬ್ಬರೂ ಕಾದಾಟಕ್ಕೆ ತೊಡಗಿದರು. ಮೇಜುಗಳು ಉರುಳಿದವು, ಗ್ಲಾಸುಗಳು ಪುಡಿಯಾದವು!

ಖರೆ ಅಸಹಜವೆಂಬಂತೆ ಇನ್ನು ಕುಳಿತೇ ಇದ್ದ. ಕೋಳಿಪಡೆಯಲ್ಲಿ ತಮ್ಮ ತಮ್ಮ ಕೋಳಿಗೆ ಹುರಿದುಂಬಿಸುತ್ತಾ ಗಾಳಿ ಹಾಕುವ ಕೋಳಿಯ ಮಾಲಿಕನಂತೆ ಆತನ ಕಣ್ಣುಗಳು ಹೊಳೆಯುತ್ತಿದ್ದವು.

'ಶಭಾಷ್ ಸ್ಮರಣ್, ಅವನ ದವಡೆಗೆ ಇನ್ನೊಂದು ಬಿಗಿ. ಹೊಟ್ಟೆಗೆ ಒದೆ'' ಎಂದು ಹುರಿದುಂಬಿಸಿದ.

ಸ್ಮರಣ್‌ಸಿಂಗ್‌ನ ಹೊಡೆದಾಟದಿಂದ ಒಳಗಿಂದೊಳಗೇ ಖುಷಿಪಟ್ಟ ನಾನು, ಅವರನ್ನು ಬೇರ್ಪಡಿಸಲು ಮಧ್ಯಪ್ರವೇಶ ಮಾಡಿದೆ. ಡಿಪೋದ ಕಮಾಂಡಿಂಗ್ ಆಫೀಸರ್ ಕಟ್ಟಾ ಭಾರತ ವಿರೋಧಿ. ಆತನಿಗೇನಾದರೂ ಆ ಬ್ರಿಟೀಷ್ ಅಧಿಕಾರಿ ಜಗಳದ ವಿಷಯವನ್ನು ತಿಳಿಸಿದರೆ ಆಗಲಿರುವ ಅನಾಹುತ ನೆನೆದು ನನಗೆ ಚಿಂತೆಯಾಗುತ್ತಿತ್ತು. ಹೀಗಾಗಿ ಬ್ರಿಟೀಷರ ಕ್ರೀಡಾಮನೋಭಾವವನ್ನು ಮನಸ್ಸಿಗೆ ತಂದುಕೊಂಡು ಈ ಸಮಸ್ಯೆಯನ್ನು ಬಗೆಹರಿಸಲು ನಿರ್ಧರಿಸಿದೆ.

ಕ್ರೀಡಾ ಮನೋಭಾವದ ಬ್ರಿಟೀಷ್ ಭಾರಿ ಜಗಳದ ನಂತರವೂ ಸಂತೋಷದಿಂದ ತನ್ನ ಪ್ರತಿಸ್ಪರ್ಧಿಯ ಕೈಕುಲುಕುತ್ತಾರೆ. ನಾನು ಆ ಬ್ರಿಟೀಷ್ ಅಧಿಕಾರಿಗೆ ಅನುನಯದಿಂದ ಮನವಿ ಮಾಡಿದೆ. ಈ ತಂತ್ರ ಫಲಿಸಿತು. ಅವರಿಬ್ಬರೂ ಕೈ ಕುಲುಕಿಕೊಂಡರು. ಇದರ ಸಂಭ್ರಮಕ್ಕಾಗಿ ಇನ್ನೂ ಒಂದೊಂದು ಪೆಗ್ ಇಳಿಸಿದ್ದರು. ಮಧ್ಯರಾತ್ರಿ ಅವರಿಬ್ಬರೂ ರೂಮಿನಿಂದ ಹೊರಟರು. ನಾನು ಮತ್ತು ಖರೆ ಮಾತ್ರ ಉಳಿದೆವು. ಮಾತಾಡುತ್ತಾ ಕುಳಿತೆವು.

"ಜೈ! ನಾವ್ಯಾಕೆ ಏನಾದರೂ ಮಾಡಬಾರದು? ಶೀಘ್ರವೇ ರಾಷ್ಟ್ರೀಯ ಆಂದೋಲನವೊಂದು ಆರಂಭವಾಗುವುದು ನಿಶ್ಚಿತ. ನಾವು ನಮ್ಮ ಸೈನಿಕರ ಜತೆ ಸೇರಿ ತೊರೆದು ಹೋಗಿ ಚಳುವಳಿಯನ್ನು ಸೇರಲು ಸಂಘಟಿತರಾಗಬಾರದೇಕೆ? ಎಂದು ಖರೆ ಕೇಳಿದರು.

ನಾನು ಏನನ್ನೂ ಹೇಳಲಿಲ್ಲ. ಖರೆ ಬಗ್ಗೆ ಗೊತ್ತಿದ್ದರಿಂದ ಆತನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಾರದೆಂದು ಸಂಘಟನಾ ಸಮಿತಿ ನಿರ್ಧರಿಸಿತ್ತು. ಆತುರ ಸ್ವಭಾವದ, ತರುಣ ಅಪ್ಪಟ ಬ್ರಿಟೀಷ್ ವಿರೋಧಿಯಾದ ಖರೆ ಅಕಾಲಿಕ ಕಾರ್ಯದಲ್ಲಿ ತೊಡಗುವ ಸಂಭವವಿತ್ತು.

ಬಂಡಾಯ ಆರಂಭವಾದಾಗ ನಮ್ಮೆಲ್ಲರಿಗಿಂತ ಖರೆಯೇ ಮುಂಚಿತವಾಗಿ ಅದರಲ್ಲಿ ಧುಮುಕಿ ಆತುರಪಟ್ಟು ತನ್ನ ತಾಯ್ನಾಡಿಗಾಗಿ ಪ್ರಾಣತ್ಯಾಗ ಮಾಡುತ್ತಾರೆಂದು ನಮಗೆ ಗೊತ್ತಿತ್ತು. ನಾನು ಉದ್ದೇಶಪೂರ್ವಕವಾಗಿಯೇ ಆತನೊಂದಿಗೆ ಇಂಥ ಮಾತುಕತೆ ನಡೆಯುವುದನ್ನು ನಿವಾರಿಸಿದೆ. ಬ್ರಿಟಿಷ್ ವಿರೋಧಿ ಚಟುವಟಿಕೆಯಲ್ಲಿ ಪಾಲ್ಗೊಳ್ಳದಂತೆ 'ಸೌಮ್ಯ' ನಿಲುವು ತಳೆದೆ. ಬಹುಶಃ ಖರೆ ಈಗೇನಾದರೂ ಈ ಸಾಲುಗಳನ್ನು ಓದಿದರೆ ನಾನು ಆಗ ಆತನನ್ನು ಹಲವು ಬಾರಿ ಈ ವಿಚಾರದಲ್ಲಿ ಅಪ್‌ಸೆಟ್ ಮಾಡಿದ್ದಕ್ಕೆ ಕಾರಣವೇನೆಂದು ತಿಳಿದು ನನ್ನನ್ನು ಕ್ಷಮಿಸುತ್ತೀರೆಂದು ಆಶಿಸುತ್ತೇನೆ. ಇರಲಿ. ಏನಿದ್ದರೂ ಆ ಬ್ರಿಟೀಷ್ ಅಧಿಕಾರಿಯ ಮಾತು ನನ್ನನ್ನು ಕೊರೆಯುತ್ತಿತ್ತು...'ಸ್ವಾತಂತ್ರ್ಯ!

ನಾನು ನಿಮಗೆ ಹೇಳುತ್ತೇನೆ, ನಿಮಗೆ ಸ್ವಾತಂತ್ರ್ಯ ಯಾವತ್ತು ಸಿಗುವುದಿಲ್ಲ, ಯುದ್ಧ ಮುಗಿದ ಮೇಲೂ ದೊರಕುವುದಿಲ್ಲ! ಆ ಮಾತು ಬ್ರಿಟೀಷರು ಇರುವವರೆಗೆ ಭಾರತದ ಜನತೆಗೆ ನೀಡಿದ ಆಶ್ವಾಸನೆಗಳ ಪೊಳ್ಳುತನವನ್ನು ನನಗೆ ಮನವರಿಕೆ ಮಾಡಿಕೊಟ್ಟಿತು.

(ಮುಂದುವರಿಯುವುದು)

ರೇಷ್ಮೆ ಕೃಷಿಕರ ಅಖಿಲ ಭಾರತ ಪ್ರತಿಭಟನಾ ಪ್ರದರ್ಶನ - ಜನವರಿ 10

ಮುಂದೂಡಲಾಗಿದ್ದ ರೇಷ್ಮೆ ಕೃಷಿಕರ ಅಖಿಲ ಭಾರತ ಪ್ರತಿಭಟನಾ ಪ್ರದರ್ಶನ ಜನವರಿ 10, 2003 ರಂದು ನಡೆಯಲಿದೆ. ಡಿಸೆಂಬರ್ 20 ರಂದು ಸಭೆ ಸೇರಿದ್ದ ರೇಷ್ಮೆ ಕೃಷಿಕರ ಅಖಿಲ ಭಾರತ ಪ್ರತಿಭಟನಾ ಪ್ರದರ್ಶನದ ಸಿದ್ಧತಾ ಸಮಿತಿ, ಕರ್ನಾಟಕ ಪ್ರಾಂತ ರೈತ ಸಂಘ(KPRS), ರೇಷ್ಮೆ ಬೆಳೆಗಾರರ ಹೋರಾಟ ಸಮಿತಿ ಸಭೆಯು ನಿರ್ಧರಿಸಿದೆ. ಸಭೆಯಲ್ಲಿ ಸಿದ್ಧತಾ ಸಮಿತಿಯ ಅಧ್ಯಕ್ಷರಾದ ಕೆ.ಎಂ.ವೆಂಕಟೇಶ್, ಉಪಾಧ್ಯಕ್ಷರಾದ ಮಾಜಿ ರೇಷ್ಮೆ ಸಚಿವ ವರದೇಗೌಡರು, ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಸಂಘಟನಾ ಕಾರ್ಯದರ್ಶಿ ವಳ್ಳೂರು ಶಿವಣ್ಣ, ಕಾರ್ಯದರ್ಶಿಗಳಾದ ಹೋಳೂರ್ ಶಂಕರ್, ಮುನಿರಾಜು, ಕೋಲಾರ ಜಿಲ್ಲೆ ಶಿಡ್ಲಘಟ್ಟದ ಪ್ರಮುಖ ರೇಷ್ಮೆ ಬೆಳೆಗಾರರಾದ ಅನೂರು ನಾಗರಾಜ್, ರಾಮಕೃಷ್ಣಪ್ಪ, ನಾರಾಯಣ ಸ್ವಾಮಿ, ಮಂಡ್ಯ ಜಿಲ್ಲೆಯ ದೊಡ್ಡ ಮರೀಗೌಡ ಮುಂತಾದ ಪ್ರಮುಖರು ಭಾಗವಹಿಸಿದ್ದರು.

ಕಚ್ಚಾ ರೇಷ್ಮೆ ಆಮದನ್ನು ನಿಯಂತ್ರಿಸಲು ಶೇ 100 ರಷ್ಟು ಆಮದು ಸುಂಕ ವಿಧಿಸಬೇಕು, ಕಳ್ಳ ಸಾಗಾಣಿಕೆಯ ಮೂಲಕ ಹರಿದುಬರುತ್ತಿರುವ ರೇಷ್ಮೆಯನ್ನು ತಡೆಗಟ್ಟಬೇಕು, ಕೆ.ಜಿ. ರೇಷ್ಮೆ ಗೂಡಿಗೆ 150 ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು, ಕೆಎಸ್‌ಐಸಿ ಮತ್ತು ಕೆಎಸ್‌ಎಂಬಿಗಳನ್ನು ಬಲಪಡಿಸಬೇಕು ಮತ್ತು ರಾಜ್ಯದಲ್ಲಿ ರೇಷ್ಮೆ ಕಾನೂನು ಮತ್ತು ಕಾಯಿದೆ ಜಾರಿ ವಿಭಾಗವನ್ನು ಬಲಗೊಳಿಸಬೇಕು ಇತ್ಯಾದಿ ಬೇಡಿಕೆಗಳನ್ನು ಆಗ್ರಹಿಸಿ ಡಿಸೆಂಬರ್ 10 ರಂದು ಬೆಂಗಳೂರಿನ ಕೇಂದ್ರ ರೇಷ್ಮೆ ಮಂಡಳಿ (CSB) ಎದುರು ನಡೆಸಲು ಉದ್ದೇಶಿಸಲಾಗಿದ್ದ ಪ್ರತಿಭಟನಾ ಪ್ರದರ್ಶನವನ್ನು ಮಾಜಿ ಸಚಿವ ನಾಗಪ್ಪನವರ ಹತ್ಯೆಯ ಹಿನ್ನೆಲೆಯಲ್ಲಿ ಕೊನೆ ಕ್ಷಣಗಳಲ್ಲಿ ಮುಂದೂಡಲಾಗಿತ್ತು.

ಪಕ್ಷಾತೀತವಾಗಿ ನಡೆಯುವ ಈ ಹೋರಾಟಕ್ಕೆ ಹೊರ ರಾಜ್ಯಗಳಿಂದ ಬರುವ ಸಾವಿರಾರು ರೈತರ ಜೊತೆ ರಾಜ್ಯದಿಂದ. ಹತ್ತಾರು ಸಾವಿರ ರೈತರು ಭಾಗವಹಿಸಲಿದ್ದಾರೆ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಡಿಸೆಂಬರ್ 25, 2002

- ಏಶಿಯಾ ಸೋಷಿಯಲ್ ಫೋರಂ ಆಶ್ರಯದಲ್ಲಿ ಚಾರ್ಲಿಚಾಪ್ಲಿನ್ ಹುಟ್ಟು ಹಬ್ಬ ಆಚರಣೆ. ಚಾಪ್ಲಿನ್‌ರವರ 4 ಚಿತ್ರಗಳ ಪ್ರದರ್ಶನ. ಬೆಳಿಗ್ಗೆ 10 ಗಂಟೆಗೆ - ಸರಕಾರಿ ಆಸ್ಪತ್ರೆ ಎದುರಿಗಿರುವ ವಿಡಿಯೋ ಪಾರ್ಲರ್ ತುಮಕೂರು.

ಡಿಸೆಂಬರ್ 26,27,28-2002

- ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಸಮ್ಮೇಳನ, ಚಿಕ್ಕಮಗಳೂರು
ಬಹಿರಂಗ ಸಭೆ 28.12.2002
ಅಜಾದ್ ಪಾರ್ಕ್, ಚಿಕ್ಕಮಗಳೂರು

ಡಿಸೆಂಬರ್ 27-30 - 2002

- ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ 11ನೇ ರಾಷ್ಟ್ರೀಯ ಸಮ್ಮೇಳನ - ಚೆನ್ನೈ, ಮಹಿಳಾ ಪ್ರತಿನಿಧಿ ಸಮ್ಮೇಳನ

ಡಿಸೆಂಬರ್ 28, 2002

- ಏಶಿಯಾ ಸೋಷಿಯಲ್ ಫೋರಂ ಆಶ್ರಯದಲ್ಲಿ ಸಮಾವೇಶ
ಮಿಥಿಕ್ ಸೊಸೈಟಿ ಹಾಲ್
ಮಧ್ಯಾಹ್ನ 3ರಿಂದ 6
ಮ. 2 ಗಂಟೆಗೆ ರ್‍ಯಾಲಿ

ಜನವರಿ 8, 2003

- ಕಾರ್ಮಿಕ ಸಂಘಟನೆಗಳ ಜಂಟಿಸಮಿತಿ(ಜೆಸಿಟಿಯು) ಆಶ್ರಯದಲ್ಲಿ ದೇಶದಾದ್ಯಂತ **ಜೈಲ್ ಭರೋ ಚಳುವಳಿ**
ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜೈಲ್ ಭರೋ ಚಳುವಳಿ

ಜನವರಿ 23, 2003

- ಹಮಾಲಿ ಕಾರ್ಮಿಕರ ರಾಜ್ಯ ಸಮಾವೇಶ, ಬೆಂಗಳೂರಿನಲ್ಲಿ
25.12.2002 ರಿಂದ ಜಾಥಾ - ಉದ್ಘಾಟನೆ ಚಳ್ಳಕೆರೆಯಲ್ಲಿ
31.12.2002 ರಂದು ಜಾಥಾ ಮುಕ್ತಾಯ ಹರಿಹರ

(ನಿಮ್ಮ ಪ್ರದೇಶಗಳಲ್ಲಿ ನಡೆಯಲಿರುವ ಪ್ರಮುಖ ಕಾರ್ಯಕ್ರಮ/ ಚಳುವಳಿಗಳ ಬಗ್ಗೆ ಮುಂಚಿತವಾಗಿ ತಿಳಿಸಿರಿ)

ಬಾಬಾ ಬುಡನ್ ಗಿರಿ: ಖಾವೀಪಡೆಗಳ ತೀವ್ರ ಧಾಳಿಗೆ ಸಜ್ಜು

ಬಾಬಾ ಬುಡನ್‌ಗಿರಿಯೀಗ ಭಜರಂಗದಳದವರ ಅಟ್ಟಹಾಸದಿಂದ ನಿಧಾನವಾಗಿ ಸಹಜ ಸ್ಥಿತಿಗೆ ಮರಳುತ್ತಿದೆ. ಕಳೆದ ಆರು ವರುಷಗಳಿಂದ ಖಾವಿ ಪಡೆಗಳು ವಿನೂತನವಾಗಿ ಆರಂಭಿಸಿದ 'ದತ್ತ ಜಯಂತಿ' ಪ್ರತಿವರುಷವೂ ಒಂದು ದಾಂಧಲೆಯ ಕಣವಾಗಿ ಮಾರ್ಪಾಡಾಗುತ್ತದೆ. ಆ ಪ್ರಶಾಂತ ಬೆಟ್ಟದ ಮೇಲೆಯೇ ಸಭೆ ನಡೆಸಿದ ಭಜರಂಗದಳ, ವಿಶ್ವಹಿಂದೂ ಪರಿಷತ್, ಬಿಜೆಪಿಗಳು - ಅದನ್ನು ಇನ್ನೊಂದು ಅಯೋಧ್ಯೆ ಮಾಡುವುದಾಗಿ ಘೋಷಿಸಿದ್ದಾರೆ. ವಿಶ್ವಹಿಂದೂ ಪರಿಷತ್ ನಾಯಕ ಪ್ರವೀಣ್ ತೊಗಾಡಿಯಾ ಗುಜರಾತ್ ಫಲಿತಾಂಶಗಳ ಬಳಿಕ ಇನ್ನೆರೆಡು ವರುಷಗಳಲ್ಲೇ 'ಹಿಂದೂರಾಷ್ಟ್ರ' ನಿರ್ಮಿಸುವುದಾಗಿ ಸಾರಿದ್ದಾರೆ. ಬಾಬಾ ಬುಡನ್‌ಗಿರಿ ಮತ್ತು ಹಾಸನಗಳಿಗೆ ಭೇಟಿ ನೀಡಿದ ಆತ ಅಯೋಧ್ಯೆಯಲ್ಲಿ ಮಾಡಿದ ಎಲ್ಲಾ ದುಷ್ಕೃತ್ಯಗಳನ್ನು ಪುನರ್ ಉಚ್ಚರಿಸಿದ್ದಾನೆ. ಮಾತ್ರವಲ್ಲ, ಎಲ್ಲಾ ಸೆಕ್ಯುಲರಿಸ್ಟರನ್ನು ಗಲ್ಲಿಗೆ ಹಾಕುವ ಫ್ಯಾಸಿಸ್ಟ್ ಅಜೆಂಡಾ ಪ್ರಕಟಿಸಿದ್ದಾನೆ.

ಸೌಹಾರ್ದ ಸಂಸ್ಕೃತಿ, ವಿಶಿಷ್ಟ ಧಾರ್ಮಿಕ ಪರಂಪರೆಯ ಕೇಂದ್ರವಾಗಿರುವ ಬಾಬಾ ಬುಡನ್‌ಗಿರಿ ದತ್ತ ಪೀಠವನ್ನು ನಾಶ ಪಡಿಸಲು ಸಂಘ ಪರಿವಾರದ ಪ್ರಯತ್ನಗಳು ತೀವ್ರವಾಗಿ ಸಾಗಿವೆ. ಹೋದ ತಿಂಗಳು 'ದತ್ತ ಮಾಲೆ'ಯ ನಟನೆ ಮಾಡಿದವರು, ದತ್ತ ಜಯಂತಿ, ಅಭಿಯಾನಗಳ ಮೂಲಕ ದ್ವೇಷಮಯ ಸ್ಥಿತಿಯನ್ನು ನಿರ್ಮಿಸುತ್ತಿದ್ದಾರೆ. ಶಾಂತಿ ಸೌಹಾರ್ದತೆಯ ರಕ್ಷಣೆಗಾಗಿ ಎಐಡಿವೈಎಫ್‌ನ ಗೆಳೆಯರೊಂದಿಗೆ ಹಲವಾರು ಪ್ರಗತಿಪರರು, ಸ್ವಾಮಿಗಳು ಸೇರಿ ಸಭೆ ನಡೆಸಿ, ಪ್ರತಿಜ್ಞೆ ಕೈಗೊಂಡಿದ್ದ ಬಗ್ಗೆ ಕೆಂಡ ಕಾರಿದ್ದಾರೆ ಸಂಘ ಪರಿವಾರದವರು. ಬಳಿಕ ಬಿಜೆಪಿಯ ಯಡಿಯೂರಪ್ಪ, ಜಗದೀಶ್ ಶೆಟ್ಟರ್ ಮುಂತಾದ ನಾಯಕಮಣಿಗಳ ದಂಡು ಅಲ್ಲಿಗೆ ಧಾವಿಸಿ, ಅಧಿಕಾರಿಗಳಿಗೆ, ಸರ್ಕಾರಕ್ಕೆ ಮನಬಂದಂತೆ ಬೈದು, ಆಜ್ಞೆ ಹೊರಡಿಸಿದೆ.

ಈ ಭಜರಂಗದಳದವರ ಮಾತುಗಳು, ಕೃತಿಗಳನ್ನು ನೋಡಿದರೆ ಖಂಡಿತ ಮತ್ತೊಮ್ಮೆ ನಾಡಿಗೆ ಕಿಚ್ಚು ಹಚ್ಚುವ ತಯಾರಿ ಕಂಡುಬರುತ್ತಿದೆ. ಇಂತಹ ಸಂದರ್ಭದಲ್ಲಿ ಎಲ್ಲಾ ಮಾನವೀಯತೆ, ಶಾಂತಿ-ಧಾರ್ಮಿಕ ಸಹಬಾಳ್ವೆಯಲ್ಲಿ ನಂಬಿಕೆ ಇರುವ ಪ್ರತಿಯೊಬ್ಬರೂ ಪ್ರತಿರೋಧ ಒಡ್ಡಿ, ಆ ದುಷ್ಟ ಸಂಚುಗಳನ್ನು - ಶಕ್ತಿಗಳನ್ನು ಹಿಮ್ಮೆಟ್ಟಿಸದಿದ್ದರೆ ಗಂಡಾಂತರ ಕಾದಿದೆ. ಎಲ್ಲಾ ಹಂತಗಳಲ್ಲಿಯೂ ತಿರಸ್ಕಾರಕ್ಕೆ ಒಳಗಾಗಿ, ನೆಲೆ ತಪ್ಪಿ, ನೆಲ ಕಚ್ಚುತ್ತಿದ್ದ ಈ ಪರಿವಾರ ಗುಜರಾತ್ ಫಲಿತಾಂಶದಿಂದ ಹೆಂಡ ಕುಡಿದ ಮಂಗನಂತೆ ವರ್ತಿಸುತ್ತಿವೆ.

ಕೊಂಚ ತಡವಾದರೂ ಕರ್ನಾಟಕದ ಪ್ರಗತಿಪರ ಧರ್ಮನಿರಪೇಕ್ಷಿತ ಶಕ್ತಿಗಳು ಈ ಅಪಾಯ ಕಂಡು ಜಾಗೃತರಾಗಿ ಕ್ರಿಯಾಶೀಲರಾಗುತ್ತಿರುವುದು ಸ್ವಾಗತಾರ್ಹ.

ಕರ್ನಾಟಕದಲ್ಲಿ ಅನೇಕ ಕಡೆಗಳಲ್ಲಿ ವಿವಿಧ ನೆಪಗಳನ್ನು ಮುಂದೊಡ್ಡಿ ಕೋಮು ಗಲಭೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಅಂತಹ ದೀರ್ಘ ಯೋಜನೆಯೂ ಇದ್ದಂತೆ ಕಾಣುತ್ತದೆ. ಇಂತಹವಗಳನ್ನು ದುಮನ ಮಾಡಿ, ಜನರನ್ನು ಅವರಿಂದ ಪ್ರತ್ಯೇಕಿಸುವಂತಹ ಆಡಳಿತಾತ್ಮಕ, ರಾಜಕೀಯ ಕ್ರಮಗಳನ್ನು ಕೃಷ್ಣರ ಸರ್ಕಾರ ಕೈಗೊಳ್ಳುತ್ತಿಲ್ಲ. ಕಾವೇರಿ ನದಿ ವಿವಾಗಳಲ್ಲಿ ಇಕ್ಕಟ್ಟಿಗೆ ಸಿಕ್ಕಾಗ ಮತ್ತು ಉದಾರೀಕರಣ ನೀತಿಗಳನ್ನು ವಿದೇಶಿ ಸಾಲ ಪಡೆವ ಶರತ್ತಿನ ಜಾರಿಯಲ್ಲಿ ಕೇಂದ್ರ ಹಾದಿ ಹಿಡಿದ ಕೃಷ್ಣರವರು ಈ ಕಾರಣಗಳಿಗಾಗಿ ಬಿಜೆಪಿ, ಸಂಘ ಪರಿವಾರದ ಬಗ್ಗೆ ಮೃಧು ಧೋರಣೆ ತಳಂದೆತ ಕಾಣುತ್ತದೆ. ಇನ್ನಾದರೂ ಸರ್ಕಾರ ನಿಷ್ಠುರವಾಗಿ ಕ್ರಮ ವಹಿಸಬೇಕಿದೆ.

ಕೊಡಗು: ಪ್ರಾರ್ಥನೆಗೆ ಬಜರಂಗದಳದ ಅಡ್ಡಿ

ಕೊಡಗು ಜಿಲ್ಲೆಯ ಸಿದ್ದಾಪುರ ಸಮೀಪದ ಬುಡಕಟ್ಟು ಜನ ವಾಸಿಸುವ ಪ್ರದೇಶಗಳಲ್ಲಿನ ಚರ್ಚ್‌ಗಳ ಮೇಲೆ ಸಂಘಪರಿವಾರದ ಗೂಂಡಾಗಳು ದಾಳಿ ನಡೆಸಿ ಬೆದರಿಕೆ ಒಡ್ಡಿರುವ ಘಟನೆ ಇತ್ತೀಚೆಗೆ ನಡೆದಿದೆ. ನವೆಂಬರ್ 17 ರಂದು ಬೆಳಿಗ್ಗೆ 10-30ಕ್ಕೆ ನಲ್ಸ್ ಹುದಿಕೇರಿ ಹಾಗೂ ಕರಡಿ ಗೋಡಿನಲ್ಲಿನ ಚರ್ಚ್‌ಗಳಿಗೆ ದಾಳಿಯಿಟ್ಟ ಸಂಘ ಪರಿವಾರದವರು ಕ್ರೈಸ್ಥ ಸಮುದಾಯದ ಪ್ರಾರ್ಥನೆಗೆ ಅಡ್ಡಿಪಡಿಸಿದ್ದಾರೆ. ಪ್ರಾರ್ಥನೆಗಾಗಿ ಬಂದಿದ್ದ ಮಹಿಳೆಯರ ಹಣೆಗೆ ಬಲವಂತವಾಗಿ ಕುಂಕುಮ ಹಚ್ಚುವಂತಹ ಹೀನ ಕೆಲಸಕ್ಕೆ ಕೈಹಾಕಿದ್ದಾರೆ.

ಕಳೆದ 11 ವರ್ಷಗಳಿಂದ ಈ ಪ್ರದೇಶಗಳಲ್ಲಿ ಕ್ರೈಸ್ಥ ಸಭೆಗಳು, ಪ್ರಾರ್ಥನೆಗಳು ನಡೆಯುತ್ತಿದ್ದು ಇಲ್ಲಿನ ದಲಿತ ಬುಡಕಟ್ಟು ಕುಟುಂಬಗಳೂ ಇದರಲ್ಲಿ ಬಾಗವಹಿಸುತ್ತಿವೆ. ಹಿಂದೂ ದರ್ಮದಲ್ಲಿನ ಜಾತಿ ಪದ್ಧತಿ, ಅಸ್ಪೃಶ್ಯತೆ, ಮೇಲ್ಜಾತಿಗಳ ದಾಳಿ ದಬ್ಬಾಳಿಕೆಗಳಿಂದ ಬೇಸತ್ತ ಜನತೆ ಸಾಮಾಜಿಕ ಸ್ಥಾನಮಾನಕ್ಕಾಗಿ ತೊರೆಯುತ್ತಿದ್ದಾರೆ. ಬೇರೊಂದು ದರ್ಮದಲ್ಲಿ ತಮಗೆ ಅಂತಹ ಸ್ಥಾನಮಾನ ಸಿಗಬಹುದೆಂಬ ಬಯಕೆಯಿಂದ ಮತಾಂತರ ಮಾಡುತ್ತಾರೆ. ನಮ್ಮ ಸಂವಿದಾನ ಇದಕ್ಕೆ ಸಂಪೂರ್ಣ ಸ್ವತಂತ್ರ್ಯ ನೀಡಿದೆ. ಸಂಘಪರಿವಾರ ಮತಾಂತರಕ್ಕೆ ಕಾರಣವಾದ ಸಾಮಾಜಿಕ, ಆರ್ಥಿಕ ಹಿನ್ನೆಲೆಯನ್ನು ಹುಡುಕುವ ಬದಲು ದಾಳಿ ಮೂಲಕ ಜನರ ದಾರ್ಮಿಕ ಹಕ್ಕಿಗೆ ಬೆದರಿಕೆ ಒಡ್ಡಲು ಮುಂದಾಗಿದೆ.

ಈ ಪ್ರದೇಶದಲ್ಲಿ ಮತಾಂತರ ಚಟುವಟಿಕೆ ನಡೆಯುತ್ತಿದೆ ಎಂದು ಆರೋಪಿಸಿ ಸಂಘಪರಿವಾರ ಕಾನೂನನ್ನು ಕೈಗೆ ತೆಗೆದುಕೊಂಡು ಗೂಂಡಾಪಡೆಗಳಂತೆ ವರ್ತಿಸುತ್ತಿದೆ. ಧರ್ಮಗಳ ನಡುವೆ ಸಂಘರ್ಷ ಸೃಷ್ಟಿಸಲು ಯತ್ನಿಸುತ್ತಿದೆ. ಕೆಲವು ಯುವಕರ ಮನದಲ್ಲಿ ಕೋಮು ವಿಷ ಬೀಜ ಬಿತ್ತಿ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಲು ಪ್ರೇರೇಪಿಸುತ್ತಿದ್ದಾರೆ. ಈ ಕೃತ್ಯದ ಬಗ್ಗೆ ಪೋಲೀಸರಿಗೆ ದೂರು ಸಲ್ಲಿಸಿದ್ದು ಚರ್ಚ್‌ಗಳಿಗೆ ಪೋಲೀಸ್ ಬಂದೂಬಸ್ತ್ ಒದಗಿಸಲಾಗಿದೆ. ಆದರೂ ಇಲ್ಲಿನ ಅಲ್ಪಸಂಖ್ಯಾತರು ಭಯದ ನೆರಳಲ್ಲಿ ಪ್ರಾರ್ಥನೆ ಸಲ್ಲಿಸುವಂತಾಗಿದೆ.

ಕೋಮು ಸೌಹಾರ್ದತೆಗಾಗಿ ಡಿ-23 ರಂದು ಬಹಿರಂಗ ಸಭೆ

ಚರ್ಚ್ ಮೇಲೆ ಸಂಘಪರಿವಾರದ ದಾಳಿಯನ್ನು ಸಿ.ಪಿ.ಐ(ಎಂ) ಬಲವಾಗಿ ಖಂಡಿಸಿದೆ. ಎಲ್ಲಾ ಜಾತ್ಯಾತೀತ ಪಕ್ಷಗಳ ಹಾಗೂ ಸಂಘಸಂಸ್ಥೆಗಳನ್ನು ಒಟ್ಟುಗೂಡಿಸಿ ಹೋರಾಟಕ್ಕೆ ಮುಂದಾಗಿದೆ. ಈ ಸಂಘಸಂಸ್ಥೆಗಳು ಸಭೆ ನಡೆಸಿ ನಾಗರೀಕ ಹಿತರಕ್ಷಣಾ ಸಮಿತಿ ರಚಿಸಿಕೊಂಡು ಹೋರಾಟ ನಡೆಸಲು ತೀರ್ಮಾನಿಸಿದೆ. ಈಗಾಗಲೇ ಜಿಲ್ಲಾದಿಕಾರಿಗಳಿಗೆ ಹಾಗೂ ಪೋಲೀಸ್ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ ಸಮಿತಿ ಚರ್ಚ್ ಮೇಲೆ ದಾಳಿ ನಡೆಸಿದವರ ಮೇಲೆ ಕಠಿಣಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿವೆ. ಕೋಮು ಸೌಹಾರ್ಧತೆಗಾಗಿ ಮತ್ತು ನಾಗರೀಕರ ಹಕ್ಕುರಕ್ಷಣೆಗಾಗಿ ಡಿಸೆಂಬರ್ 23 ರಂದು ಬಹಿರಂಗ ಸಭೆ ನಡೆಸಲು ಸಮಿತಿ ನಿರ್ಧರಿಸಿದೆ.

ಕೃಷ್ಣ ಸರ್ಕಾರದ ದಿವಾಳಿಖೋರ ನೀತಿಗಳ ವಿರುದ್ಧ ಸಿಪಿಐ(ಎಂ) ಜನಾಂದೋಲನಕ್ಕೆ ನಿರ್ಧಾರ

ಇದೇ ಡಿಸೆಂಬರ್ 14,15 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ರಾಜ್ಯ ಸಮಿತಿಯು ತೀವ್ರ ಜನಾಂದೋಲನಕ್ಕೆ ನಿರ್ಧರಿಸಿದೆ.

ಕಾವೇರಿ ವಿವಾದ ಹಾಗೂ ವೀರಪ್ಪನ್ ಹಾವಳಿ ಪ್ರಕರಣಗಳನ್ನು ರಾಜ್ಯ ಸರ್ಕಾರ ಸಮರ್ಪಕವಾಗಿ ನಿಭಾಯಿಸದೆ ತಿಂಗಳುಗಳ ಗಟ್ಟಲೆ ಅದರಲ್ಲಿಯೇ ಮುಳುಗಿ ಜನಸಾಮಾನ್ಯರ ಸಮಸ್ಯೆಗಳು ಬದಿಗೊತ್ತಲ್ಪಟ್ಟಿವೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ. ತೀವ್ರಬರಗಾಲದಿಂದ ಪೀಡಿತರಾದ ಗ್ರಾಮೀಣ ಜನತೆಯ ಸಂಕಷ್ಟಗಳನ್ನು, ಬೆಲೆ ಕುಸಿತದಿಂದ ದಿವಾಳಿಯೇಳುತ್ತಿರುವ ರೇಷ್ಮೆ, ಅಡಿಕೆ, ಕಾಫಿ ಬೆಳೆಗಳ ಸಣ್ಣ ಬೆಳೆಗಾರರ ಸಮಸ್ಯೆಗಳನ್ನು, ಕೈಗಾರಿಕೆಗಳ ಸಂಕಷ್ಟಗಳು, ಮುಚ್ಚುವಿಕೆ ಮತ್ತು ಲೇ ಆಫ್, ರಿಟ್ರೆಂಚ್‌ಮೆಂಟ್, ಕ್ಲೋಶರ್‌ಗಳಿಗೆ ಬಲಿಯಾಗಿ ಕೆಲಸ ಕಳೆದುಕೊಳ್ಳುತ್ತಿರುವ ಹತ್ತಾರು ಸಾವಿರ ಕಾರ್ಮಿಕರ ಸಮಸ್ಯೆಗಳನ್ನು, ರಾಜ್ಯ ಸರ್ಕಾರ ಕಡೆಗಣಿಸಿದೆ. ಬರಗಾಲ ಪರಿಹಾರ ಕಾರ್ಯಕ್ರಮವೆಂದು ಕೇಂದ್ರ ಸರ್ಕಾರ ಸಾಲಗಳ ಮೇಲೆ ಬಡ್ಡಿ ವಸೂಲಾತಿ ಮುಂದೂಡಿಕೆಯ ಒಂದು ವರ್ಷದ ಭಾಗವನ್ನು ಮನ್ನಾ ಮಾಡಿದೆ ಎಂದು ಘೋಷಿಸಿರುವುದು, ಬರಗಾಲ ಪೀಡಿತ ರೈತರ ಸಂಕಷ್ಟಗಳನ್ನೂ ಅಪಹಾಸ್ಯ ಮಾಡಿದಂತಾಗಿದೆ. ಮುಂಗಾರು ವಿಫಲವಾದ ಹಿನ್ನೆಲೆಯಲ್ಲಿ ಸಣ್ಣ ರೈತರೆಲ್ಲರ ಸಂಪೂರ್ಣ ಸಾಲ ಹಾಗೂ ಬಡ್ಡಿ ಮನ್ನಾ ಮಾಡಬೇಕು ಹಾಗೂ ಕೂಲಿಗಾಗಿ ಕಾಳು ಯೋಜನೆ ಜಾರಿ ಮಾಡಬೇಕು ಹಾಗೂ ಈ ಯೋಜನೆಯಲ್ಲಿ ಧಾನ್ಯವನ್ನು ಮಾತ್ರವೇ ಅಲ್ಲದೆ ಅದಕ್ಕೆ ಸರಿಸಮನಾಗಿ ಹಣದ ಭಾಗವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಬೇಕು. ರಾಜ್ಯ ಸರ್ಕಾರವೂ ತನ್ನ ಬಜೆಟ್‌ನಿಂದ ತನ್ನ ಭಾಗವನ್ನು ಬಿಡುಗಡೆ ಮಾಡಬೇಕು, ಎಲ್ಲಾ ಸರ್ಕಾರದ ಕಾಮಗಾರಿಗಳಲ್ಲಿಯೂ ಜೆ.ಸಿ.ಬಿ. ಮೊದಲಾದ ದೈತ್ಯ ಯಂತ್ರಗಳ ಬಳಕೆಯನ್ನು ನಿಲ್ಲಿಸಬೇಕು. ಖಾಸಗಿ ರಂಗದಲ್ಲಿಯೂ ಈ ಯಂತ್ರಗಳ ಬಳಕೆಯನ್ನು ನಿಷೇಧಿಸಬೇಕು ಎಂದು ಒತ್ತಾಯಿಸಿದೆ.

ವಿಶ್ವ ಬ್ಯಾಂಕ್‌ನಿಂದ ಸಂರಚನಾ ಸಾಲ, ದರ ಏರಿಕೆ, ಖಾಸಗೀಕರಣದ ಒತ್ತಡಗಳು ;

ಜನರ ಸಮಸ್ಯೆಗಳನ್ನು ನಿರ್ಲಕ್ಷಿಸಿರುವ ಸರ್ಕಾರ ಅದೇ ಸಮಯದಲ್ಲಿಯೇ ವಿಶ್ವ ಬ್ಯಾಂಕಿನಿಂದ ರಾಜ್ಯ ಸರ್ಕಾರದ ಹಣಕಾಸಿನ ಸಮಸ್ಯೆಗಳ ಪರಿಹಾರಕ್ಕಾಗಿ ಪಡೆದಿರುವ ಸಂರಚನಾ ಸಾಲದ ಷರತ್ತುಗಳನ್ನು ರಾಜ್ಯ ಸರ್ಕಾರ ಒಳಗೊಳಗೆ ಜಾರಿಗೊಳಿಸುತ್ತದೆ. ಈ ಸಂರಚನಾ ಸಾಲ ಷರತ್ತುಗಳನ್ನು ಪೂರ್ಣ ಬಹಿರಂಗಗೊಳಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ. ಈ ಸಾಲದ ಷರತ್ತುಗಳ ಅಂಗವಾಗಿ ನೀರಾವರಿ ದರ ಏರಿಕೆ, ಶಿಕ್ಷಣ ಶುಲ್ಕ ಏರಿಕೆಗಳನ್ನು ಮಾಡಿದೆ. ಬರಗಾಲ ಪೀಡಿತ ರೈತರ ಮೇಲೆ ಏರಿಸಿದ ವಿದ್ಯುತ್ ದರ ವಸೂಲಾತಿಗಾಗಿ ಹಾಗೂ ಮೀಟರ್ ಅಳವಡಿಕೆಗಾಗಿ ಕ್ರಮ ಕೈಗೊಳ್ಳುತ್ತಿದೆ. ವಿದ್ಯುತ್, ಕುಡಿಯುವ ನೀರು, ಸರ್ಕಾರಿ ಕಾರ್ಖಾನೆಗಳನ್ನು ಖಾಸಗೀಕರಣಗೊಳಿಸುವ ಕ್ರಮಗಳನ್ನು ತೀವ್ರಗೊಳಿಸಿದೆ. ಬೆಲೆ ಕುಸಿತದಿಂದ ಅಲ್ಪ ರಕ್ಷಣೆ ನೀಡುತ್ತಿದ್ದ ಉಗ್ರಾಣ ಇಲಾಖೆಯನ್ನು ಮುಚ್ಚುವ ನಿರ್ಧಾರ ರೈತರಿಗೆ ಮತ್ತಷ್ಟು ಕಷ್ಟಗಳನ್ನು ಉಂಟು ಮಾಡಲಿದೆ.

ರಾಜ್ಯ ಸರ್ಕಾರದ ವೈಫಲ್ಯಗಳ ಬಗ್ಗೆ ಪ್ರಚಾರಾಂದೋಲನ - ಜನವರಿ 20-25 ರವರೆಗೆ ಸಭೆ, ಪ್ರತಿಭಟನೆ, ಮೆರವಣಿಗೆಗಳು

ಈ ಹಿನ್ನೆಲೆಯಲ್ಲಿ ಸಾಮಾನ್ಯ ಜನರ ಸಮಸ್ಯೆಗಳನ್ನು ನಿರ್ಲಕ್ಷಿಸಿರುವ ಹಾಗೂ ವಿಶ್ವ ಬ್ಯಾಂಕ್ ಅಡಿಯಾಳಾಗಿ ಕೇಂದ್ರ ಸರ್ಕಾರದ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಯ ಒತ್ತಡಕ್ಕೊಳಗಾಗಿ ರಾಜ್ಯದ ಜನತೆಯ ಮೇಲೆ ದಾಳಿ ನಡೆಸುತ್ತಿರುವ ರಾಜ್ಯ ಸರ್ಕಾರದ ನೀತಿಗಳ ವಿರುದ್ಧ ರಾಜ್ಯಾದಂತ ಜನವರಿ 20-25ರವರೆಗೆ ನೂರಾರು ಸಭೆ, ಮೆರವಣಿಗೆಗಳನ್ನು ನಡೆಸಬೇಕೆಂದು ರಾಜ್ಯ ಸಮಿತಿ ತೀರ್ಮಾನಿಸಿದೆ. ಡಿಸೆಂಬರ್ ಅಂತ್ಯದಲ್ಲಿ ರಾಜ್ಯ ಸರ್ಕಾರದ ವೈಫಲ್ಯಗಳ ಪಟ್ಟಿಯೊಂದನ್ನು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ.

ವಿದ್ಯುತ್ ಸುಧಾರಣೆಗಳ ವಿರುದ್ಧ ಪ್ರಬಲ ಹೋರಾಟ

ವಿದ್ಯುತ್ ರಂಗದಲ್ಲಿ ಖಾಸಗೀಕರಣ, ದರ ಏರಿಕೆ, ಮೀಟರಿಕರಣದ ವಿರುದ್ಧ, ವಿದ್ಯುತ್ ಸರಬರಾಜು ಕಂಪನಿಗಳ ಅಪಾರ ಸಂಪತ್ತನ್ನು ಅಗ್ಗವಾಗಿ ಖಾಸಗಿಯವರಿಗೆ ಹಸ್ತಾಂತರಿಸುವ ಪ್ರಯತ್ನಗಳ ವಿರುದ್ಧ, ರಾಜ್ಯಾದ್ಯಾಂತ ನಗರಗಳ ವಿಸ್ತರಣಗಳಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಹೋರಾಟ ಸಮಿತಿಗಳನ್ನು ರಚಿಸಿ, ನಾಲ್ಕು (4) ಸರಬರಾಜು ಕಂಪನಿಗಳ ಮುಂದೆ ಪ್ರಬಲ ಪ್ರತಿಭಟನೆಗಳನ್ನು ನಡೆಸಲು ನಿರ್ಧರಿಸಲಾಗಿದ. ನಂತರ ಈ ಹೋರಾಟವನ್ನು ತೀವ್ರಗೊಳಿಸಬೇಕೆಂದು ಸಿಪಿಐ(ಎಂ) ರಾಜ್ಯಸಮಿತಿ ತೀರ್ಮಾನಿಸಿದೆ.


ಬಾಬಾ ಬುಡನ್‌ಗಿರಿಯ ಕೋಮುವಾದೀಕರಣ ಹಾಗೂ ಕೋಮು ಗಲಭೆಗಳು - ರಾಜ್ಯ ಸರ್ಕಾರ

ಹುಬ್ಬಳ್ಳಿಯ ಈದ್ಗಾ ಮೈದಾನದ ನಂತರ ಸಂಘ ಪರಿವಾರ, ಬಾಬಾಬುಡಾನ್‌ಗಿರಿಯ ಸೂಫಿ ಸಂತನಿಗೆ ಗಂಟು ಬಿದ್ದಿರುವದು ಅತ್ಯಂತ ಖಂಡನೀಯ. ಒಳ್ಳೆಯ ಆಡಳಿತ ನೀಡಿ ಜನರ ಪ್ರೀತಿಗಳಿಸುವುದರಲ್ಲಿ ವಿಫಲವಾದ ಬಿಜೆಪಿ, ಗುಜರಾತ್ ಚುನಾವಣೆಗಳ ಫಲಿತಾಂಶದ ನಂತರ ರಾಜ್ಯದ ಜನತೆಯ ಮೇಲೆ ಕೋಮುವಾದಿಕರಣದ ಕ್ರೌರ್ಯವನ್ನು ಹರಿಬಿಡಲು ಸನ್ನದ್ಧವಾಗಿದೆ. 3 ಲಕ್ಷ ತ್ರಿಶೂಲಗಳ ಹಂಚಿಕೆ, ರಾಜ್ಯದಲ್ಲಿ 2 ಲಕ್ಷಕ್ಕೂ ಹೆಚ್ಚು ಸ್ಥಳಗಳಲ್ಲಿ ಸಣ್ಣ ದೊಡ್ಡ ಕೋಮು ಗಲಭೆಗಳನ್ನು ಸೃಷ್ಟಿಸಲು ಭಜರಂಗದಳ ವಿಶ್ವ ಹಿಂದೂ ಪರಿಷತ್ ನಡೆಸಿರುವ ಯತ್ನ ಖಂಡನೀಯ. ಈ ಕೋಮುವಾದಿ ಸಂಚುಗಳ ಬಗ್ಗೆ ದೃಢವಾದ ಕ್ರಮಗಳನ್ನು ಕೈಗೊಳ್ಳದೆ ಅವರ ಬೆಳವಣಿಗೆಗೆ ರಾಜ್ಯ ಸರ್ಕಾರ ಇಂಬು ನೀಡುತ್ತಿದೆ ಎಂದು ಸಿ.ಪಿ.ಐ(ಎಂ) ಆರೋಪಿಸಿದೆ. ರಾಜ್ಯದ ಎಲ್ಲಾ ಜಾತ್ಯಾತೀತ ಪಕ್ಷಗಳು ಕೂಡ ಈ ಬೆಳವಣಿಗೆ ಬಗ್ಗೆ ವ್ಯಾಪಕ ಪ್ರಚಾರ ಕೈಗೊಂಡು ಪ್ರತಿರೋಧ ಒಡ್ಡಿ ಆ ಶಕ್ತಿಗಳನ್ನು ಮೂಲೆಗುಂಪು ಮಾಡಬೇಕೆಂದು ಬಯಸುತ್ತದೆ. ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ವಿವರಿಸಿದರು.

ಗುಜರಾತ್ ಚುನಾವಣೆಯಲ್ಲಿ ಬಿಜೆಪಿಯ ಜಯಭೇರಿಯನ್ನು ವಿಭಿನ್ನವಾಗಿ ವ್ಯಾಖ್ಯಾನಿಸಲಾಗುತ್ತಿದೆ. ಕೆಲವರು ಅದನ್ನು ಹಿಂದುತ್ವ ಸಿದ್ಧಾಂತದ ಗೆಲುವು ಎಂದು ವರ್ಣಿಸಿದರೆ ಇನ್ನುಳಿದವರು ಅದನ್ನೊಂದು ರಾಷ್ಟ್ರೀಯ ದುರಂತವೆಂದು ಬಣ್ಣಿಸಿದ್ದಾರೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್‌ಕಿಶನ್‌ಸಿಂಗ್ ಸುರ್ಜಿತ್ ಅವರ ಲೇಖನವೊಂದನ್ನು ಆಧರಿಸಿ ಬರೆಯಲಾದ ಈ ಲೇಖನವು ಗುಜರಾತ್ ಚುನಾವಣಾ ಫಲಿತಾಂಶದ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಶ್ಲೇಷಣೆಯನ್ನು ಒಳಗೊಂಡಿದೆ.

ಗುಜರಾತ್: ದೇಶಕ್ಕೆ ಒಂದು ಎಚ್ಚರಿಕೆಗಂಟೆ

ಬಿಜೆಪಿ ಜನತೆಯಿಂದ ಸಾಕಷ್ಟು ದೂರ ಸರಿದಿತ್ತು. ಅದು ಸೃಷ್ಟಿಸಿದ್ದ ಭ್ರಮೆಗಳು ಕರಗತೊಡಗಿದ್ದವು. ಹಿಂದಿನ ಕಾಂಗ್ರೆಸ್ ಸರ್ಕಾರದ ನೀತಿಗಳಿಗಿಂತ ಎಳ್ಳಷ್ಟೂ ಭಿನ್ನವಲ್ಲದ ಅದರ ಆರ್ಥಿಕ ನೀತಿಗಳಿಂದ ಜನತೆ ಭ್ರಮನಿರಸನಗೊಂಡಿತ್ತು. ಹೇಡಿಯಂತೆ ಅಮೆರಿಕವನ್ನು ಹಿಂಬಾಲಿಸುವ ಅದರ ವಿದೇಶಾಂಗ ನೀತಿಯಿಂದ ದೇಶಪ್ರೇಮಿ ಶಕ್ತಿಗಳು ತಲೆತಗ್ಗಿಸುವಂತಾಗಿತ್ತು. ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಇಡೀ ಆಡಳಿತ ವ್ಯವಸ್ಥೆಯನ್ನು ಕೇಸರೀಕರಣಗೊಳಿಸುವ ಅದರ ಪಿತೂರಿಯಿಂದ ತಟಸ್ಥವಾದಿಗಳೂ ಸಹ ಗಾಬರಿಗೊಳಗಾಗಿದ್ದರು. ಕಳೆದ ನಾಲ್ಕುವರೆ ವರ್ಷಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಅನುಭವಿಸಿದ ಚುನಾವಣಾ ಸೋಲುಗಳು ಬಿಜೆಪಿಯ ಬಗ್ಗೆ ಹೆಚ್ಚುತ್ತಿದ್ದ ಜನತೆಯ ಅತೃಪ್ತಿ ಅಸಮಾಧಾನದ ದಿಕ್ಸೂಚಿಯಂತಿದ್ದವು.



ಉತ್ತರ ಪ್ರದೇಶ, ಉತ್ತರಾಂಚಲ, ಪಂಜಾಬ ಮತ್ತು ಮಣಿಪುರ ರಾಜ್ಯಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಹೀನಾಯ ಸೋಲು ಅನುಭವಿಸಿ ಹೆಚ್ಚು ಕಾಲ ಗತಿಸಿಲ್ಲ. ಪಾಂಡಿಚೇರಿಯಲ್ಲಿ ಎನ್‌ಡಿಎ ಘಟಕ ಪಕ್ಷವಾಗಿರುವ ಡಿಎಂಕೆಗೆ ವಿಶ್ವಾಸಾರ್ಹ ಸಾಧನೆಯನ್ನೇನು ಮಾಡಲಾಗಲಿಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿಯೂ ಹಿಂದೆ ಗೆದ್ದ ಸ್ಥಾನಗಳನ್ನು ಕಳೆದುಕೊಂಡು ಬೇರೆ ಒಂದೇ ಒಂದು ಸ್ಥಾನವನ್ನು ಮಾತ್ರ ದಕ್ಕಿಸಿಕೊಂಡ ಬಿಜೆಪಿಗೆ ತೀವ್ರ ಮುಖಭಂಗವಾಗಿತ್ತು. ಹೀಗೆ ಬಿಜೆಪಿಯು ಹೆಚ್ಚೆಚ್ಚು ಜನತೆಯ ತಿರಸ್ಕಾರಕ್ಕೆ ಒಳಗಾಗುತ್ತಿದ್ದಂತೆ ಎನ್‌ಡಿಎ ಮೈತ್ರಿಕೂಟದಲ್ಲಿ ಬಿರುಕುಗಳು ಕಾಣತೊಡಗಿದ್ದವು.

ಕರಾಳ ಕಾರಸ್ಥಾನಕ್ಕೆ ಕುಮ್ಮಕ್ಕು

ಇಂತಹ ಪರಿಸ್ಥಿತಿಯಲ್ಲಿ ಗುಜರಾತ್ ಚುನಾವಣಾ ಫಲಿತಾಂಶ ಮುದುಡಿದ ತಾವರೆಯನ್ನು ಅರಳಿಸಿದೆ. ಒಂದು ವರ್ಷದ ಹಿಂದೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹೀನಾಯವಾಗಿ ಸೋತು ಸುಣ್ಣವಾದ ಶಕ್ತಿಗಳಿಗೆ ಮರುಜೀವ ಪ್ರಾಪ್ತವಾಗಿದೆ. ಇನ್ನೆರಡು ವರ್ಷಗಳಲ್ಲಿ ದೇಶ ಹಿಂದೂ ರಾಷ್ಟ್ರವಾಗಲಿದೆ ಎಂದು ಘೋಷಿಸುವಷ್ಟು ಧೈರ್ಯ ಈ ಮತಾಂಧ ಶಕ್ತಿಗಳಿಗೆ ಬಂದಿದೆ. ಧಾರ್ಮಿಕ ಅಲ್ಪಸಂಖ್ಯಾತರು ಈ ದೇಶವನ್ನು ಹಿಂದೂ ರಾಷ್ಟ್ರ ಎಂದು ಒಪ್ಪಿಕೊಳ್ಳಬೇಕು ಎಂದು ಇವರು ಬಲವಂತಮಾಡುತ್ತಿದ್ದಾರೆ. ಮತದಾರರನ್ನು ಕೋಮು ನೆಲೆಯಲ್ಲಿ ಒಡೆದ ಗುಜರಾತ್ ಪ್ರಯೋಗವನ್ನು ದೇಶದ ಇತರ ರಾಜ್ಯಗಳಲ್ಲಿ ಪುನರಾವರ್ತಿಸಲಾಗುವುದು ಎಂದು ಬಿಜೆಪಿಯ ಅಖಿಲ ಭಾರತ ಮಟ್ಟದ ಮುಖಂಡರು ಹೇಳತೊಡಗಿದ್ದಾರೆ. ಇತ್ತೀಚೆಗೆ ಚಿಕ್ಕಮಗಳೂರಿಗೆ ಆಗಮಿಸಿದ್ದ ವಿಶ್ವಹಿಂದೂ ಪರಿಷತ್ ಮುಖಂಡ ಪ್ರವೀಣ್ ತೊಗಾಡಿಯಾ ತನ್ನ ಉದ್ದಟತನದ ಮಾತುಗಳನ್ನು ಪುನರುಚ್ಚರಿಸುತ್ತಾ ಕರ್ನಾಟಕ ಚುನಾವಣೆಯಲ್ಲಿಯೂ ಗುಜರಾತ್ ಕಾರ್ಯತಂತ್ರವನ್ನೇ ಬಳಸುವುದಾಗಿ ಪ್ರಕಟಿಸಿದ್ದಾನೆ. ಮುಂದಿನ ವರ್ಷ ಸುಮಾರು 11 ರಾಜ್ಯಗಳಲ್ಲಿ ಚುನಾವಣೆಗಳು ನಡೆಯಲಿರುವುದನ್ನು ಗಮನಿಸಬೇಕಾಗಿದೆ.

ಇವರ ಉದ್ದಟತನದ ಉದ್ಗಾರಗಳು ಎಷ್ಟರ ಮಟ್ಟಿಗೆ ಪ್ರಭಾವ ಬೀರಲಿವೆ ಎಂಬುದನ್ನು ಕೇವಲ ಕಾಲವೇ ಹೇಳಬೇಕು. ಗುಜರಾತ್ ಅಂದರೆ ಭಾರತವಲ್ಲ. ಆದರೆ ಹಿಂದುತ್ವ ಶಕ್ತಿಗಳ ಕರಾಳ ಕಾರಸ್ಥಾನಕ್ಕೆ ಇದರಿಂದಭಾರೀ ಕುಮ್ಮಕ್ಕು ಸಿಕ್ಕಂತಾಗಿದೆ. ಬಿಜೆಪಿ ಕೆಲಮಟ್ಟಿಗಾದರೂ ಲಾಭ ಗಿಟ್ಟಿಸಿಕೊಳ್ಳದೆ ಇರಲಾರದು. ಎನ್‌ಡಿಎ ಒಳಗೆ ಕಾಣಿಸಿಕೊಂಡಿದ್ದ ಬಿರುಕುಗಳು ತಾತ್ಕಾಲಿಕವಾಗಿಯಾದರೂ ಮರೆಯಾಗಬಹುದು. ಉತ್ತರ ಪ್ರದೇಶ ಬಿಜೆಪಿಯಲ್ಲಿ ತಲೆಎತ್ತಿದ ಭಿನ್ನಮತವನ್ನು ದಮನಕಾರಿ ಕ್ರಮಗಳಿಂದ ಈಗಾಗಲೇ ಹತ್ತಿಕ್ಕಲಾಗಿದ್ದು ಗುಜರಾತ್ ಬೆಳವಣಿಗೆಯಿಂದ ಭಿನ್ನಮತೀಯರ ಧ್ವನಿ ಮತ್ತಷ್ಟು ಕ್ಷೀಣಿಸಬಹುದು. ಸಂಘ ಪರಿವಾರದ ಕುಟಿಲ ಕಾರ್ಯವ್ಯೂಹವು ಮಾತ್ರ ವಿಸ್ತಾರಗೊಳ್ಳದೆ ಇರಲಾರದು.

'ಗುಜರಾತ್ ಪ್ರಯೋಗ' ವನ್ನು ದೇಶದ ಉದ್ದಗಲಕ್ಕೂ ವಿಸ್ತರಿಸುವುದು ಅಷ್ಟೇನು ಸರಳ ವಿಷಯವಲ್ಲ. ಹಿಂದುತ್ವ ಶಕ್ತಿಗಳ ಆರ್ಭಟದಿಂದ ಯಾರೂ ಬೆಚ್ಚಿ ಬೀಳಬೇಕಾಗಿಲ್ಲ. ಆದೇ ಸಮಯದಲ್ಲಿ ನಮ್ಮ ಬಹುಮುಖಿ ಸಂಸ್ಕೃತಿಗೆ ಎದುರಾಗಿರುವ ಗಂಡಾಂತರವನ್ನು ನಾವು ಯಾರೂ ಕಡೆಗಣಿಸುವಂತಿಲ್ಲ.

ಗುಜರಾತ್ ಒಂದೇ ಬಿಜೆಪಿ ಆಡಳಿತದ ಅಡಿಯಲ್ಲಿ ಉಳಿದಿದ್ದ ದೊಡ್ಡ ರಾಜ್ಯ. ಆದ್ದರಿಂದಲೇ ಸಂಘ ಪರಿವಾರದ ಎಲ್ಲಾ ಸಂಘಟನೆಗಳು ಬಿಜೆಪಿಗೆ ಸೋಲಾಗದಂತೆ ನೋಡಿಕೊಳ್ಳಲು ತಮ್ಮ ಎಲ್ಲ ಶಕ್ತಿಯನ್ನು ತೊಡಗಿಸಿಕೊಂಡಿದ್ದವು. ಕಳೆದ ಮೂರುವರೆ ದಶಕಗಳಿಂದ ಇಲ್ಲಿ ಬಿಜೆಪಿ ಹಾಗೂ ಈ ಹಿಂದೆ ಜನಸಂಘ ತನ್ನ ಚಟುವಟಿಕೆಗಳನ್ನು ಕೇಂದ್ರೀಕರಿಸುತ್ತಾ ಬಂದಿದೆ. ಸ್ವಾತಂತ್ರ್ಯಾನಂತರ ಅತೀ ಹೆಚ್ಚು ಕೋಮು ಗಲಭೆಗಳು ನಡೆದದ್ದು ಇದೇ ಒಂದು ರಾಜ್ಯದಲ್ಲಿ. ಗುಜರಾತ್ ಫಲಿತಾಂಶವನ್ನು ಇವೆಲ್ಲದರ ಹಿನ್ನೆಲೆಯಲ್ಲಿ ನೋಡಬೇಕಾಗಿದೆ.



ನಿತ್ಯಾನಂದಸ್ವಾಮಿ


ಗೆಲುವಿಗೆ ಕಾರಣ

ಗುಜರಾತ್ ಚುನಾವಣಾ ಫಲಿತಾಂಶವನ್ನು ವಿಶ್ಲೇಷಿಸುವಾಗ ಎಚ್ಚರಿಕೆ ಅವಶ್ಯ. ಪ್ರದೇಶವಾರು ವಿಶ್ಲೇಷಣೆಯಿಂದ ಸತ್ಯಾಂಶ ಹೆಚ್ಚು ಸ್ಪಷ್ಟವಾಗಲಿದೆ. ಮಧ್ಯ ಗುಜರಾತ್‌ನಲ್ಲಿ ಬಿಜೆಪಿಗೆ ಹೆಚ್ಚಿನ ಮಟ್ಟದ ವಿಜಯ ಪ್ರಾಪ್ತವಾಗಿದೆ. ಹಿಂದೆ ಕಾಂಗ್ರೆಸ್ ನೆಲೆಯಾಗಿದ್ದ ಇತ್ತೀಚಿನ ಕೋಮು ಹತ್ಯಾಕಾಂಡದಿಂದ ತತ್ತರಿಸಿದ ಈ ಭಾಗದಲ್ಲಿ ಬಿಜೆಪಿ ಭಾರಿ ಜಯ ಸಾಧಿಸಿದೆ. ಇಲ್ಲಿ ಸುಮಾರು ನಾಲ್ಕು ತಿಂಗಳುಗಳ ಕಾಲ ನಡೆಸಲಾದ ಮುಸ್ಲಿಂ ಜನಾಂಗೀಯ ಹತ್ಯೆ ಬಿಜೆಪಿಗೆ ಲಾಭದಾಯಕವಾಗಿದೆ. ಸರ್ಕಾರ ಪ್ರಾಯೋಜಿತ ಹಿಂಸಾಚಾರದಿಂದ ಮೂಡಿಬಂದ ಮತೀಯ ಧ್ರುವೀಕರಣದಿಂದ ಬಿಜೆಪಿಗೆ ತನ್ನ ಸ್ಥಾನಗಳನ್ನು 117 ರಿಂದ 126 ಕ್ಕೆ ಮತ್ತು ಶೇಕಡಾ 44.81 ಮತಗಳಿಂದ ಶೇ 49.8 ಕ್ಕೆ ವೃದ್ಧಿಸಿಕೊಳ್ಳಲು ಸಾಧ್ಯವಾಗಿದೆ. ಗೋಧ್ರಾ ಘಟನೆಯ ನಂತರ ತಿಂಗಳುಗಟ್ಟಲೆ ಕೋಮು ದಳ್ಳುರಿಗೆ ಬಲಿಯಾದ ಪಂಚಮಹಲ್,

> ಗುಜರಾತಿನಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ರಾಷ್ಟ್ರದ ಬಹುದೊಡ್ಡ ದುರಂತ
>
> - ಎಚ್.ಜಿ.ಬಾಲಕೃಷ್ಣ
> ನಿವೃತ್ತ ನ್ಯಾಯಮೂರ್ತಿ

ಗುಜರಾತ್ ಸೂತ್ರ! ಭವಿಷ್ಯದ ಬೆದರಿಕೆಗಳು

ಉನ್ಮತ್ತ ಕೋಮುವಾದದ ಸಾಮರ್ಥ್ಯ ಮತ್ತು ಅದು ಎಷ್ಟು ಅಪಾಯಕಾರಿ ಎಂಬುದು ಗುಜರಾತ್ ಬೆಳವಣಿಗೆಗಳಿಂದ ಬಹಳ ಸ್ಪಷ್ಟವಾಗಿದೆ. ಮತಪಂಥಗಳ ಆಧಾರದಲ್ಲಿ ಜನತೆ ವಿಭಜನೆಗೊಂಡರೆ, ಬಡತನ, ನಿರುದ್ಯೋಗ, ಹಿಂದುಳಿಯುವಿಕೆ, ಭ್ರಷ್ಟಾಚಾರದಂತಹ ಮೂಲಭೂತ ಸಮಸ್ಯೆಗಳು ಭಾವಾವೇಶದ ಅಲೆಯಲ್ಲಿ ಹೇಗೆ ಕೊಚ್ಚಿಹೋಗುತ್ತವೆ ಎಂಬುದನ್ನು ನಾವು ಈಗ ಗುಜರಾತ್‌ನಲ್ಲಿ ನೋಡಿದ್ದೇವೆ. ಬಿಜೆಪಿಯಂತಹ ಜನವಿರೋಧಿ ಪಕ್ಷಗಳು ಇದನ್ನೇ ಬಯಸುತ್ತವೆ. ಸರ್ಕಾರದ ದುರಾಡಳಿತ ಮತ್ತು ವೈಫಲ್ಯದತ್ತ ಮುಖ ಮಾಡುವ ಜನರ ಗಮನವನ್ನು ಬೇರೆಡೆಗೆ ತಿರುಗಿಸುವಲ್ಲಿ ಅವರ ಅಸಂತೃಪ್ತಿಯ ಆಕ್ರೋಶವನ್ನು ಜನಾಂಗೀಯ ಹತ್ಯೆಯಲ್ಲಿ ಬಳಸಿಕೊಳ್ಳುವಲ್ಲಿ ಗುಜರಾತ್ ಬಿಜೆಪಿ ಯಶಸ್ವಿಯಾಗಿದೆ.



ಗುಜರಾತ್ ಪ್ರಯೋಗವನ್ನು ಇತರ ರಾಜ್ಯಗಳಲ್ಲಿಯೂ ಪುನರಾವರ್ತನೆ ಮಾಡುವ ಬಿಜೆಪಿ ವಕ್ತಾರರ ಉದ್ಗಾರಗಳನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಕೇಂದ್ರದ ಎನ್‌ಡಿಎ ಸರ್ಕಾರದ ವಿಫಲತೆಯ ವಿರುದ್ಧ, ಎಲ್ಲಾ ಜನವಿಭಾಗಗಳನ್ನು ಸಂಕಷ್ಟಕ್ಕೆ ಗುರಿಮಾಡುವ ಅದರ ಆರ್ಥಿಕ ನೀತಿಗಳ ವಿರುದ್ಧ ಬಿಜೆಪಿ ನಿರೀಕ್ಷಿಸುತ್ತಿರುವ ಜನತೆಯ ಅತೃಪ್ತಿಯ ಅಲೆಯನ್ನು ಬೇರೊಂದು ದಿಕ್ಕಿಗೆ ತಿರುಗಿಸಲು ಅದು ಯೋಚನೆಗೆ ಇಳಿದಿದೆ. ಗುಜರಾತ್ ಪ್ರಯೋಗದ ಯಶಸ್ಸು ಸಂಘ ಪರಿವಾರದ ಶಕ್ತಿಗಳಿಗೆ ಹುಚ್ಚು ಹಿಡಿಸಿದೆ. ಮುಂದಿನ ದಿನಗಳಲ್ಲಿ ಮತೀಯ ಹಿಂಸಾಚಾರವನ್ನು ಅದು ತೀವ್ರಗೊಳಿಸಬಹುದು ಎಂಬುದೇ ಆತಂಕದ ವಿಷಯ.


ಡಿಸೆಂಬರ್ 17 ರಂದು ನಡೆದ ಬಿಜೆಪಿ ಪಾರ್ಲಿಮೆಂಟರಿ ಪಕ್ಷದ ಸಭೆಯಲ್ಲಿ ಪ್ರಧಾನಿ, ಉಪಪ್ರಧಾನಿ ಮತ್ತು ಪಕ್ಷದ ಅಧ್ಯಕ್ಷ ನೀಡಿದ ಹೇಳಿಕೆಗಳು ಈ ಆತಂಕವನ್ನು ಹೆಚ್ಚಿಸುತ್ತವೆ. ಪ್ರಧಾನ ಮಂತ್ರಿ ಹೀಗೆಂದರೆಂದು ವರದಿಯಾಗಿದೆ "ಹಲವಾರು ಚುನಾವಣೆಗಳು ಬರುತ್ತಿವೆ. ಇತರ ರಾಜ್ಯಗಳಲ್ಲಿಯೂ 'ಗುಜರಾತ್ ಸೂತ್ರ' ದ ಪ್ರಯೋಗ ಮಾಡುತ್ತೀರಾ ಎಂದು ನಮ್ಮನ್ನು ಕೇಳಲಾಗುತ್ತಿದೆ. ಅವರು 'ಗೋಧ್ರಾ ಸೂತ್ರ' ದ ಪ್ರಯೋಗ ಮಾಡುವರೇ ಎಂದು ನಾವು ಕೇಳುತ್ತೇವೆ" ಈ ತರಹದ ವಾಗಾಡಂಬರದ ಮಾತುಗಳಿಗೆ ವಾಜಪೇಯಿ ಹೆಸರುವಾಸಿ. ಮಿತವಾದಿ ಎಂದುಕೊಳ್ಳುವ ಈತನಿಗೆ ಗೋಧ್ರಾ ಘಟನೆಯ ಹೆಸರಿನಲ್ಲಿ ಅನಂತರ ನಡೆದುದರ ಸ್ವಲ್ಪವೂ ಪಶ್ಚಾತಾಪ ಇಲ್ಲವೆಂಬುದು ಖಚಿತವಾಗುತ್ತದೆ. ವಾಜಪೇಯಿ ಅವರ ಬೇಜವಾಬ್ದಾರಿಯುತ ಮಾತುಗಳು ಅಲ್ಲಿಗೇ ಮುಗಿಯಲಿಲ್ಲ. ಗೋಧ್ರಾ ಘಟನೆಯನ್ನು ಮುಸ್ಲಿಂ ಸಮುದಾಯ ಸಾಕಷ್ಟು ಖಂಡಿಸಲಿಲ್ಲ ಎಂದು ಆರೋಪಿಸಿದ್ದಾರೆ. ಗೋಧ್ರಾ ಹತ್ಯಾಕಾಂಡಕ್ಕೆ ಮುಸಲ್ಮಾನರೆ ಹೊಣೆಗಾರರು ಎಂದು ಹೇಳಿದ್ದಾರೆ. ಗೋಧ್ರಾ ದುಷ್ಕೃತ್ಯ ಯಾರಿಂದ ನಡೆಯಿತು ಎಂಬುದು ಇನ್ನೂ ಖಚಿತವಾಗಿ ನಿರ್ಧಾರವಾಗಿಲ್ಲ. ಒಂದು ವೇಳೆ ಆ ಘಟನೆಗೆ ಕೆಲವು ಮತಾಂಧ ಮುಸಲ್ಮಾನರು ಕಾರಣರಾಗಿದ್ದರು ಎಂದು ಸಾಬೀತಾದರೂ ಕೆಲವರೇ ಮಾಡಿದ ತಪ್ಪಿಗೆ ಇಡೀ ಸಮುದಾಯವನ್ನು ಜವಾಬ್ದಾರರಾಗಿಸುವುದು ಸರ್ವಥಾ ಸಮರ್ಥನೀಯವಾಗದು. ಅನಂತರ ನಡೆದ ಘೋರ ಜನಾಂಗೀಯ ಹತ್ಯೆಯನ್ನು ಸಮರ್ಥಿಸಲು ಗೋಧ್ರಾ ಘಟನೆಯನ್ನು ಬಳಸುತ್ತಿರುವುದು ವಾಜಪೇಯಿ ಅಂತವರ ಮೃಗೀಯ ಮನಸ್ಥಿತಿಯನ್ನು ತೋರಿಸುತ್ತದೆ. ಅವರು ಪ್ರಸ್ತಾಪಿಸುವ 'ಗುಜರಾತ್ ಸೂತ್ರ' ಅಂದರೆ ಅಲ್ಪಸಂಖ್ಯಾತರನ್ನು ನಿರ್ನಾಮ ಮಾಡುವುದಲ್ಲದೇ ಮತ್ತೇನು!



ದಹೋಡ ಮತ್ತು ವಡೋರ ಜಿಲ್ಲೆಗಳಲ್ಲಿ ಬಿಜೆಪಿಗೆ ಅತಿ ಹೆಚ್ಚು ಲಾಭವಾಗಿದೆ. ಇಲ್ಲಿಯ ಒಟ್ಟು 26 ಸ್ಥಾನಗಳಲ್ಲಿ ಒಂದನ್ನೂ ಬಿಡದೆ ಬಿಜೆಪಿ ಅಭ್ಯರ್ಥಿಗಳಲ್ಲಿ ಹೆಚ್ಚಿನವರು ಗೆದ್ದುಕೊಂಡಿದೆ. ಇಲ್ಲಿ ಜಯಶಾಲಿಗಳಾದ ಬಿಜೆಪಿ ಅಭ್ಯರ್ಥಿಗಳಲ್ಲಿ ಹೆಚ್ಚಿನವರುಇಲ್ಲಿ ನಡೆದ ಅಲ್ಪಸಂಖ್ಯಾತರ ನರಮೇಧದ ಪ್ರಮುಖ ಆರೋಪಿಗಳಾಗಿದ್ದಾರೆ. ಗುಜರಾತ್ ಗಲಭೆಯ ಕೇಂದ್ರ ಬಿಂದುವಾಗಿ ದೇಶ ವಿದೇಶಗಳ ಗಮನ ಸೆಳೆದಿದ್ದ ಗೋದ್ರಾ ಕ್ಷೇತ್ರದಲ್ಲಿ ಭಜರಂಗ ದಳದ ಅಖಿಲ ಭಾರತ ಉಪಾಧ್ಯಕ್ಷರೂ, ವಿಶ್ವಹಿಂದೂ ಪರಿಷತ್‌ನ ರಾಜ್ಯ ಉಪಾಧ್ಯಕ್ಷರೂ ಆಗಿದ್ದ ಹರೇಶ್ ಭಟ್ ಬಿಜೆಪಿಯ ಅಭ್ಯರ್ಥಿಯಾಗಿದ್ದರು. ಇಲ್ಲಿ ನಡೆದ ತುರುಸಿನ ಸ್ಪರ್ಧೆಯಲ್ಲಿ ಬಿಜೆಪಿ ಅಭ್ಯರ್ಥಿ ಕಾಂಗ್ರೆಸ್‌ನ ಹಾಲಿ ಶಾಸಕ ರಾಜೇಂದ್ರ ಪಟೇಲರನ್ನು ಹದಿನಾಲ್ಕು


> ಅಲ್ಪಸಂಖ್ಯಾತ ಮುಸ್ಲಿಮರೂ ಸೇರಿದಂತೆ ನೂರಾರು ಮಂದಿಯ ಸಾವಿಗೆ ಕಾರಣವಾದ ಕೋಮು ಹಿಂಸಾಚಾರ ಆರಂಭಿಸಿದ ಬಿಜೆಪಿಗೆ ರಾಜ್ಯದ ಜನತೆ ಮತ ನೀಡಿದುದು ಆಶ್ಚರ್ಯ ಉಂಟು ಮಾಡುತ್ತದೆ.
>
> **- ಜ್ಯೋತಿಬಸು,**
> ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು, ಪ.ಬಂಗಾಳದ ಮಾಜಿ

ಸಾವಿರ ಮತದಅಂತರದಿಂದ ಸೋಲಿಸಿದರು. ಹೀಗೆ ಮಧ್ಯೆ ಗುಜರಾತ್‌ನಒಟ್ಟು 66 ಸ್ಥಾನಗಳಲ್ಲಿ 58 ಸ್ಥಾನಗಳನ್ನು ಬಿಜೆಪಿ ತನ್ನ ಬುಟ್ಟಿಗೆ ಹಾಕಿಕೊಂಡಿದೆ. ದಕ್ಷಿಣ ಗುಜರಾತ್ ಪ್ರದೇಶದಲ್ಲಿ, ಮುಖ್ಯವಾಗಿ ಡಾಂಗ್ ಜಿಲ್ಲೆಯಲ್ಲಿ ಬಿಜೆಪಿಗೆ ಸ್ವಲ್ಪ ಮಟ್ಟಿಗೆ ಲಾಭವಾಗಿದೆ. ಇಲ್ಲಿನ ಕ್ರಿಶ್ಚಿಯನ್ ಧರ್ಮಾವಲಂಬಿಗಳಾದ ಬುಡಕಟ್ಟು ಜನರ ಮೇಲೆ ಸಂಘ ಪರಿವಾರದ ದಾಳಿ ಕೇಂದ್ರೀಕೃತವಾಗಿತ್ತು.



ರಾಜ್ಯದ ಇತರಪ್ರದೇಶಗಳಲ್ಲೂ ಬಿಜೆಪಿಗೆ ಈ ರೀತಿಯ ಗೆಲುವು ಪ್ರಾಪ್ತವಾಗಲಿಲ್ಲ. ಕೋಮು ಗಲಭೆಗಳಿಂದ ಮುಕ್ತವಾಗಿದ್ದ ಕಡೆಗಳಲ್ಲಿ ಬಿಜೆಪಿ ನೆಲಕಚ್ಚಿದೆ. ಉದಾಹರಣೆಗೆ ಸೌರಾಷ್ಟ್ರ ಪ್ರದೇಶದ ಒಟ್ಟು 52 ಸ್ಥಾನಗಳ ಪೈಕಿ 45 ನ್ನು ಕಳೆದ ಚುನಾವಣೆಯಲ್ಲಿ ಬಿಜೆಪಿಗೆದ್ದಿತ್ತು. ಆದರೆ ಈ ಸಲ ಬಿಜೆಪಿಯು ಗಳಿಸಿದ ಸ್ಥಾನಗಳ ಸಂಖ್ಯೆ 37 ಕ್ಕೆ ಇಳಿದಿದೆ. ಇದಕ್ಕೆ ಕಾರಣವೇನು? 'ಹಿಂದೂ' ಪತ್ರಿಕೆಯು ತನ್ನ ಡಿಸೆಂಬರ್ 17 ರ ಸಂಪಾದಕೀಯದಲ್ಲಿ ಗುರುತಿಸಿರುವಂತೆ 'ಇದು ಗೋದ್ರಾ ಘಟನೆ ಯಾವುದೇ ಪ್ರಭಾವ ಬೀರದ ಒಂದು ಪ್ರದೇಶ'. ಕಾಂಗ್ರೆಸ್ಸಿಗೆ ಇದರ ಲಾಭ ಪಡೆಯಲು ಸಾಧ್ಯವಾಗದಿರುವುದು ಬೇರೆ ವಿಷಯ.

ಬಿಜೆಪಿ ಹೀನಾಯಸೋಲು ಅನುಭವಿಸಿದ್ದು ಕಚ್ಛ್ ಜಿಲ್ಲೆ ಮತ್ತು ಅದರ ಸುತ್ತಲನ ಪ್ರದೇಶದಲ್ಲಿ. ಕಚ್ ಜಿಲ್ಲೆಯ ಒಟ್ಟು 8 ಸ್ಥಾನಗಳ ಪೈಕಿ ಕಾಂಗ್ರೆಸ್ ನಾಲ್ಕರಲ್ಲಿ ಜಯಗಳಿಸಿದೆ. ಇಲ್ಲಿ ಬಿಜೆಪಿಯ ಪ್ರಮುಖ ನಾಯಕ ಮಾಜಿ ಮುಖ್ಯಮಂತ್ರಿ ಸುರೇಶ್ ಮೆಹತಾ ಸೋತಿದ್ದಾನೆ. ಸತತವಾಗಿ ಬರಗಾಲಕ್ಕೆ ತುತ್ತಾಗುವ ಪ್ರದೇಶ ಇದಾಗಿದ್ದು ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ಬಿಜೆಪಿ ಸರ್ಕಾರ ಇಲ್ಲಿ ಯಾವುದೇ ಬರ ಪರಿಹಾರ ಕ್ರಮಗಳನ್ನು ಆರಂಭಿಸಿರಲಿಲ್ಲ. ಇಲ್ಲಿ ಸಂಭವಿಸಿದ ಭೀಕರ ಭೂಕಂಪದಲ್ಲಿ ಬದುಕುಳಿದು ನಿರಾಶ್ರಿತರಾದವರ ಗೋಳು ಕೊನೆಗೊಂಡಿರಲಿಲ್ಲ. ಸಮರ್ಪಕ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸುವಲ್ಲಿ ಸಂಪೂರ್ಣ ವಿಫಲವಾಗಿದ್ದ ಬಿಜೆಪಿ ಸರ್ಕಾರದ ವಿರುದ್ಧ ಸಂತ್ರಸ್ತರ ಆಕ್ರೋಶ ಕುದಿಯುತ್ತಿತ್ತು. ಪರಿಹಾರ ಕ್ರಮಗಳಿಗಾಗಿ ಹಣದಕೊರತೆ ಏನೂ ಇರಲಿಲ್ಲ. ದೆಹಲಿಯಲ್ಲಿ ಬಿಜೆಪಿಗೆ ಸಹಾನುಭೂತಿಯುಳ್ಳ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದಿಂದ ಮಾತ್ರವಲ್ಲ ದೇಶದ ವಿದೇಶಗಳ ಅನೇಕ ಸರ್ಕಾರೇತರ ಮೂಲಗಳಿಂದ ಭಾರೀ ಮೊತ್ತದ ನಗದು ಹಾಗೂ ಪರಿಹಾರ ಸಾಮಗ್ರಿಗಳು ಗುಜರಾತ್ ಸರ್ಕಾರ ಪಡೆದಿದೆ. ಪರಿಹಾರ ಮತ್ತು ಪುನರ್ವಸತಿ ಕಾರ್ಯಕ್ಕೆ ಅಗತ್ಯವೆಂದು ಅಂದಾಜು ಮಾಡಲಾಗ 25 ಸಾವಿರ ಕೋಟಿ ರೂ.ಗಳಿಗೂ ಮೀರಿ ಭಾರಿ ಪ್ರಮಾಣದ ಹಣ ರಾಜ್ಯ ಸರ್ಕಾರಕ್ಕೆ ಹರಿದುಬಂದಿತ್ತು. ಇಷ್ಟೊಂದು ಅಗಾಧ ಮೊತ್ತದ ದುರಪಯೋಗವೇ ಈ ಪ್ರದೇಶದಲ್ಲಿ ಬಿಜೆಪಿ


ಕಾಂಗ್ರೆಸ್ ಪಾಠ ಕಲಿತೀತೆ?

> ಜನರಲ್ಲಿ ಕೋಮು ಆಧಾರದ ಮೇಲೆ ಒಡಕುಂಟು ಮಾಡಲು ಭೀತಿ ಹುಟ್ಟಿಸುವಂತಹ ಪ್ರಚಾರವನ್ನು ಬಿಜೆಪಿ ಮಾಡಿತು. ಇದರಿಂದಾಗಿ ಕಾಂ ಗ್ರೆಸ್‌ಗೆ ಸೋಲಾಯಿತು.
>
> **- ಕಮಲ್‌ನಾಥ್**
> ಎಐಸಿಸಿ ಪ್ರಧಾನಕಾರ್ಯದರ್ಶಿ

ಹಿನ್ನಡೆಗೆ ಕಾರಣ. ಪರಿಹಾರ ಮತ್ತು ಪುನರ್ವಸತಿ ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ಸಂಘ ಪರಿವಾರದ ಸಂಘಟನೆಗಳಿಗೆ ವಹಿಸಿಕೊಟ್ಟ ಬಳಿಕ ಮತೀಯ ನೆಲೆಯಲ್ಲಿ ತಾರತಮ್ಯ ಮಾಡಲಾಯಿತು ಮಾತ್ರವಲ್ಲ ಭಾರೀ ಪ್ರಮಾಣ ಭ್ರಷ್ಟಾಚಾರವೂ ನಡೆದುಹೋಯಿತು.

ಮೋದಿ ಮಂತ್ರಿಮಂಡಳದ 9 ಜನ ಮಂತ್ರಿಗಳುಹಾಗೂ ಸ್ಪೀಕರ್ ಸೋತವರಲ್ಲಿ ಪ್ರಮುಖರು. ಇದು ಗಮನಾರ್ಹವಾದ ಸಂಗತಿ. ಬಿಜೆಪಿ ಸರ್ಕಾರದ ವಿರುದ್ಧ ಜನರ ಅತೃಪ್ತಿ ಎಷ್ಟರಮಟ್ಟಿಗೆ ಬೆಳೆದಿತ್ತು ಎಂಬುದನ್ನು ಇದರಿಂದ ಸಾಬೀತಾಗುತ್ತದೆ. ಬಿಜೆಪಿ ಈ ಪರಿಸ್ಥಿತಿಯಲ್ಲಿ ಗೆಲುವು ಸಾಧಿಸಿದ್ದರೆ, ಮತ್ತು ಸ್ಥಾನಗಳನ್ನು ಹೆಚ್ಚಿಸಿ ಕೊಂಡಿದ್ದರೆ ಅದು ಕೇವಲ ಸಂಘ ಪರಿವಾರ ಶಕ್ತಿಗಳು ರಾಜ್ಯದಲ್ಲಿ, ಮುಖ್ಯವಾಗಿ ಮಧ್ಯ ಗುಜರಾತ್ ಪ್ರದೇಶದಲ್ಲಿ ನಡೆಸಿದ ಕೋಮು ಹಿಂಸಾಚಾರವೇ ಕಾರಣ.

ಕಲಿಯಲೇಬೇಕಾದ ಪಾಠಗಳು

ಗುಜರಾತ್ ಚುನಾವಣೆ ಗಳಿಂದ ಇನ್ನುಳಿದ ಶಕ್ತಿಗಳು ಕಲಿಯಬೇಕಾದ ಪಾಠಗಳಿವೆ. ಎಡಪಕ್ಷಗಳಿಗೆ ಅಪಾಯದ ಅರಿವಿತ್ತು. ಬಿಜೆಪಿಗೆ ನೇರವಾದ ಸ್ಪರ್ಧೆಯೊಡ್ಡಲು ಸಾಧ್ಯವಾಗುವಂತೆ ಕಾಂಗ್ರೆಸ್, ರಾಷ್ಟ್ರೀಯ ಕಾಂಗ್ರೆಸ್ ಪಕ್ಷ, ಸಮಾಜವಾದಿ ಪಕ್ಷ ಮತ್ತು ಇತರರು ಒಮ್ಮತಕ್ಕೆ ಬರುವುದರ ಮಹತ್ವವನ್ನು ಮನವರಿಕೆ ಮಾಡಲು ಎಡಪಕ್ಷಗಳು ಪ್ರಯತ್ನಪಟ್ಟವು. ಆದರೆ ಕಾಂಗ್ರೆಸ್ಸಿಗಾಗಲಿ ಇನ್ನುಳಿದವರಿಗಾಗಲಿ ಅದರ ಪ್ರಾಮುಖ್ಯತೆ ಅರ್ಥವಾಗಲೇ ಇಲ್ಲ. ತಮಗೆ ಬೇರೆ ಯಾರ ಬೆಂಬಲವೂ ಬೇಕಿಲ್ಲ ಎಂದು ಕಾಂಗ್ರೆಸ್ ವಕ್ತಾರ ಕಮಲ್‌ನಾಥ ಅಹಮದಾಬಾದ್‌ನಲ್ಲಿ ಹೇಳಿದರು. ಮತಗಳ ವಿಭಜನೆಯಿಂದ ಗೋವಾ ಚುನಾವಣೆಯಲ್ಲಿ ಹೇಗೆ ಬಿಜೆಪಿಗೆ ಲಾಭವಾಯ್ತು ಎಂಬುದುರಿಂದ ಪಾಠ ಕಲಿಯಲು ಯಾರೂ ಮುಂದೆ ಬರಲಿಲ್ಲ. ಮಾತ್ರವಲ್ಲ ಸೀಟುಗಳ ಬಗ್ಗೆ ಅಸಂಬದ್ಧ ಬೇಡಿಕೆಗಳನ್ನು ಮುಂದಿಟ್ಟರು. ಗುಜರಾತ್‌ನಲ್ಲಿ ಕೆಲವು ಸ್ಥಾನಗಳನ್ನು ಗೆಲ್ಲುವುದು ಮುಖ್ಯ ಆಗಿರಲಿಲ್ಲ. ದೇಶದ ಏಕತೆಗೆ ಬಂದಿರುವ ಬೆದರಿಕೆಯನ್ನು ಎದುರಿಸುವ ವಿಷಯದಲ್ಲಿ ಎಲ್ಲ ಸೆಕ್ಯುಲರ್ ಶಕ್ತಿಗಳು ಒಂದಾಗಿವೆ ಎಂದುಜನತೆಗೆ ಹೇಳುವುದು ಮುಖ್ಯವಾಗಿತ್ತು. ಜನತೆಗೆ ಈ ಸಂದೇಶ ತಲುಪಲೇ ಇಲ್ಲ.

ಬಿಜೆಪಿಗೆ ವಿರುದ್ಧವಾಗಿ ಪ್ರಮುಖ ಪಕ್ಷವಾಗಿದ್ದ ಕಾಂಗ್ರೆಸ್ ಗುಜರಾತ್ ಹಿನ್ನಡೆಯಲ್ಲಿ ತನ್ನ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳಲೇಬೇಕು. ಅಷ್ಟು ಮಾತ್ರವಲ್ಲ ಮೃದು ಹಿಂದುತ್ವ ಧೋರಣೆಯನ್ನು ಧರಿಸಿಕೊಂಡ ಕಾಂಗ್ರೆಸ್ ಪಕ್ಷವು ಬಿಜೆಪಿ ಮತ್ತು ಸಂಘ ಪರಿವಾರದಿಂದ ಭಿನ್ನವಾಗಿ ಕಾಣಲೇ ಇಲ್ಲ. ಡಿಸೆಂಬರ್ 17 ರ ಇಂಡಿಯನ್ ಎಕ್ಸ್‌ಪ್ರೆಸ್ ಸಂಪಾದಕೀಯ ಹೇಳಿರುವಂತೆ "ತೋಳದಂತೆ ಕಾಣುವ ಮೇಲ್ ಹೊದಿಕೆ ಧರಿಸಿದರೆ ಕುರಿಮರಿ ಸುರಕ್ಷಿತವಾಗಿರುವುದಿಲ್ಲ". ಕಾಂಗ್ರೆಸ್ ಪಕ್ಷಕ್ಕೆ ಸಮಗ್ರ ಭಾರತದ ಕಲ್ಪನೆಯನ್ನೇ ಸುರಕ್ಷಿತವಾಗಿಸಲು ಸಾಧ್ಯವಾಗಲಿಲ್ಲ.

ಷಾಬಾನು ಪ್ರಕರಣ, ವಿವಾದಗ್ರಸ್ತ ನಿವೇಶನದ ಬಳಿ ಶಿಲಾನ್ಯಾಸಕ್ಕೆ ಅನುಮತಿ ನೀಡಿದ್ದು, 1989 ರಲ್ಲಿ ರಾಜೀವ್ ಗಾಂಧಿ ರಾಮರಾಜ್ಯದ ಸ್ಥಾಪನೆಯ ಘೋಷಣೆಯೊಂದಿಗೆ ಆಯೋಧ್ಯೆಯಿಂದಲೇ ಚುನಾವಣೆ ಪ್ರಾರಂಭಿಸಿದ್ದು, ಬಾಬ್ರಿ ಮಸೀದಿಯ ಗುಮ್ಮಟಗಳು ನೆಲಕ್ಕುರುಳುತ್ತಿದ್ದಾಗ ಕಾಂಗ್ರೆಸ್ ಸರ್ಕಾರ ಕೇವಲ ಪ್ರೇಕ್ಷಕನಂತೆ ನಿಂತಿದ್ದು ಇತ್ಯಾದಿ ಮೃದು ಹಿಂದುತ್ವದ ಕ್ರಮಗಳಿಂದ ಆಗಿರುವ ಅನಾಹುತವನ್ನು ಕಾಂಗ್ರೆಸ್ ಇನ್ನೂ ಒಪ್ಪಿಕೊಂಡಿಲ್ಲ. ಆದ್ದರಿಂದ ಉತ್ತರ ಪ್ರದೇಶದಲ್ಲಿ ಅದು ತನ್ನ ನೆಲೆಯನ್ನು ಕಳೆದುಕೊಂಡಿದ್ದು. ಉತ್ತರ ಪ್ರದೇಶದ ಅನುಭವದಿಂದ ಪಾಠ ಕಲಿಯುವ ಬದಲು ಅದನ್ನೇ ಗುಜರಾತ್‌ನಲ್ಲಿ ಪುನರಾವರ್ತಿಸಲಾಯಿತು. ಮೃದು ಹಿಂದುತ್ವದಿಂದ ಪ್ರಯೋಜನವಾಗದು, 50 ವರ್ಷ ಹಿಂದಿನ ಸ್ವಾತಂತ್ರ್ಯ ಚಳುವಳಿಯ ಆದರ್ಶಗಳನ್ನು, ಆಶಯಗಳನ್ನು ಅದು ಪುನರುಜ್ಜೀವಿತಗೊಳಿಸಬೇಕು, ಹಿಂದುತ್ವದ ವಿರುದ್ಧ ಹಾಗೂ ಎಲ್ಲಾ ವಿಧದ ಕೋಮುವಾದ, ಮೂಲಭೂತವಾದದ ವಿರುದ್ಧ ದೃಢವಾದ ಧೋರಣೆಯಿಂದ ಮಾತ್ರ ಅದು ಜನರ ವಿಶ್ವಾಸ ಗಳಿಸಬಲ್ಲದು.

> ಭಾರತೀಯ ಜನಾತ ಪಕ್ಷ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಒತ್ತಡಕ್ಕೆ ಮಣಿದು ಹಿಂದೂತ್ವವನ್ನು ಕೈಬಿಟ್ಟದ್ದರಿಂದ ಉತ್ತರ ಪ್ರದೇಶ, ಉತ್ತರಾಂಚಲ, ಜಮ್ಮು ಮತ್ತು ಕಾಶ್ಮೀರದ ಚುನಾವಣೆಯಲ್ಲಿ ಸೋಲೊಪ್ಪಿತು. ಆದರೆ ಗುಜರಾತಿನಲ್ಲಿ ಜನಸಂಘದ ತತ್ವಗಳಿಗೆ ಹಿಂದಿರುಗಿದ್ದರಿಂದ ಅಲ್ಲಿ ಭಾರೀ ಜಯಗಳಿಸಿತು.
>
> **- ಪ್ರವೀಣ್ ತೊಗಾಡಿಯಾ,**
> ಅಂತರ್‍ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ವಿಶ್ವಹಿಂದೂ ಪರಿಷತ್

> ಬಿಜೆಪಿ ಮತ್ತು ಸಂಘ ಪರಿವಾರಗಳು ಗುಜರಾತಿನಲ್ಲಿ ತೀವ್ರ ದ್ವೇಷಭಾವವನ್ನು ಬೋಧಿಸಿದವು. ವಿಷವನ್ನು ಹರಡಿದವು. ಭಾಷೆ ಮತ್ತು ಕೃತಿಯ ಮೇಲೆ ಯಾವುದೇ ಹಿಡಿತವಿಲ್ಲದಂತಹ ಶಕ್ತಿಗಳು ಹಾಗೂ ಜನರನ್ನು ನಾವು ಎದುರಿಸಬೇಕಾಯಿತು.
>
> **- ಸೋನಿಯಾಗಾಂಧಿ,**
> ಕಾಂಗ್ರೆಸ್ ಅಧ್ಯಕ್ಷೆ

ಮುಂಬರುವ ದಿನಗಳು ದೇಶಕ್ಕೇ, ಸೆಕ್ಯುಲರ್ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಸಂದಿಗ್ಧ ದಿನಗಳಾಗಲಿವೆ. ದೇಶದ ಏಕತೆ, ಸಮಗ್ರತೆಗೆ ಬಂದಿರುವ ಆಪತ್ತು ಹತ್ತಾರು ಪಟ್ಟು ಅಧಿಕವಾಗಲಿದೆ. ಈ ಶಕ್ತಿಗಳು ಕೋಮುವಾದದ ಬೆದರಿಕೆಯ ವಿರುದ್ಧ ಒಗ್ಗಟ್ಟಿನ ಹೋರಾಟಕ್ಕೆ ಮುಂದಾಗದಿದ್ದರೆ ಹಾನಿಯಾಗುವುದು

> ಗುಜರಾತ್ ಫಲಿತಾಂಶವು ಹಿಂದುತ್ವ ಭಾವನೆಯಿಂದ ದೊರೆತದ್ದಾಗಿದೆ. ಆದರೂ ಇದು ತಾತ್ಕಾಲಿಕ ವಿದ್ಯಮಾನವಾಗಿದ್ದು ಇತರ ರಾಜ್ಯಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.
>
> **- ಎಚ್.ಡಿ.ದೇವೇಗೌಡ**
> ಮಾಜಿ ಪ್ರಧಾನ ಮಂತ್ರಿ


ಅವುಗಳಿಗೆ. ಮತೀಯಶಕ್ತಿಗಳನ್ನು ದೃಢವಾಗಿ ಎದುರಿಸುವುದಲ್ಲದೆ ಪರ್ಯಾಯ ದಾರಿಯಿಲ್ಲ. ಸೆಕ್ಯುಲರಿಸಂ ಅಂದರೆ ಮತಧರ್ಮಗಳ ವಿಷಯದಲ್ಲಿ ಸರ್ಕಾರ ನಿರ್ಲಿಪ್ತವಾಗಿರುವುದು, ರಾಜಕೀಯದಿಂದ ಮತಧರ್ಮವನ್ನು ಪ್ರತ್ಯೇಕಿಸುವುದು ಎಂದು ಜನತೆಗೆ ಮನವರಿಕೆಯಾಗಿಸಬೇಕು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಉದಾರೀಕರಣ, ಜಾಗತೀಕರಮ, ಖಾಸಗೀಕರಣ ನೀತಿಗಳಿಂದ ಜನತೆಯ ಅತೃಪ್ತಿಯ ಕಟ್ಟೆ ಒಡೆಯುತ್ತಿದೆ. ಬಿಜೆಪಿಯೇತರ ಪಕ್ಷಗಳಿಗೆ ಜನತೆಯ ಅತೃಪ್ತಿಯ ಸದುಪಯೋಗ ಮಾಡಿಕೊಳ್ಳಲು ಸಾಧ್ಯವಾದರೆ ಬಿಜೆಪಿಯನ್ನು ಸೋಲಿಸಲು ಸಾಧ್ಯವಾಗಲಿದೆ ಮಾತ್ರವಲ್ಲ ದೇಶದ ಪುನರ್ನಿರ್ಮಾಣದ ಹಾದಿ ತೆರೆದುಕೊಳ್ಳಲಿದೆ.

ಭಾರತ ದೇಶದ ಅಭಿವೃದ್ಧಿಯ ಬೆನ್ನೆಲುಬಾದ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಒಂದೊಂದು ನೆಪವೊಡ್ಡಿ ನಾಶಪಡಿಸಲಾಗುತ್ತಿದೆ. ಕಾಮಧೇನುವಂತಿದ್ದ ಈ ರಂಗವನ್ನು ಸಾವಿರಾರು ಕೋಟಿಯ ಆಸ್ತಿಯನ್ನು ಅಗ್ಗದ ದುಗ್ಗಾಣಿ ಬೆಲೆಗೆ ಮಾರಲಾಗುತ್ತಿದೆ. ಈ ಖೋಟಾ ದೇಶಭಕ್ತರ ಒಂದೊಂದು ಕ್ರಮಗಳು ಭಾರತವನ್ನು ದಟ್ಟ ದಾರಿದ್ರ್ಯದತ್ತ ತಳ್ಳಿ ವಿದೇಶಿ ಕಂಪನಿಗಳೆದುರು ದಯನೀಯ ಗೊಡ್ಡು ಸಲಾಮು ಹಾಕುವ ಪರಿಸ್ಥಿತಿ. ಭಾರತ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಕ್ಕೆ ಗಂಡಾಂತರ ತರುತ್ತಿರುವ ವಾಜಪೇಯಿ ಸರ್ಕಾರದ ಕ್ರಮಗಳ ಕುರಿತು ವಿವರಿಸುವ ಲೇಖನ ಇಲ್ಲಿದೆ.

ಬಾಲಕೃಷ್ಣ ಶೆಟ್ಟಿ

ಸಾರ್ವಜನಿಕ ಉದ್ದಿಮೆ : ಕಾಮಧ

ಬಿಜೆಪಿ ನೇತೃತ್ವದ ಸರಕಾರದ ನೀತಿಯನ್ನು ಗಮನಿಸಿದಾಗ ಹಳೆಯ ಕತೆಯೊಂದು ನೆನಪಿಗೆ ಬರುತ್ತದೆ. 'ಒಂದೂರಿನಲ್ಲಿ ಒಬ್ಬ ಜಿಪುಣನಿದ್ದನಂತೆ. ಅವನು ಕೋಳಿ ಸಾಕಿದ್ದನಂತೆ. ಆ ಕೋಳಿಗಳಲ್ಲಿ ಒಂದು ಕೋಳಿ ಪ್ರತಿದಿನವೂ ಚಿನ್ನದ ಮೊಟ್ಟೆ ಇಡುತ್ತಿತ್ತಂತೆ. ಇದನ್ನು ನೋಡಿದ ಜಿಪುಣನಿಗೆ ದುರಾಸೆ ಹೆಚ್ಚಿತು. ಪ್ರತಿದಿನವೂ ಒಂದೊಂದು ಚಿನ್ನದ ಮೊಟ್ಟೆಯ ಬದಲಿಗೆ ಒಂದೇ ಬಾರಿಗೆ ಎಲ್ಲಾ ಚಿನ್ನದ ಮೊಟ್ಟೆಗಳನ್ನು ತೆಗೆದುಕೊಂಡು ಶ್ರೀಮಂತನಾಗಬೇಕೆಂದು ಬಯಸಿದ. ಹೇಂಟೆಯ ಹೊಟ್ಟೆಯನ್ನು ಎರಡಾಗಿ ಸೀಳಿದ. ಹಲವು ಚಿನ್ನದ ಮೊಟ್ಟೆಗಳ ಬದಲಿಗೆ ಒಂದು ಮೊಟ್ಟೆಯೂ ಸಿಗಲಿಲ್ಲ. ಒಮ್ಮೆಲೆ ಶ್ರೀಮಂತನಾಗಬೇಕೆಂದು ಬಯಸಿದವನಿಗೆ, ದಿನವೂ ಚಿನ್ನದ ಮೊಟ್ಟೆ ನೀಡುತ್ತಿದ್ದ ಕೋಳಿ ಸತ್ತುಹೋಯಿತಲ್ಲಾ ಎಂದು ಚಿಂತೆಪಟ್ಟ. ಆದರೆ ಅದಾಗಲೇ ಕಾಲ ಮುಗಿದು ಹೋಗಿತ್ತು.





ಮಾರುವ ಮಂತ್ರಿ ಶೌರಿ

'ಬನಿಯಾ' ಸಂಸ್ಕೃತಿಯ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮಾಡುತ್ತಿರುವುದೂ ಇದನ್ನೇ. ಸಾರ್ವಜನಿಕ ಉದ್ದಿಮೆಗಳು ಚಿನ್ನದ ಮೊಟ್ಟೆ ಇಡುವ ಕೋಳಿ. ಅದನ್ನು ಸಾಕಿ ಸ[illegible] ಇನ್ನಷ್ಟು ಬೆಳೆಯುವಂತೆ ನೋಡಿಕೊಳ್ಳಬೇಕೆ ವಿನಹ ಖಾಸಗೀಕರಣ ಅದಕ್ಕೆ ಮದ್ದಲ್ಲ. ಭಾರತದ ಪ್ರಥಮ ಪ್ರಧಾನ ಮಂತ್ರಿ ಜವಹರಲಾಲ್ ನೆಹರುರವರು ಸಾರ್ವಜನಿಕ ಉದ್ದಿಮೆಗಳನ್ನು 'ಪ್ರಾರ್ಥನಾ ಮಂದಿರ' ವೆಂದು ಕರೆದರು. ಕರ್ನಾಟಕದವರೇ ಆದ, ಪ್ರಖ್ಯಾತ ಇಂಜಿನಿಯರ್ ಮುದ್ದೇನಹಳ್ಳಿ ವಿಶ್ವೇಶ್ವರಯ್ಯ ನವರು 30 ರ ದಶಕದಲ್ಲಿ ಬರೆದ Planned Economy for India ಎಂಬ ಪುಸ್ತಕದಲ್ಲಿ, "ಜನರ ಜೀವನ ಮಟ್ಟವನ್ನು ಸುಧಾರಿಸಲು ಬ್ರಹತ್ ಕೈಗಾರಿಕೆಗಳನ್ನು ಸ್ಥಾಪಿಸಬೇಕು" ಎಂದು ಪ್ರತಿಪಾದಿಸಿದರು. ಅಷ್ಟೇ ಅಲ್ಲದೆ, "ಬೃಹತ್ ಕೈಗಾರಿಕೆಗಳನ್ನು ಬೆಳೆಸುವುದರಿಂದ ದೇಶದ ರಕ್ಷಣೆಗೆ, ಸರ್ವತೋಮುಖ ಅಭಿವೃದ್ಧಿಗೆ ಸಹಾಯವಾಗುತ್ತದೆ. ವಿದೇಶದಿಂದ ಆಮದು ಮಾಡಿಕೊಳ್ಳುವುದು (ಅಂದಿನ ಕಾಲದಲ್ಲಿ ಇಂಗ್ಲೆಂಡ್)ತಪ್ಪುತ್ತದೆ" ಎಂದರು. ರಷ್ಯದ ಕ್ರಾಂತಿ ಮತ್ತು ಅಲ್ಲಿನ ಸಾರ್ವಜನಿಕ ಉದ್ದಿಮೆಗಳಿಂದ ಪ್ರಭಾವಿತರಾದ ಅವರು, "ರಷ್ಯದಲ್ಲಿದ್ದಂತೆ, ಬೃಹತ್ ಕೈಗಾರಿಕೆಗಳು ರಾಷ್ಟ್ರದ ಬೆಳವಣಿಗೆಗೆ ಹಲವು ವಿಧಗಳಲ್ಲಿ ಸಹಾಯ ಮಾಡುತ್ತದೆ. ಆದ್ದರಿಂದ ಸರಕಾರದ ಸಹಾಯ ಬೇಕಾಗುತ್ತದೆ" ಎಂದು ಪ್ರತಿಪಾದಿಸಿದರು.



ಅಂದಿನ ಮಹಾರಾಜರ ಕಾಲದಲ್ಲಿ ಸರಕಾರಿ ಉದ್ದಿಮೆಗಳಿಗೆ ಪ್ರಾಶಸ್ತ್ಯ ನೀಡಿದ ವಿಶ್ವೇಶ್ವರಯ್ಯನವರು ಭದ್ರಾವತಿಯ ಕಬ್ಬಿಣದ ಕಾರ್ಖಾನೆ, ಮೈಸೂರಿನ ಕನ್ನಂಬಾಡಿ ಆಣೆಕಟ್ಟು ಮುಂತಾದವುಗಳನ್ನು ಸ್ಥಾಪಿಸಲು ಕಾರಣಕರ್ತರಾಗಿ ಮೈಸೂರು ಪ್ರಾಂತದ ಅಭಿವೃದ್ಧಿಗೆ ಕಾರಣರಾದರು. ವಿಶ್ವೇಶ್ವರಯ್ಯ ನವರು ಕಂಡ ಕನಸನ್ನು ನನಸಾಗಿಸುವ ಬದಲಾಗಿ ಇಂದಿನ ಬಿಜೆಪಿ, ಕಾಂಗ್ರೆಸ್ ಸರಕಾರಗಳು ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿವೆ ಸಾರ್ವಜನಿಕ ಉದ್ದಿಮೆಗಳನ್ನು ನಾಶ ಮಾಡುತ್ತಿವೆ.

ಜಾಗತೀಕರಣದ ನಂತರ ಈ ಪ್ರಕ್ರಿಯೆ ಇನ್ನೂ ತೀವ್ರವಾಗಿದೆ. ಅತ್ಯಂತ ಲಾಭದಾಯಕ ವಾಗಿ ನಡೆಯುತ್ತಿದ್ದ IPCL, VSNL, ಬಾಲ್ಕೊ, ಮಾಡರ್ನ್ ಫುಡ್, ಇತ್ಯಾದಿ ಕಂಪ[illegible] ಅತೀ ಕಡಿಮೆ ಬೆಲೆಗೆ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಿದುದು ಸಾಕಷ್ಟು ಚರ್ಚೆಯಾಗಿದೆ. ಇದೀಗ ಪುನಃ ಲಾಭದಾಯಕ ಉದ್ದಿಮೆಗಳಾದ BPCL ಮತ್ತು HPCL ಕಂಪನಿಗಳನ್ನು ಖಾಸಗೀಯವರಿಗೆ ಮಾರಾಟ ಮಾಡಲು ತಯಾರಿ ನಡೆಯುತ್ತಿದೆ. ಸಾರ್ವಜನಿಕರಿಂದ, ವಿವಿಧ ಸಂಘಟನೆಗಳಿಂದ, ಎಡಪಕ್ಷಗಳಿಂದ ತೀವ್ರ ವಿರೋಧ ಬಂದ ನಂತರ 'ಸಧ್ಯಕ್ಕೆ' ಮುಂದಕ್ಕೆ ಹಾಕಲಾಗಿದೆ. ಕೇಂದ್ರ ಸಚಿವ ಸಂಪುಟದ ಮಂತ್ರಿಗಳೇ ಇದನ್ನು ವಿರೋಧಿಸುತ್ತಿದ್ದಾರೆ.

ವಿರೋಧದ ನಾಟಕ?: ಕೇಂದ್ರ ಸಚಿವರುಗಳಾದ ಜಾರ್ಜ್ ಫೆರ್ನಾಂಡಿಸ್, ಮುರಳಿ ಮನೋಹರ್ ಜೋಷಿ, ರಾಮನಾಯಕ್ ಅವರುಗಳು BPCL (ಭಾರತ ಪೆಟ್ರೋಲಿಯಂ ಕಾರ್ಪೋರೇಶನ್ ಲಿಮಿಟೆಡ್)ಮತ್ತು HPCL (ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಶನ್ ಲಿಮಿಟೆಡ್) ಖಾಸಗೀಕರಣಕ್ಕೆ ವಿರೋಧ ವ್ಯಕ್ತಪಡಿಸಿದ್ದು ನಾಟಕ ಎಂಬುದು ಸ್ಪಷ್ಟವಾಗಿದೆ. ಪತ್ರಿಕಾ ಹೇಳಿಕೆಗಳಲ್ಲಿ ಮಾತ್ರ ವಿರೋಧ ಬರುತ್ತಿದೆಯೇ ಹೊರತು ಸಚಿವ ಸಂಪುಟದ ಚರ್ಚೆಯಲ್ಲಿ ವಿರೋಧ ಬರುತ್ತಿಲ್ಲ.

ಇದು ಫ್ಯಾಸಿಸ್ಟ್ ಮಾದರಿಯ ಕಾರ್ಯತಂತ್ರದ ಭಾಗವೇ ಇರಬೇಕು. ಒಂದೆಡೆ ಖಾಸಗೀಕರಣದ ನೀತಿಯನ್ನು ಜಾರಿಗೊಳಿಸುವುದು, ಇನ್ನೊಂದೆಡೆ ವಿರೋಧದ ನಾಟಕವಾಡುವುದು, ಆ ಮೂಲಕ ಪ್ರತಿಭಟಿಸುವವರ ಬಾಯಿ ಮುಚ್ಚಿಸುವುದು - ಈ ತಂತ್ರವನ್ನೇ ಜರ್ಮನಿಯ ಹಿಟ್ಲರ್ ಬಳಸಿದ್ದ.

ಸಾರ್ವಜನಿಕ ಉದ್ದಿಮೆಗಳ ಸಾಧನೆ: ಇಕಾನಾಮಿಕ್ ಟೈಮ್ಸ್ ಪತ್ರಿಕೆಯು ನಡೆಸಿದ ಸರ್ವೆ ಪ್ರಕಾರ 2000-01 ಹಣಕಾಸಿನ ವರ್ಷದ ಅಂತ್ಯದಲ್ಲಿ, ಕೇಂದ್ರ ಸರ್ಕಾರದ ಅಡಿಯಲ್ಲಿರುವ 380 ಕಂಪನಿಗಳ ಒಟ್ಟು ಮಾರಾಟ(Sales) 6,20,000 ಕೋಟಿ ರೂ. ಈ ಕಂಪನಿಗಳು, ಕೇಂದ್ರಸರ್ಕಾರ ಹೂಡಿದ ಬಂಡವಾಳಕ್ಕೆ ಡಿವಿಡೆಂಡ್ ರೂಪದಲ್ಲಿ ರೂ 20550 ಕೋಟಿ ರೂಗಳಿಗೂ ಹೆಚ್ಚು ಹಣವನ್ನು ನೀಡಿದೆ. ಅತೀ ಹೆಚ್ಚು ಡಿವಿಡೆಂಡ್ ನೀಡಿದ 20 ಕಂಪನಿಗಳು ಈ ಕೆಳಗಿನಂತಿವೆ.

ಕೇಂದ್ರ ಸರಕಾರಕ್ಕೆ ಅತಿ ಹೆಚ್ಚು ಡಿವಿಡೆಂಟ್ ನೀಡಿದ 20 ಸಾರ್ವಜನಿಕ ಉದ್ದಿಮೆಗಳು

(2000-01ರ ಅಂತ್ಯದಲ್ಲಿ)	(ಕೋಟಿ ರೂ.ಗಳಲ್ಲಿ)
ಓಎನ್‌ಜಿಸಿ	1729
ಎನ್‌ಟಿಪಿಸಿ	823
ಇಂಡಿಯನ್ ಆಯಿಲ್	815
ಐಸಿಐಸಿಐ	494
ಹೆಚ್.ಪಿ.ಸಿ.ಎಲ್	374
ಜಿ.ಎ.ಐ.ಎಲ್	373
ಐ.ಡಿ.ಬಿ.ಐ	355
ನಾರ್ದರ್ನ್ ಕೋಲ್ ಫೀಲ್ಡ್	337
ಎಂ.ಟಿ.ಎನ್.ಎಲ್	312
ಸ್ಟೇಟ್ ಬ್ಯಾಂಕ್	290
ನ್ಯಾಲ್ಕೊ	284
ಬಿ.ಪಿ.ಸಿ.ಎಲ್	248
ನೈವೇಲಿಗ್ನೈಟ್	191
ಮಹಾನದಿ ಕೋಲ್‌ಫೀಲ್ಡ್	188
ನ್ಯೂಕೊಯರ್ ಪವರ್ ಕೊ	180
ಪವರ್ ಫೈನಾನ್ಸ್ ಕೊ	165
ಆಯಿಲ್ ಇಂಡಿಯಾ	157

ಬೆಂಗಳೂರು ಬೆಳವಣಿಗೆ

ಒಂದೊಮ್ಮೆ ಏಷ್ಯಾ ಖಂಡದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ ಬೆಂಗಳೂರು ಎಂದು ಹೆಸರಾಗಿತ್ತು. ಇದಕ್ಕೆ ಪ್ರಮುಖ ಕಾರಣ ಇಲ್ಲಿನ ಸಾರ್ವಜನಿಕ ಉದ್ದಿಮೆಗಳು. HMT, HAL, BEML , BHEL, ITI , BEL ಮೊದಲಾದ ದೈತ್ಯ ಕೈಗಾರಿಕೆಗಳು 10,000ದಿಂದ 20,000 ಕಾರ್ಮಿಕರನ್ನು ಹೊಂದಿದ್ದವು. ಈ ಕೈಗಾರಿಕೆಗಳ ಬೆಳವಣಿಗೆಯಿಂದಾಗಿ ಅದಕ್ಕೆ ಬಿಡಿ ಭಾಗಗಳನ್ನು ಪೂರೈಸುವ ಅಸಂಖ್ಯಾತ ಸಣ್ಣ ಕೈಗಾರಿಕೆಗಳು ಹುಟ್ಟಿಕೊಂಡವು. ಹಲವಾರು ಆರ್ಥಿಕ ತಜ್ಞರು ಹೇಳುವಂತೆ, ಬೆಂಗಳೂರಿನಲ್ಲಿ ಐ.ಟಿ.ಕೈಗಾರಿಕೆಗಳು ಬೆಳೆಯುವುದಕ್ಕೆ ಇಲ್ಲಿನ ಇಂಜಿನಿಯರಿಂಗ್ ಕೈಗಾರಿಕೆಗಳು ಬಹಳಷ್ಟು ಸಹಕಾರಿಯಾಗಿವೆ.

ಪ್ರತಿಷ್ಠಿತ ಐಟಿಐ, ಹೆಚ್.ಎಂ.ಟಿ ಕೈಗಾರಿಕೆಗಳು ಕುಂಠಿತಗೊಳ್ಳುವುದಕ್ಕೆ ಕೇಂದ್ರ ಸರಕಾರದ ಖಾಸಗೀಕರಣ ನೀತಿ ಕಾರಣ ಎಂಬುದು ಸರ್ವ ವಿದಿತ. ವಾಚು ತಯಾರಿಕೆ ಉದ್ದಿಮೆಯಲ್ಲಿ ಜಗತ್ತಿನಲ್ಲಿಯೇ ಹೆಸರುಗಳಿಸಿದ್ದ ಹೆಚ್.ಎಂ.ಟಿ, ಖಾಸಗೀ ಕ್ಷೇತ್ರದಲ್ಲಿ ಟೈಟಾನ್ ಕಂಪನಿ ಪ್ರವೇಶಿಸುತ್ತಲೇ ಹಿಮ್ಮೆಟ್ಟತೊಡಗಿತು. ಈ ಹಿಮ್ಮೆಟ್ಟುವಿಕೆಗೆ ಟೈಟಾನ್ ಕಂಪನಿ ಒಡ್ಡಿದ ಸ್ಪರ್ಧೆ ಮಾತ್ರ ಕಾರಣವಾಗಿರಲಿಲ್ಲ. ಕೇಂದ್ರ ಸರಕಾರದ ಖಾಸಗೀಕರಣದ ನೀತಿಯ ಜತೆಗೆ ಆಳುವ ಸರಕಾರದ ರಾಜಕಾರಣಿಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಉನ್ನತ ಅಧಿಕಾರಿಗಳು ಹಾಗೂ ಖಾಸಗೀ ಮಾಲಿಕರ ದುಷ್ಟಕೂಟ ತೀವ್ರ ಕೆಲಸ ಮಾಡಿತ್ತು. ಹೆಚ್.ಎಂ.ಟಿ.ಯ ಕೆಲವು ಉನ್ನತ ಅಧಿಕಾರಿಗಳು ಟೈಟಾನ್ ಕಂಪನಿಯನ್ನು ಸೇರಿದ್ದು ಮಾತ್ರವಲ್ಲದೆ, ಉದ್ದೇಶಪೂರಿತವಾಗಿ ಹೆಚ್.ಎಂ.ಟಿಯ ಉತ್ಪಾದನೆಯನ್ನು ಕುಂಠಿತಗೊಳಿಸಲಾಗಿತ್ತು. ಇದನ್ನು ವಿರೋಧ ಮಾಡುವ ಪ್ರಜ್ಞಾವಂತ ನೌಕರರ ಸಂಘಟನೆಗಳು ಅಲ್ಲಿ ಇರಲಿಲ್ಲ.

ಇದೇ ಕಥೆ ಇನ್ನಿತರ ಸಾರ್ವಜನಿಕ ಉದ್ದಿಮೆಗಳಿಗೂ ಅನ್ವಯಿಸುತ್ತದೆ.

ಈ ಲೇಖನ ಬರೆಯುವ ಹೊತ್ತಿನಲ್ಲಿ ಇಂತಹುದೇ ಇನ್ನೊಂದು ಸುದ್ದಿ ಬಂದಿದೆ. ಭಾರತೀಯ ಪೆಟ್ರೋಲಿಯಂ ನಿಗಮ ಪ್ರತಿಷ್ಠಿತ ಸಾರ್ವಜನಿಕ ಉದ್ದಿಮೆ. 2001ರಲ್ಲಿ 13 ನೇ ಅತೀ ದೊಡ್ಡ ಕಂಪನಿ ಎಂದು ಪರಿಗಣಿಸಲಾಗಿದ್ದು ದೇಶದಾದ್ಯಂತ 4562 ಪೆಟ್ರೋಲ್ ಬಂಕ್ ಮತ್ತು 970 ಸೀಮೆ ಎಣ್ಣೆ ಅಧಿಕೃತ ಮಾರಾಟ ಕೇಂದ್ರಗಳನ್ನು ಹೊಂದಿದೆ. 2001-2002ರಲ್ಲಿ ಕಂಪನಿಯ ಲಾಭ ರೂ.850 ಕೋಟಿ. 39,830 ಕೋಟಿ ರೂ. ವ್ಯವಹಾರ ನಡೆಸಿದ, ಈ ಕಂಪನಿ ಡಿವಿಡೆಂಡ್ ರೂಪದಲ್ಲಿ 248 ಕೋಟಿ ರೂ. ಯನ್ನು ಕೇಂದ್ರ ಸರಕಾರಕ್ಕೆ ನೀಡಿದೆ. ಇದಲ್ಲದೆ, ತೆರಿಗೆ ರೂಪದಲ್ಲಿ ಸಾವಿರಾರು ಕೋಟಿ ರೂ. ನೀಡಿದೆ.

ಈ ಕಂಪನಿಯ ಶೇರುಗಳನ್ನು ಖಾಸಗೀಯವರಿಗೆ ಮಾರಾಟ ಮಾಡಲು ನಿರ್ಧರಿಸಲಾಗಿದೆ. ಅಲ್ಲಿನ ಉನ್ನತ ಅಧಿಕಾರಿ, ಪೆಟ್ರೋಲ್ ಬಂಕ್‌ಗಳಲ್ಲಿನ ಚಿಲ್ಲರೆ ಮಾರಾಟ ವ್ಯವಸ್ಥೆಯ ಉಸ್ತುವಾರಿನೋಡಿಕೊಳ್ಳುತ್ತಿದ್ದ, ರಾಜೀವ್ ಚತುರ್ವೇದಿ ಆ ಕಂಪನಿಯನ್ನು ಬಿಟ್ಟು ಖಾಸಗಿ ತೈಲ ಉದ್ದಿಮೆ ರಿಲೈಯನ್ಸ್, ಕಂಪನಿಗೆ ಸೇರಿದ್ದಾರೆ. ರಿಲೈಯನ್ಸ್ ಕಂಪನಿ ಸಧ್ಯದಲ್ಲೇ ತನ್ನದೇ ಆದ ಪೆಟ್ರೋಲ್ ಬಂಕ್‌ಗಳನ್ನು ಸ್ಥಾಪಿಸಲಿದೆ.

ಬಿಪಿಸಿಎಲ್‌ನ ಇನ್ನೊಬ್ಬ ಉನ್ನತ ಅಧಿಕಾರಿ ಕೆ.ಎಸ್.ಚೆಲ್ಲಮ್ ಆಗಾಗಲೇ ರಿಲೈಯನ್ಸ್‌ಗೆ ಸೇರಿದ್ದರು.

ಇದಲ್ಲದೆ, ಇನ್ನೂ ಹಲವಾರು ಸಾರ್ವಜನಿಕ ಉದ್ದಿಮೆಗಳ ಉನ್ನತ ಅಧಿಕಾರಿಗಳು ಖಾಸಗೀ ಬಂಡವಾಳದ ಕಣಜ ರಿಲೈಯನ್ಸ್‌ನ್ನು ಸೇರಿದ್ದಾರೆ ಅಥವಾ ಸೇರಲಿದ್ದಾರೆ. ಆ ಮೂಲಕ ಸಾರ್ವಜನಿಕ ಉದ್ದಿಮೆಗಳು ವ್ಯವಸ್ಥಿತವಾಗಿ ಕುಂಠಿತಗೊಳ್ಳಲಿವೆ.

...ವಿನ ಕತ್ತು ಕುಯ್ಯುವ ಸರ್ಕಾರ

ಬ್ಯಾಂಕ್ ಆಫ್ ಬರೋಡಾ	130
ಬ್ಯಾಂಕ್ ಆಫ್ ಇಂಡಿಯಾ	106
ಕೋಲ್ ಇಂಡಿಯಾ	100

ಅತ್ಯಂತ ಹೆಚ್ಚು ಲಾಭ ಮಾಡುತ್ತಿರುವ 20 ಸಾರ್ವಜನಿಕ ಉದ್ದಿಮೆಗಳು 2002ರಲ್ಲಿ 25,998 ಕೋಟಿ ರೂ. ಲಾಭ ಗಳಿಸಿವೆ. (ಕೋಷ್ಟಕ 2)

ಅತ್ಯಂತ ಹೆಚ್ಚು ಲಾಭಗಳಿಸಿರುವ 20 ಸಾರ್ವಜನಿಕ ಉದ್ದಿಮೆಗಳು

(2000-01ರಲ್ಲಿ) ಕೋಟಿ ರೂ.ಗಳಲ್ಲಿ)

ಓ.ಎನ್.ಜಿ.ಸಿ	5229
ಎನ್.ಟಿ.ಪಿ.ಸಿ	3734
ಇಂಡಿಯನ್ ಆಯಿಲ್	2720
ಸ್ಟೇಟ್ ಬ್ಯಾಂಕ್	1604
ಎಂ.ಟಿ.ಎನ್.ಎಲ್	1557
ನಬಾರ್ಡ್	1310
ಜಿಎಐಎಲ್	1126
ಹೆಚ್.ಪಿ.ಸಿ.ಎಲ್	1088
ನ್ಯೂಕ್ಲಿಯರ್ ಪವರ್ ಕೊ.ಬಿ.ಪಿ.ಸಿ.ಎಲ್	820
ಪವರ್-ಗ್ರಿಡ್ ಕೊ.	742
ನೈವೇಲಿ ಲಿಗ್ನೈಟ್	726
ನಾರ್ದರ್ನ್ ಕೋಲ್ ಫೀಲ್ಡ್	703
ಐ.ಡಿ.ಬಿ.ಐ	691
ನ್ಯಾಲ್ಕೊ	656
ಪವರ್ ಫೈನಾನ್ಸ್ ಕೊ	604
ಎಸ್.ಐ.ಡಿ.ಬಿ.ಐ	477
ಆಯಿಲ್ ಇಂಡಿಯಾ	467
ಪಂಜಾಬ್ ನ್ಯಾಶನಲ್ ಬ್ಯಾಂಕ್	464
ಐಸಿಐಸಿಐ	455

(ಕರ್ನಾಟಕದಲ್ಲಿರುವ ಸಾರ್ವಜನಿಕ ಉದ್ದಿಮೆಗಳಾದ ಬಿಇಎಲ್, ಬಿಹೆಚ್ಇಎಲ್ ಕ್ರಮವಾಗಿ 2001-02 ರಲ್ಲಿ 200 ಕೋಟಿ ಮತ್ತು 474 ಕೋಟಿ ರೂ.ಗಳ ಲಾಭ ಗಳಿಸಿವೆ) ಈ ರಾಜ್ಯದಲ್ಲಿ ಪ್ರಧಾನ ಕಛೇರಿಗಳನ್ನು ಹೊಂದಿರುವ ಕಾರ್ಪೋರೇಶನ್ ಬ್ಯಾಂಕ್ 308 ಕೋಟಿ ರೂ. ಲಾಭ ಗಳಿಸಿದ, ಸಿಂಡಿಕೇಟ್ ಬ್ಯಾಂಕ್ 251 ಕೋಟಿ ಲಾಭ ಗಳಿಸಿದೆ.

ಇದಲ್ಲದೆ ವಿವಿಧ ತೆರಿಗೆಗಳ ರೂಪದಲ್ಲಿ ಈ ಉದ್ದಿಮೆಗಳು ಸಾಕಷ್ಟು ಹಣವನ್ನು ನೀಡಿವೆ. 1996-97ರಲ್ಲಿ ವಿವಿಧ ತೆರಿಗೆ ರೂಪದಲ್ಲಿ 31,932 ಕೋಟಿ ರೂ.ಗಳನ್ನು ಸಾರ್ವಜನಿಕ ಉದ್ದಿಮೆ ನೀಡಿದೆ.

(ಕೋಷ್ಟಕ 3)ಕೋಟಿ ರೂ.ಗಳಲ್ಲಿ

1. ಅಬಕಾರಿ ಸುಂಕ	13,854
2. ಕಾರ್ಪೋರೇಟ್ ತೆರಿಗೆ	4908
3. ಆಮದು ಸುಂಕ	13170

ನಂತರದ ವರ್ಷಗಳಲ್ಲಿ ಇದು ಇನ್ನಷ್ಟು ಹೆಚ್ಚಿದೆ.


ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 1 ಲಕ್ಷ ಕೋಟಿ ರೂ.ಗೂ ಹೆಚ್ಚು ಕೆಟ್ಟ ಸಾಲ (NPA) ಇದ್ದರೂ ವರ್ಷದಿಂದ ವರ್ಷಕ್ಕೆ ಈ ಬ್ಯಾಂಕುಗಳು ಪ್ರಗತಿ ಸಾಧಿಸಿವೆ. 31.3.2002 ರಂದು 21,720 ಕೋಟಿ ರೂ. ಲಾಭ ಸಾಧಿಸಿದ ರಾಷ್ಟ್ರೀಕೃತ ಬ್ಯಾಂಕುಗಳು ಕೆಟ್ಟ ಸಾಲಗಳಿಗೆ 13,611 ಕೋಟಿ ರೂ. ತೆಗೆದಿರಿಸಿದ (privision for NPA) ಬಳಿಕವೂ 8108 ಕೋಟಿ ರೂ. ಲಾಭಗಳಿಸಿದೆ. (ಕೋಷ್ಟಕ 4- ಕೋಟಿ ರೂ.ಗಳಲ್ಲಿ)

ರಾಷ್ಟ್ರೀಕೃತ ಬ್ಯಾಂಕುಗಳು

	31-03-2000	31-3-2001	31.3.2002
ಒಟ್ಟು ಲಾಭ	13042	13793	21720
ಕೆಟ್ಟ ಸಾಲಗಳಿಗೆ ತೆಗೆದಿರಿಸಿದ ಹಣ	7926	9476	13611
ನಿವ್ವಳ ಲಾಭ	5116	4317	8109


380 ಕಂಪನಿಗಳ ಒಟ್ಟು ಆಸ್ತಿ 345790 ಕೋಟಿ ರೂ.ಗಳು. ONGC ಒಂದರಲ್ಲೇ 8000 ಕೋಟಿ ರೂ.ಗಳಿಗೂ ಹೆಚ್ಚು ಮಿಗುತಾಯ ನಿಧಿ ಇದೆ (Surplus). ಸಾರ್ವಜನಿಕ ಉದ್ದಿಮೆಗಳ ಒಟ್ಟು ಉದ್ಯೋಗಿಗಳ ಸಂಖ್ಯೆ 1 ಕೋಟಿಗೂ ಹೆಚ್ಚು. ಅಂದರೆ ಸಾರ್ವಜನಿಕ ಉದ್ದಿಮೆಗಳಿಂದಾಗಿ ಭಾರತ ದೇಶದ ಜನಸಂಖ್ಯೆಯ 100ರಲ್ಲಿ ಐದು ಜನ (ಗಂಡ, ಹೆಂಡತಿ- 3ಜನ ಅವಲಂಬಿತರು) ತೃಪ್ತಿಕರವಾದ ಜೀವನ ನಡೆಸುವಂತಾಯಿತು. ಇದರಿಂದ ದೇಶದ ಆಂತರಿಕ ಮಾರುಕಟ್ಟೆಯೂ ಬೆಳೆಯಲು ಸಹಾಯವಾಯಿತು. ಹಿಂದಿನ ಕೇರಳ ಸರಕಾರದ ಸಾರ್ವಜನಿಕ ಸಂಸ್ಥೆಗಳ ಬ್ಯೂರೊದ (BPE) ಕಾರ್ಯದರ್ಶಿ ಕೆ.ವಿಜಯ ಚಂದ್ರನ್ ಅವರ ಮಾತಿನಲ್ಲಿ ಹೇಳುವುದಾದರೆ, "ಸಾರ್ವಜನಿಕ ಉದ್ದಿಮೆಗಳು ಸಾವಿರಾರು ಉದ್ಯೋಗಗಳನ್ನು ಸೃಷ್ಟಿ ಮಾಡಿದುದು ಮಾತ್ರವಲ್ಲದೆ ಹೊಸ ಜೀವನಶೈಲಿ ಮತ್ತು ಕೆಲಸದ ಹೊಸ ವಾತಾವರಣವನ್ನೇ ಸೃಷ್ಟಿಸಿದವು"(ಮಾರ್ಕ್ಸಿಸ್ಟ್- ಜುಲೈ-ಡಿಸೆಂಬರ್ 1988).

ಸಾರ್ವಜನಿಕ ಉದ್ದಿಮೆಗಳ ಪುನಶ್ಚೇತನ: ಸಾರ್ವಜನಿಕ ಉದ್ದಿಮೆಗಳನ್ನು ಕೊಳ್ಳೆ ಹೊಡೆಯಲು ಬಯಸಿದ ತಿಮಿಂಗಿಲಗಳು, ಇದೊಂದು 'ಬಿಳಿ ಆನೆ' ಎಂದು ಬಣ್ಣಿಸಿದರು. ಈ ಸಾರ್ವಜನಿಕ ಉದ್ದಿಮೆಗಳು ಬಿಳಿ ಆನೆ ಆಗುವಂತಾಗಲು, ಲಾಭ ಕಡಿಮೆ ಆಗಲು, ನಷ್ಟಕ್ಕೆ ದೂಡಲು ತಾವೇ ಕಾರಣರು ಎಂಬುದನ್ನು ಸಾರ್ವಜನಿಕರಿಂದ ಮರೆಮಾಚಿ, ಈ ಉದ್ದಿಮೆಗಳ ವಿರುದ್ಧ ತೀವ್ರ ಅಪಪ್ರಚಾರ ನಡೆಸಿದರು. ಆ ಮೂಲಕ ಖಾಸಗೀಕರಣವೇ ಸರಿಯಾದುದು ಎಂಬಂತೆ ಜನರ ಮನದಲ್ಲಿ ಮೂಡುವಂತೆ ಮಾಡಿ ಸರಕಾರಕ್ಕೆ ಸಹಾಯ ಮಾಡಿದರು.



ಖೋಟಾ ಸ್ವದೇಶಿಗಳು

ಆದರೆ ಹೆಚ್ಚಿನ ಸಂದರ್ಭದಲ್ಲಿ ಸಾರ್ವಜನಿಕ ಉದ್ದಿಮೆಗಳ ನಷ್ಟಕ್ಕೆ ಸರಕಾರದ ನೀತಿ ಮತ್ತು ಖಾಸಗಿ ಮಾಲಿಕರು ಮತ್ತು ಉನ್ನತ ಅಧಿಕಾರಿಗಳ ದುಷ್ಟಕೂಟವೇ ಕಾರಣ ಎಂದು ಈಗಾಗಲೇ ಹೇಳಲಾಗಿದೆ. ಆ ಉದ್ದಿಮೆಗಳನ್ನು ಸಮರ್ಥ, ಪ್ರಾಮಾಣಿಕ ಅಧಿಕಾರಿಗಳ ಮೂಲಕ ನಡೆಸಿದ್ದೇ ಆದಲ್ಲಿ, ನೌಕರ ಸಂಘಟನೆಗಳ ಜತೆ ಅರ್ಥಪೂರ್ಣ ಮಾತುಕತೆ ನಡೆಸಿದಲ್ಲಿ, ಅವುಗಳನ್ನು ಲಾಭದಾಯಕವಾಗಿ ನಡೆಸಲಾಗಿರುವ ಅದೆಷ್ಟೋ ಉದಾಹರಣೆಗಳಿವೆ.



ರಾಷ್ಟ್ರೀಕೃತ ಯುಕೋ ಬ್ಯಾಂಕನ್ನು ಒಮ್ಮೆ ಮುಚ್ಚಬೇಕೆಂದು ಕೇಂದ್ರ ಸರಕಾರ ಬಯಸಿತ್ತು. ನೌಕರ ಸಂಘಟನೆಗಳ ತೀವ್ರ ವಿರೋಧದಿಂದ ಕೈಬಿಡಲಾಗಿತ್ತು. ಅಲ್ಲಿನ ನೌಕರ ಸಂಘಟನೆಗಳ ಜತೆ ಮಾತುಕತೆ ನಡೆಸಿ, ಹಲವಾರು ಕ್ರಮಗಳನ್ನು ಕೈಗೊಂಡ ಬಳಿಕ ಇದೀಗ ಯುಕೊ ಬ್ಯಾಂಕನ್ನು ಲಾಭದಾಯಕವಾಗಿ ನಡೆಸಲು ಸಾಧ್ಯವಾಗುತ್ತಿದೆ.

ಅದೇ ರೀತಿ ಕರ್ನಾಟಕದ ಪ್ರತಿಷ್ಠಿತ ಸಾಮಾನು ಕಾರ್ಖಾನೆಯನ್ನು ಲಾಭಕ್ಕೆ ತರಲು ಸಾಧ್ಯವಾಗಿದೆ.

ರಕ್ಷಣೆಗೆ ಆದ್ಯತೆ: 1956ರಲ್ಲಿ ಕೇಂದ್ರ ಸರಕಾರವು ಜಾರಿಗೆ ತಂದ ಕೈಗಾರಿಕಾ ನೀತಿ ಗೊತ್ತುವಳಿಯಲ್ಲಿ ಸಾರ್ವಜನಿಕ ಉದ್ದಿಮೆಗಳಿಗೆ ಆದ್ಯತೆಯನ್ನು ಘೋಷಿಸಲಾಗಿತ್ತು. 1977ರಲ್ಲಿ, ಮತ್ತು 1980ರಲ್ಲಿ ಇದನ್ನು ಪನರುಚ್ಚರಿಸಲಾಗಿತ್ತು. ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ 1) ಉದ್ಯೋಗವಕಾಶ ಹೆಚ್ಚಳಕ್ಕೆ ದಾರಿ ಮಾಡುವುದು.

2) ಸಣ್ಣ ಕೈಗಾರಿಕೆ ಮತ್ತು ಸಂಬಂಧಿತ ಉದ್ದಿಮೆ(auxillary)ಗಳ ಬೆಳವಣಿಗೆ ಮತ್ತು 3) ಮೂಲಭೂತ ಸೌಕರ್ಯಗಳ ಅಭಿವೃದ್ಧಿ - ಆ ಮೂಲಕ ಇತರ ಕ್ಷೇತ್ರಗಳ ಬೆಳವಣಿಗೆಯನ್ನು ಸಾಧಿಸಬೇಕೆಂದು ಆಶಿಸಲಾಗಿತ್ತು. ಇದು ವಿಶ್ವೇಶ್ವರಯ್ಯನವರು 30ರ ದಶಕದಲ್ಲಿ ಕಂಡ ಕನಸಿಗೆ ಅನುಗುಣವಾಗಿಯೂ ಇತ್ತು.

ಅದರೆ 90ರ ದಶಕದಲ್ಲಿ ಆರಂಭವಾದ ಹೊಸ ಆರ್ಥಿಕ ನೀತಿ ಮೂಲಭೂತ ಆಶಯಗಳನ್ನು ಬುಡಮೇಲುಮಾಡುತ್ತಿದೆ. ಜನ, ಸಮಾಜ, ದೇಶದ ಬೆಳವಣಿಗೆಯ ದೃಷ್ಟಿಕೋನದಿಂದ ದೂರವಾಗಿ, ಖಾಸಗೀ ಕೈಗಾರಿಕಾ ಮನೆತನಗಳ (ವಿದೇಶಿ ಮತ್ತು ದೇಶಿ) ಬೆಳವಣಿಗೆಗಳಿಗೆ ಗಮನ ನೀಡಲಾಗುತ್ತಿದೆ. ಇಂದಿನ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ, ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ಸಾರ್ವಜನಿಕ ಉದ್ದಿಮೆಗಳಲ್ಲಿ ಸುಧಾರಣೆ ಅಗತ್ಯ ಎನ್ನುವುದಕ್ಕೆ ಎರಡು ಮಾತಿಲ್ಲ. ಆದರೆ ಲಾಭದಾಯಕ ಉದ್ದಿಮೆಗಳನ್ನು ಖಾಸಗೀಯವರಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುವುದರ ಮೂಲಕ ಅಲ್ಲ.

ಈ ನಿಟ್ಟಿನಲ್ಲಿ ವಿಮಾ ನಿಗಮದ ನೌಕರ ಸಂಘಟನೆಗಳು ನಡೆಸುತ್ತಿರುವ ಕೆಲಸ ಶ್ಲಾಘನೀಯ. ಅತ್ಯಂತ ಲಾಭದಾಯಕವಾಗಿ ನಡೆಯುತ್ತಿರುವ ಜೀವ ವಿಮಾ ನಿಗಮವನ್ನು ಖಾಸಗೀಕರಣಗೊಳಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಬಯಸಿತ್ತು. ಆಶ್ಚರ್ಯದ ಸಂಗತಿಯೆಂದರೆ ಈ ಖಾಸಗೀಕರಣದ ಮಸೂದೆಯನ್ನು ಹಿಂದೆ ಕಾಂಗ್ರೆಸ್ ಸರಕಾರ ತರಲು ಬಯಸಿದಾಗ ಬಿಜೆಪಿ, ಎಡಪಕ್ಷಗಳೊಂದಿಗೆ ಸೇರಿ ವಿರೋಧಿಸಿತ್ತು. ಆದರೆ 'ಸ್ವದೇಶೀ' ಬಿಜೆಪಿ ಅಧಿಕಾರಕ್ಕೆ ಬಂದ ತಕ್ಷಣ ಜೀವವಿಮೆಯನ್ನು ವಿದೇಶೀಯರಿಗೆ ತೆರೆದಿಡಲು ಕಾತುರವಾಗಿತ್ತು. ಜೀವವಿಮೆಯ, ದೂರದೃಷ್ಟಿ ಉಳ್ಳ ಸಮರಶೀಲ ನೌಕರ ಸಂಘಟನೆಗಳು ವಿವಿಧ ರೀತಿಯ ಹೋರಾಟಗಳನ್ನು ನಡೆಸುತ್ತಾ ಖಾಸಗೀಕರಣವನ್ನು ತಡೆಗಟ್ಟಲು ಇಲ್ಲಿಯವರೆಗೆ ಯಶಸ್ವಿಯಾಗಿದೆ. ಅಲ್ಲಿನ ನೌಕರರು ಮತ್ತು ಸಂಘಟನೆಗಳು ತಮ್ಮ ಸೇವಾಭದ್ರತೆಯನ್ನು ರಕ್ಷಿಸುವುದರ ಜತೆಯಲ್ಲಿ ದೇಶದ ಆರ್ಥಿಕ ಸ್ವಾವಲಂಬನೆಯನ್ನು ರಕ್ಷಿಸುವ ದೇಶಪ್ರೇಮಿ ಕೆಲಸದಲ್ಲಿ ತೊಡಗಿದ್ದಾರೆ ಎಂದರೆ ಅತೀಶಯೋಕ್ತಿಯ ಮಾತಾಗಲಾರದು.

ಈ ನಿಟ್ಟಿನಲ್ಲಿ 1998 ಡಿಸೆಂಬರ್ 10 ಮತ್ತು 11ರಂದು ದೇಶದಾದ್ಯಂತ ನಡೆದ ಸಾರ್ವಜನಿಕ ಉದ್ದಿಮೆಗಳ ನೌಕರರ ಮುಷ್ಕರ ಗಮನಾರ್ಹವಾದುದು. ಈ ಮುಷ್ಕರದ ಸಂದರ್ಭದಲ್ಲಿ ಡಿಸೆಂಬರ್ 11 ರಂದು ವಿವಿಧ ಜನ ಸಮೂಹದ ಸಂಘಟನೆಗಳು ಬೆಂಬಲ ನೀಡಿ ಬಂದ್ ನಡೆಸಿದರು. ಆದರೆ, ಸಮನ್ವಯದ ಕೊರತೆಯ ಕಾರಣದಿಂದ ಬೆಂಗಳೂರಿನಲ್ಲಿ ನೌಕರರು ಮುಷ್ಕರದಲ್ಲಿ ಭಾಗವಹಿಸಲಿಲ್ಲ,ಬದಲಾಗಿ ಪ್ರತಿಭಟನೆ ನಡೆಸಿದರು. ನಂತರ 2000ನೇ ವರ್ಷದ ಜನವರಿ 11 ಮತ್ತು ಕಳೆದ ಏಪ್ರಿಲ್ 16 ರಂದು ನಡೆದ ಮುಷ್ಕರ ಅತ್ಯಂತ ಯಶಸ್ವಿಯಾಗಿದೆ. ಖಾಸಗೀಕರಣ ಮತ್ತು ಬೆಲೆ ಏರಿಕೆ ವಿರುದ್ಧ ನಡೆದ ಈ ಐತಿಹಾಸಿಕ ಮುಷ್ಕರಗಳಿಂದಾಗಿ ಸಾರ್ವಜನಿಕ ಉದ್ದಿಮೆ ಮತ್ತು ಜನ ಸಮೂಹದ ನಡುವೆ ಸ್ವಲ್ಪ ಮಟ್ಟಿನ ಐಕ್ಯತೆ ತರಲು ಸಾಧ್ಯವಾಗಿದೆ. ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಮತ್ತು ರಾಜ್ಯ ಕಾಂಗ್ರೆಸ್ ನೇತೃತ್ವದ ಸರಕಾರದ ನೀತಿಗಳನ್ನು ಬದಲಿಸಬೇಕಾದಲ್ಲಿ ಇಂತಹ ಐಕ್ಯ ಹೋರಾಟಗಳು ಮುಂದುವರೆಯ ಬೇಕಾದುದು ಅವಶ್ಯ.

ಚಿನ್ನದ ಮೊಟ್ಟೆ ನೀಡುವ ಹೇಂಟೆಯನ್ನು ಕೊಲ್ಲುವುದು ಬೇಡ. ಬದಲಾಗಿ ಅದನ್ನು ರಕ್ಷಿಸಿ ಬೆಳೆಸೋಣ.

ONGC

INDIAN OIL

HAL
हिन्दुस्तान एरोनाटिक्स लिमिटेड

ಹತ್ತನೆ ಪಂಚವಾರ್ಷಿಕ ಯೋಜನೆಯ ಪ್ರಹಸನ

ಡಿಸೆಂಬರ್ 21 ರಂದು ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ(NDC) ಯಲ್ಲಿ 10ನೇ ಪಂಚವಾರ್ಷಿಕ ಯೋಜನೆಯ ಕರಡನ್ನು ಮಂಡಿಸಲಾಗಿದೆ. ಈ ಕರಡನ್ನು ಕುರಿತಂತೆ ಅತಿ ಕಡಿಮೆ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಯೋಜನೆಯ ದಿಕ್ಕು ಹಾಗೂ ಗುರಿ ಕುರಿತಂತೆ ಯಾವುದೇ ರೀತಿಯ ಚರ್ಚೆ ಅಥವಾ ಅಭಿಪ್ರಾಯಗಳು ಮಾಧ್ಯಮಗಳಲ್ಲೂ ಮೂಡಿಬಂದಿಲ್ಲ. ಇದೊಂದೆಡೆ ವಾಸ್ತವವಾದರೆ ಇನ್ನೊಂದೆಡೆ 10ನೇ ಯೋಜನೆಯಲ್ಲಿ ಯೋಜಿಸುವಂತದ್ದು ಏನೂ ಕಾಣದಾಗಿದೆ. 1950 ರಲ್ಲಿ ಯೋಜನಾ ಆಯೋಗಕ್ಕೆ ನಿರ್ದಿಷ್ಟಗೊಳಿಸಲಾಗಿದ್ದ ಉದ್ದೇಶಗಳಿಗೆ ವ್ಯತಿರಿಕ್ತವಾಗಿ ಅಂತರ್‍ರಾಷ್ಟ್ರೀಯ ಹಣಕಾಸು ಸಂಸ್ಥೆ (IMF) ಮತ್ತು ವಿಶ್ವಬ್ಯಾಂಕ್ ತತ್ವಗಳಿಗನುಗುಣವಾಗಿ ರೂಪಿತವಾಗಿರುವ ದಸ್ತಾವೇಜು ಇದಾಗಿದೆ. ಆರ್ಥಿಕ ವ್ಯವಸ್ಥೆಯ ನಿರ್ವಹಣೆ ಸಂಪತ್ತಿನ ಹಾಗೂ ಉತ್ಪಾದನಾ ಸಾಧನಗಳ ಕೇಂದ್ರೀಕರಣಕ್ಕೆ ಅನುವುಗೊಳಿಸದಂತೆ, ನಾಗರೀಕರಿಗೆ ಅಗತ್ಯವಾದ ಜೀವನಾವಶ್ಯಕ ಸಾಧನಗಳನ್ನು ಒದಗಿಸಲು, ಬೌತಿಕ ಸಂಪನ್ಮೂಲಗಳ ಮೇಲಿನ ಹಿಡಿತ ಮತ್ತು ಒಡೆತನ ಹಂಚಿಕೆ ಸಮಾಜದ ಸರ್ವರ ಒಳಿತನ್ನು ಸಾಧಿಸುವಂತೆ ಕಾರ್ಯನಿರ್ವಹಿಸಲು ಆಯೋಗವನ್ನು ರಚಿಸಿದ ಗೊತ್ತುವಳಿ ಆಯೋಗವನ್ನು ನಿರ್ದೇಶಿಸಿದೆ. ಆದರೆ 10ನೇ ಯೋಜನೆಯು ತೀವ್ರ ಖಾಸಗೀಕರಣಕ್ಕೆ ಹಾಗೂ ಮಾರುಕಟ್ಟೆ ಸಂಬಂಧಗಳ ಪ್ರಾಬಲ್ಯಕ್ಕೆ ಒತ್ತಾಸೆಯಾಗಿ ನಿಲ್ಲುವ ಮೂಲಕ ಇಡೀಯೋಜನೆಯನ್ನೇ ಒಂದು ಪ್ರಹಸನವನ್ನಾಗಿಸಿದೆ.



ಯೋಜನೆಯು ವಾರ್ಷಿಕ ಬೆಳವಣಿಗೆ ದರ ಶೇ 8 ರಷ್ಟುಸಾಧಿಸಬೇಕೆಂದು ಗುರಿಯಿರಿಸಿದೆ. ಸದ್ಯ ಶೇ 24 ರಷ್ಟಿರುವ ಹೂಡಿಕೆ ಹಾಗೂ ಉಳಿತಾಯ ಪ್ರಮಾಣವನ್ನು ಸಮಾನವಾಗಿ ಶೇ 28.4 ಹಾಗೂ 26.8 ರಷ್ಟಕ್ಕೆ ಏರಿಸಬೇಕಾಗುವ ಕಾರಣ ಸಾಧಿಸಲಸಾಧ್ಯವಾದ ಗುರಿಯನ್ನು ಯೋಜನೆ ಇರಿಸಿದೆ. ಪ್ರತಿಯೊಂದು ನೂತನ ಬಂಡವಾಳ ಹೂಡಿಕೆಯೊಂದಿಗೆ ಸೃಷ್ಟಿಯಾಗುವ ಹುಟ್ಟುವಳಿಯಾದ ಏರಿಕೆಯಾದ ಬಂಡವಾಳ ಹುಟ್ಟುವಳಿ ಪ್ರಮಾಣ (ICOR- Incremental Capital Output ratio) ಸದ್ಯ ಶೇ 4.5 ರಷ್ಟಿದೆ. ಇದನ್ನು ಅವಾಸ್ತವಿಕವಾದ ಶೇ 3.6 ರಷ್ಟಕ್ಕೆ ಇಳಿಸಬೇಕೆಂದು ಕರಡು ಹೇಳುತ್ತದೆ.

ಒಟ್ಟಾರೆ ಸಾರ್ವಜನಿಕ ವಲಯದ ಪಾಲು ರೂ. 15,25,639 ಕೋಟಿ, ಇದರಲ್ಲಿ ರೂ. 6,32,456 ಕೋಟಿ ರಾಜ್ಯದ ಪಾಲು. ಯೋಜನೆಗೆ ಹಣಕಾಸನ್ನು ಸಾಲಗಳ ಮೂಲಕ ಭರಿಸಬೇಕಂತೆ. ರಾಜ್ಯಯೋಜನಾ ನಿಧಿಯ ಶೇ 39 ರಷ್ಟುಸಾಲಗಳ ಮೂಲಕ ಬರುವಂತಹದ್ದು. 2002 ರ ಮಾರ್ಚ್ ವೇಳೆಗೆ ಎಲ್ಲಾ ರಾಜ್ಯ ಸರ್ಕಾರಗಳ ಒಟ್ಟುಸಾಲ 5 ಲಕ್ಷಕೋಟಿ ರೂಪಾಯಿಗಳಾಗಿದೆ. ಈಗಾಗಲೇ ಅನೇಕ ರಾಜ್ಯಗಳು ಸಾಲಗಳಲ್ಲಿ ಮುಳುಗಿ ಉಸಿರುಕಟ್ಟುತ್ತಿರುವಾಗ, ಸಾಲಗಳ ಮೂಲಕ ಹಣಕಾಸು ಜೋಡಿಸಬೇಕೆಂಬ ಗುರಿ ಸಾಧಿಸಲಾಗದು ಎಂಬುದಂತೂ ಖಂಡಿತ.

ಯೋಜನೆಯ ದಸ್ತಾವೇಜಿನ ಪ್ರಕಾರವೇ ಕೃಷಿಯಲ್ಲಿನ ಸಾರ್ವಜನಿಕ ಹೂಡಿಕೆಯಲ್ಲಿ ತೀವ್ರ ಕಡಿತವಾಗಿದೆ. 1993-94 ರಲ್ಲಿ ಶೇ 33 ರಷ್ಟಿದ್ದ ಸಾರ್ವಜನಿಕ ವಲಯದಲ್ಲಿನ ಕೃಷಿಯಲ್ಲಿನ ಒಟ್ಟಾರೆ ಬಂಡವಾಳ ನಿರ್ಮಾಣ 2000-01 ರಲ್ಲಿ ಶೇ 24.2 ರಷ್ಟಕ್ಕೆ ಇಳಿದಿದೆ. ದಸ್ತಾವೇಜು ಒಪ್ಪಿಕೊಂಡಿರುವಂತೆ ಪ್ರಸ್ತುತ ನಿರುದ್ಯೋಗದ ಪ್ರಮಾಣ ಶೇ 9 ರಷ್ಟಿದ್ದು 356 ಲಕ್ಷಕ್ಕೆ ಸಮಾನವಾಗಿದೆ. ಅಂತೆಯೇ 1991-92 ರಲ್ಲಿ ಶೇ 10.3 ರಷ್ಟಿದ್ದ ಆಂತರಿಕ ಉತ್ಪಾದನೆಯ ಪ್ರಮಾಣ 2001-02 ರಲ್ಲಿ ಶೇ 8.6 ರಷ್ಟಕ್ಕೆ ಇಳಿದಿದೆ.

ಸಂಪನ್ಮೂಲ ಸಂಗ್ರಹಣೆಗೆ ಸಿರಿವಂತರ ಮೇಲೆ ಹೆಚ್ಚಿಗೆ ತೆರಿಗೆ ವಿಧಿಸುವ ಬದಲು, ತೆರಿಗೆ ಪ್ರಮಾಣ ಕಡಿಮೆ ಮಾಡುವ ಮೂಲಕ ಹೆಚ್ಚು ಕಂದಾಯ ಸಂಗ್ರಹಿಸಬಹುದೆನ್ನುತ್ತದೆ ಯೋಜನೆಗೆ ಬೇಕಾದ ಹಣಕಾಸನ್ನು ಸಂಗ್ರಹಿಸಲು ಸಾರ್ವಜನಿಕ ವಲಯಗಳಲ್ಲಿನ ಉದಿಮೆಗಳ ಶೇರು ವಿಕ್ರಯ ಮೂಲಕ ವಾರ್ಷಿಕ 16,000 ಕೋಟಿ ರೂಪಾಯಿ ಹಣವನ್ನು ಯೋಜನೆಗೆ ಪಡೆಯುವ ಗುರಿಯಿರಿಸಿದೆ.

ಮುಂದಿನ 5 ವರ್ಷಗಳಲ್ಲಿ 10ನೇ ಪಂಚವಾರ್ಷಿಕ ಯೋಜನೆಯು 5 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯಿರಿಸಿ ಕೊಂಡಿದೆ. ರಾಜ್ಯ ಸರ್ಕಾರಗಳ ನೌಕರರ ಪ್ರಮಾಣ ಕಡಿತ ಮಾಡುವ ಮೂಲಕ ಹಾಗೂ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣದ ಮೂಲಕ ಹೇಗೆ ಉದ್ಯೋಗಗಳನ್ನು ಸೃಷ್ಟಿಸಲಾಗುತ್ತದೆ ಎಂಬುದನ್ನು ಮಾತ್ರ ವಿವರಿಸಿಲ್ಲ. ಕೃಷಿ ಮತ್ತು ಮೂಲಭೂತ ಸೌಕರ್ಯದಲ್ಲಿ ಬಂಡವಾಳ ಹೂಡಿಕೆ ಹೆಚ್ಚಿಸಲು ಖಾಸಗಿ ಹಾಗೂ ಸಾರ್ವಜನಿಕ ವಲಯಗಳ ಪಾಲುದಾರಿಕೆಯ ಬಗ್ಗೆಯು ಕರಡು ಉಲ್ಲೇಖಿಸಿದೆ. ಶಿಕ್ಷಣ ರಂಗದಲ್ಲಿಯೂ ಸಹಾ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿ ಸಾಧಿಸಲು "ಖಾಸಗಿ ವಲಯದೊಂದಿಗೆ ಕ್ರಿಯಾತ್ಮಕ ಪಾಲುದಾರಿಕೆಯನ್ನು' ಪ್ರತಿಪಾದಿಸಿದೆ. ಆ ಮೂಲಕ 6 ರಿಂದ 14 ರ ವಯೋಮಿತಿಯ ಶಾಲೆಯಿಂದ ಹೊರಗೆ ಉಳಿದಿರುವ 4 ಕೋಟಿ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲಾಗುವುದಂತೆ. ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಕೇವಲ ಅಕ್ಕಿ ಮತ್ತು ಗೋಧಿಯನ್ನು ಮಾತ್ರ ತರುವ ಮೂಲಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪುನರ್ ಸಂರಚಿಸಲಾಗುವುದಂತೆ.


10ನೇ ಯೋಜನೆಯು ಭೂಸುಧಾರಣೆಗೆ ಸಂಬಂಧಿಸಿದಂತೆ ಹೆಚ್ಚಿನದೇನನ್ನು ಮಾಡಲಾಗುವುದಿಲ್ಲ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡಿದೆ. ಭೂಹೀನರಿಗೆ ವಿತರಿಸಲು ಯಾವುದೇ ರೀತಿಯ ಭೂಮಿಯನ್ನು ಭೂಮಿತಿ ಕಾನೂನುಗಳ ಮೂಲಕ ಸ್ವಾಧೀನಪಡಿಸಿಕೊಳ್ಳಲು ಹೆಚ್ಚಿನಸಾಧ್ಯತೆಗಳು ಇಲ್ಲ ಎಂದು ಯೋಜನೆಯು ಹೇಳಿದೆ. ಆದರ ಬದಲಾಗಿ ವಿಶ್ವಬ್ಯಾಂಕ್ ನಿರ್ದೇಶನದಂತೆ, ಭೂಹೀನರು ಹಾಗೂ ದಲಿತರಿಗೆ ಭೂಮಿ ಪಡೆಯಲು ಸಾಲಗಳನ್ನು ಒದಗಿಸಬೇಕೆಂದು ಸೂಚಿಸಿದೆ. ಭೂಹೀನರು ಪಡೆದ ಸಾಲಗಳ ಮೇಲಂತು ಬಡ್ಡಿ ಇದ್ದೇ ಇರುತ್ತದೆ. ಯೋಜನಾ ಪ್ರಕ್ರಿಯೆಗಳಿಗೆ ಬಿಜೆಪಿ ನೇತೃತ್ವದ ಸರ್ಕಾರ ಆತುರದ ಅಂತ್ಯ ಸಂಸ್ಕಾರ ನಡೆಸಿದೆ. ಆದರೂ ಸಹಾ ಯೋಜನೆಯೆಂಬ ಭೂತ 10ನೇ ಯೋಜನೆಯ ರೂಪದಲ್ಲಿ ಸುಳಿದಾಡುತ್ತಿದೆ.

ದಿನಕರ್‌ರವರ 'ರಾಜರಹಸ್ಯ'.......

ಪುಟ 12 ರಿಂದ

ಅಪಹರಣ ರಾಜ್ಯದ ಜನರು ಕುಡಿಯುವುದನ್ನು ತಡೆದಿದೆ," ಎನ್ನುತ್ತಾರೆ. ಮುಖ್ಯ ಕಾರ್ಯದರ್ಶಿ ಬಿ.ಕೆ.ಭಟ್ಟಾಚಾರ್ಯ.

"ಬಾರ್‌ಗಳು ಇರಲಿ, ಬಿಡಲಿ ಕುಡುಕರು ಕುಡಿಯುತ್ತಾರೆ. ಲಂಬಾಣಿ ತಾಂಡಾಗಳಲ್ಲಿ ಹೆಚ್ಚು ವ್ಯಾಪಾರವಾಗುತ್ತೆ" ಎಂದು ಉತ್ತರಿಸುತ್ತಾರೆ ಮಲ್ಲಿಕಾರ್ಜುನ ಖರ್ಗೆ.



★ ★ ★

ಇಡೀ ರಾಜ್ಯಕ್ಕೇ ಬೆಂಕಿ ಹಚ್ಚಬಲ್ಲೆ

ನಾನು ಇಡೀ ರಾಜ್ಯಕ್ಕೆ ಬೆಂಕಿ ಹಚ್ಚಬಲ್ಲೆ. ನಮ್ಮ ತಾಳ್ಮೆಗೂ ಒಂದು ಮಿತಿ ಇದೆ' ಸಾ.ರಾ ಗೋವಿಂದು ನನ್ನೆದುರಿಗೆ ನಿಂತು ಅಬ್ಬರಿಸಿ ಹೇಳಿದರು.

'ಬೆಂಕಿಪೆಟ್ಟಿಗೆ ಬೇಕಾ?' ಕೇಳಿದೆ.

ಆಗ ಕಣ್ಮರೆಯಾದ ಆತ ಮತ್ತೆ ಕಾಣಲಿಲ್ಲ?

★ ★ ★

ರಾಜ್‌ಕುಮಾರ್ ಬಿಡುಗಡೆಗೆ ಒತ್ತಾಯಿಸಿ ಮೈಸೂರು ಬ್ಯಾಂಕ್ ಸರ್ಕಲ್ಲಿನಲ್ಲಿ ಕನ್ನಡ ಚಳವಳಿ ಮುಖಂಡ ವಾಟಾಳ್ ನಾಗರಾಜ್ ಧರಣಿ ನಡೆಸಿದರು. ತುಂಬಾ ಜನ ಸೇರುತ್ತಾರೆಂದು ಕೊಂಡಿದ್ದೆವು. ಆದರೆ ಇದ್ದವರೇ ಇಪ್ಪತ್ತೈದು ಜನ. ಅವರನ್ನು ಬಂಧಿಸಿ ಕರೆದುಕೊಂಡು ಹೊರಟರೆ, 'ಸ್ವಲ್ಪ ತಡೆಯಿರಿ. ಟಿ.ವಿ.ಯವರು, ಫೋಟೋಗ್ರಾಫರುಗಳು ಇನ್ನೂ ಬಂದಿಲ್ಲ.' ಎಂದು ಬೇಡಿಕೊಳ್ಳುತ್ತಿದ್ದರು ವಾಟಾಳ್ ನಾಗರಾಜ್.

ಅದು ಯಾವಾಗಲೂ ಅವರು ಮಾಡಿಕೊಂಡು ಬಂದ ಗಿಮಿಕ್ಕು. ಪೋಲೀಸರು ಅರೆಸ್ಟ್ ಮಾಡುತ್ತಿರುವಾಗ ಅವರ ಜತೆ ಬಡಿದಾಡುತ್ತಿರುವಂತೆ ಫೋಟೋ ತೆಗೆಸಿಕೊಂಡು ಟಿ.ವಿ. ಮತ್ತು ಪತ್ರಿಕೆಗಳಲ್ಲಿ ಬರುವಂತೆ ನೋಡಿಕೊಳ್ಳುತ್ತಾರೆ.

★ ★ ★

ಕಳೆದ ಎಂಟು ವರ್ಷಗಳಲ್ಲಿ ವೀರಪ್ಪನ್ ವಿಷಯವನ್ನು ರಾಜ್ಯ ಸರ್ಕಾರಗಳು ಸರಿಯಾಗಿ ನಿಭಾಯಿಸಿಲ್ಲ ಎಂಬ ಸುಪ್ರೀಂ ಕೋರ್ಟಿನ ಹೇಳಿಕೆಯನ್ನು ತಾನು ಸಮರ್ಥಿಸುತ್ತೇನೆ ಎಂದು ಹೇಳಿದ ಜೆ.ಎಚ್.ಪಟೇಲ್, ತಾವೂ ಸಹ ಆ ಎಂಟು ವರ್ಷಗಳಲ್ಲಿ ಆಗಿ ಹೋದ ಮುಖ್ಯಮಂತ್ರಿಗಳ ಸಾಲಿನಲ್ಲಿದ್ದೇನೆ ಎಂಬುದನ್ನೇ ಮರೆತುಬಿಟ್ಟರು.

★ ★ ★

ಹಿರಿಯ ಕಾಂಗ್ರೆಸ್ಸಿಗರ ಚುಚ್ಚು ನುಡಿ, ಟೀಕೆಗಳಿಂದ ಬೇಸತ್ತಿದ್ದ ಎಸ್.ಎಂ.ಕೃಷ್ಣ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಜರುಗಿದ ಗಾಂಧಿ ಜಯಂತಿಯ ಸಂದರ್ಭದಲ್ಲಿ 'ಇದು ತೀರಾ ಸೂಕ್ಷ್ಮ ವಿಚಾರವಾಗಿದ್ದು,ಎಲ್ಲ ಕೋನಗಳಿಂದಲೂ ಗಮನಿಸಬೇಕು.... ಅವಸರದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದಿಲ್ಲ. ಯಾವುದೇ ನಾಯಕನಿಗೆ ಇದು ಅಗ್ನಿ ಪರೀಕ್ಷೆ. ಬೇರೆಯವರನ್ನು ಬಿಡಿ, ಕಾಂಗ್ರೆಸ್ಸಿಗರಾದರೂ ಇದನ್ನು ಅರಿತುಕೊಳ್ಳಬೇಕು' ಎಂದಾಗ ಅವರ ಮನದಲ್ಲಿದ್ದವರು ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಮತ್ತು ಸಿ.ಕೆ.ಜಾಫರ್ ಷರೀಫ್.

★ ★ ★

ಬೆಂಗಳೂರಿನಲ್ಲಿ ಕೃಷ್ಣ ಪತ್ರಿಕಾಗೋಷ್ಠಿ ಕರೆದು "ಇನ್ನು ಬಿಡುಗಡೆ ತಡವಾಗಲಾರದು. ನನಗೆ ದೂರದಲ್ಲೆಲ್ಲೋ ಬೆಳಕು ಕಾಣತೊಡಗಿದೆ" ಎಂದು ಹೇಳಿದರು.

ಯಾರು ಚಮಕಿಸುತ್ತಿದ್ದ ಬೆಳಕು ಅದು? ಭಾನುವಾ? ನೆಡುಮಾರನ್ ಅವರಾ?

ಭಾನು ಮಟ್ಟಿಗೆ ಇದು ಜೀವನದಲ್ಲಿ ಶಾಶ್ವತ ನೆಲೆ ಕಂಡುಕೊಳ್ಳಬೇಕಾದ ಕಾಲ. ಆಗಲೇ ವಯಸ್ಸಾಗುತ್ತಿದೆ. ಮೊದಲ ಮದುವೆ ಮುರಿದು ಬಿದ್ದಿದೆ. ಗ್ರಾನೈಟ್ ವ್ಯಾಪಾರವೂ ಚೆನ್ನಾಗಿಲ್ಲ. ರಾಮಲಿಂಗಮ್ ಅವರ ಮಗ ರಾಂಕುಮಾರ್‌ನನ್ನು ಕಳೆದುಕೊಳ್ಳುವುದಕ್ಕೆ ಆಕೆ ಸಿದ್ಧವಿಲ್ಲ. ಇದು ಕಳೆದುಕೊಳ್ಳುವ ವಯಸ್ಸೂ ಅಲ್ಲ. ರಿಸರ್ವ್ ಬ್ಯಾಂಕ್‌ನ ಹುದ್ದೆಯ ಅವಧಿ ಮುಗಿಸಿಕೊಂಡು ಬೆಂಗಳೂರಿಗೆ ಹಿಂತಿರುಗಿರುವ ರಾಮಲಿಂಗಮ್‌ಗೆ, ತಮ್ಮ ಮಗ ಭಾನುವಿನೊಂದಿಗೆ ಸಂಬಂಧವಿರಿಸಿ ಕೊಂಡಿರುವುದು ಇಷ್ಟವಿಲ್ಲ. ಭಾನುವಿಗೆ ಇದು ಗೊತ್ತಿದೆ. ರಾಜ್ ಪ್ರಕರಣದಲ್ಲಿ ಎಸ್.ಎಂ. ಕೃಷ್ಣರಿಂದ ದೊಡ್ಡ ಮೊತ್ತದ ಹಣ ಸಿಕ್ಕಿಬಿಟ್ಟರೆ ರಾಂಕುಮಾರ್‌ನನ್ನು ಶಾಶ್ವತವಾಗಿ ತನ್ನೊಂದಿಗಿರುವಂತೆ ಮಾಡಿಕೊಳ್ಳಬಹುದು. ಅವಳಿಗೊಂದು ಅಂತಸ್ತು - ಗೌರವ ಎರಡೂ ಸಿಕ್ಕಂತಾಗುತ್ತದೆ. ಇದು ಆಕೆಯ ಲೆಕ್ಕಾಚಾರ.

ಅವಳು ತನ್ನ ಕ್ವಾರಿಯ ಪಕ್ಕದಲ್ಲೇ ಕ್ವಾರಿ ಹೊಂದಿರುವ ಕೊಳತೂರು ಮಣಿಯೊಂದಿಗೆ ಉತ್ತಮ ಸಂಬಂಧವಿರುವಾಕೆ. ಕೊಳತೂರು ಮಣಿ ತಮಿಳು ರಾಷ್ಟ್ರೀಯ ವಾದದ ಅಗ್ರನಾಯಕ. ಅವನಿಗೆ ಮೈಸೂರು ಜೈಲಿನಲ್ಲಿರುವ ಟಾಡಾ ಬಂಧಿಗಳ ಚಿಂತೆ. ಆದರೆ ಎಸ್.ಎಂ.ಕೃಷ್ಣ ಅವರಿಗೆ ಕೊಳತೂರು ಮಣಿಯನ್ನು ಭೇಟಿಯಾಗುವ ತವಕ! ಸದರಿ ಕೊಳತೂರು ಮಣಿ ಒಂದು ಕಾಲಕ್ಕೆ ಪೆರಿಯಾರ್ ಕಟ್ಟಿದ ದ್ರಾವಿಡ ಕಳಗಂ ಪಕ್ಷದ ಕಾರ್ಯಕರ್ತ. ಶುದ್ಧ ನಾಸ್ತಿಕ. ಅವರನು ವೀರಪ್ಪನ್ ಚಟುವಟಿಕೆಗಳ ಹಿಂದಿನ "ಮಿದುಳೇನಲ್ಲ' ಅಂಥ ಚಟುವಟಿಕೆಗಳಿಗೆ ದೊಡ್ಡ ಮಿದುಳೂ ಬೇಕಾಗಿಲ್ಲ. ವೀರಪ್ಪನ್‌ಗೆ ಕೆಲವು ಸಾಮಗ್ರಿಗಳು ಬೇಕು. ಸ್ಥಳೀಯ ನಾಯಕ ಕೊಳತೂರು ಮಣಿ ಆ ಸಾಮಗ್ರಿಗಳನ್ನು ಸರಬರಾಜು ಮಾಡಿದ. ವೀರಪ್ಪನ್ ಅದಕ್ಕೆ ಹಣ ಕೊಟ್ಟ, ಮಣಿಯ ರಾಜಕೀಯ ಚಟುವಟಿಕೆಗಳಿಗೂ ಕೊಟ್ಟ. ಶ್ರೀಲಂಕಾದಲ್ಲಿ ತಮಿಳರಿಗೆ ವ್ಯಾಪಕವಾಗಿ ತೊಂದರೆಗಳಾದಾಗ ವಿ.ಗೋಪಾಲಸ್ವಾಮಿ ಅಲಿಯಾಸ್ ವೈಕೊ, ನೆಡುಮಾರನ್ ಮುಂತಾದವರು ತಮ್ಮ ರಾಜಕೀಯ ಭವಿಷ್ಯವನ್ನೇ ಪಣಕ್ಕಿಟ್ಟು ಲಂಕಾದ ತಮಿಳರಿಗಾಗಿ ಹೋರಾಡಿದರು. ಅವರನ್ನು ಬೆಂಬಲಿಸಿ ಬರಮಾಡಿ ಕೊಂಡರು. ಕೊಳತೂರು ಮಣಿ ಆ ಮಟ್ಟದ ನಾಯಕನಲ್ಲ. ಅವರಿಗಿರುವಬುದ್ಧಿವಂತಿಕೆಯಾಗಲೀ ರಾಜಕೀಯ ಪ್ರಬುದ್ಧತೆಯಾಗಲಿ ಇವನಿಗಿಲ್ಲ. ಒಮ್ಮೆ ಎಲ್‌ಟಿಟಿಇ ಯನ್ನು ಬೆಂಬಲಿಸಿ ಜೈಲು ಕಂಡಿದ್ದಾನೆ.

ಇಂಥ ನಾಸ್ತಿಕನನ್ನು ಪರಮ ಆಸ್ತಿಕರಾದ ಕೃಷ್ಣ ಸಂಭಾಳಿಸುತ್ತಾರಾ? ಏನೋ?



ಅಯೋಧ್ಯಾ ಕಾಂಡ-ಹತ್ತು ವರ್ಷಗಳು

ಅಯೋಧ್ಯಾಕಾಂಡಜದ ನಂತರದ ಹತ್ತು ವರ್ಷಗಳಲ್ಲಿ ಆದ ಬೆಳವಣಿಗೆಗಳ ಬಗ್ಗೆ ಹಲವು ಪ್ರಗತಿಪರ ಚಿಂತಕರು ಮಂಥನ ನಡೆಸಿದ್ದಾರೆ. ಈ ಹತ್ತು ವರ್ಷಗಳಲ್ಲಿ ನಡೆದ ಘಟನೆಗಳ ವಿಶ್ಲೇಷಣೆ ನಡೆಸಿದ್ದಾರೆ. ಹಿರಿಯ ಕಮ್ಯುನಿಸ್ಟ್ ಮತ್ತು ಪಾರ್ಲಿಮೆಂಟರಿ ಮುತ್ಸದಿ ಪ್ರೊ. ಹಿರೇನ್ ಮುಖರ್ಜಿ, ಪ್ರಸಿದ್ಧ ಇತಿಹಾಸಕಾರ ಪ್ರೊ. ಇರ್‌ಫಾನ್ ಹಬೀಬ್, ಪ್ರಸಿದ್ಧ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್‌ರವರ ಅಯೋಧ್ಯಾ ಕಾಂಡದ ದಶವಾರ್ಷಿಕದ ಸಂದರ್ಭದಲ್ಲಿ ಅನಿಸಿಕೆಗಳ ಆಯ್ದ ಭಾಗಗಳನ್ನು ಇಲ್ಲಿ ಕೊಡಲಾಗಿದೆ. ಆಲಿಸಬೇಕಾದ ದನಿಗಳು ಇವು.

ನಮ್ಮ ಚರಿತ್ರೆ ಪಾತಾಳಕ್ಕೆ ಕುಸಿದ ದಿನ - ಪ್ರೊ. ಹಿರೇನ್ ಮುಖರ್ಜಿ

.... ಆ ದಾಂಧಲೆಯ ಮರುದಿನ(ಅಂದರೆ ಡಿಸೆಂಬರ್ 7, 1992 ರಂದು) ಬಿರುಗಾಳಿಗೆ ಸಿಕ್ಕಂತಿತ್ತು ಪಾರ್ಲಿಮೆಂಟು. (ಆದರೆ ಕೆಲವರು ಒಳಗೊಳಗೆ ಹಿಗ್ಗುತ್ತಿದ್ದರು - ತಮ್ಮ ಹಿಗ್ಗನ್ನು ಬಹಿರಂಗವಾಗಿ ತೋರಿಸಲಾಗದೆ!). ವಾಜಪೇಯಿಯವರು ದುಃಖಿತರಾದಂತೆ ಕಾಣಿಸುತ್ತಿದ್ದರು. ಅಡ್ವಾಣಿಯವರಂತೂ ಭ್ರಾಂತರಾಗಿದ್ದಂತೆ ಕಂಡರು. ಪ್ರಧಾನಿ ನರಸಿಂಹರಾವ್ ತುಟಿ ಮುಂದೆ ಮಾಡಿ ಬಿಮ್ಮನೆ ಕುಳಿತಿದ್ದರು - ಚಿಂತಾಕ್ರಾಂತ ಮೂರ್ತಿಯಂತೆ. ಪಾರ್ಲಿಮೆಂಟು ಎಂದಿನ ಗದ್ದಲದ ನಡುವೆಯೂ ನಿಸ್ತೇಜವಾಗಿ ನಿಷ್ಕ್ರಿಯವಾಗಿತ್ತು. ಪಾರ್ಲಿಮೆಂಟು ರಾಷ್ಟ್ರೀಯ ಶೋಕ ಸೂಚಿಸುವ ನಿರ್ಣಯವೊಂದನ್ನು ಅಂಗೀರಿಸಬಹುದು ಎಂಬ ಸ್ಪೀಕರ್ ಸಲಹೆಯನ್ನು ತೆಗೆದುಕೊಳ್ಳದೆ ಸುಮ್ಮನಿತ್ತು ಏನೂ ಮಾಡದೆ. ದುಃಖದಿಂದ ಬೆಂದ ಮುಸ್ಲಿಮರ ಸಾಂತ್ವನಕ್ಕೆ ಇಂತಹ ನಿರ್ಣಯ ಅಗತ್ಯ ಎಂಬ ಸ್ಪೀಕರ್ ಸಲಹೆಗೆ ಪಾರ್ಲಿಮೆಂಟಿನ ಉತ್ತರ ಮೌನವಾಗಿತ್ತು. ನಮ್ಮ ಇತ್ತೀಚಿನ ಚರಿತ್ರೆಯಲ್ಲೇ ನಾವು ಪಾತಾಳಕ್ಕೆ ಕುಸಿದ ದಿನವಾಗಿತ್ತು. ಅದು.

....

95 ವರ್ಷದ ಒಬ್ಬ ಕಮ್ಯುನಿಸ್ಟನಾಗಿ ನಾನು ಇದನ್ನು ಬರೆಯುತ್ತಿದ್ದೇನೆ. ನಾನು 1936 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಕಮ್ಯುನಿಸ್ಟ್ ನಿಷೇಧಿತ ಪಕ್ಷ ವಾಗಿದ್ದಾಗ ಪಕ್ಷ ಸೇರಿದವನು. ನಮ್ಮ ಚಳುವಳಿ ಸ್ವದೇಶದಲ್ಲೂ, ವಿದೇಶದಲ್ಲೂ ಕಷ್ಟದಲ್ಲಿರುವುದನ್ನು ನೋಡಿ ನೊಂದಿದ್ದೇನೆ. ಆದರೆ ಒಬ್ಬ ಕಮ್ಯುನಿಸ್ಟನಾಗಿ ನಾನು ಹೇಗೆ ನಿರಾಸೆಯಿಂದ ಕೈ ಚೆಲ್ಲಿ ಕೊರಲಿ? ಕವಿ ಶೆಲ್ಲಿ ಹೇಳಿದಂತೆ 'ಆಶಾಗೋಪುರ ಕುಸಿದಾಗ ಅದರ ಗೋರಿಯಿಂದ ಚಿಮ್ಮುವ ಆಶಾಕಿರಣದತ್ತ' ನೋಡುತ್ತಿದ್ದೇನೆ. .... ಎಪ್ಪತ್ತೈದು ವರ್ಷದ ಹಿಂದೆ ನನ್ನೊಬ್ಬ ಮಹಾನ್ ಶಿಕ್ಷಕ-ನಾನು ಸುತ್ತಮುತ್ತಲಿನ ಘಟನೆಗಳಿಂದ ಖಿನ್ನನಾಗಿದ್ದಾಗ - ಹೇಳಿದ್ದು ನೆನಪಾಗುತ್ತದೆ "ಮಳೆ ಬರುತ್ತಿರುವಾಗ ಕಾಮನಬಿಲ್ಲು ನೋಡಲು ಕಲಿ".......... ಆಧುನಿಕ ಚರಿತ್ರೆಯಲ್ಲಿ ಆ ಕಾಮನಬಿಲ್ಲು ಕಮ್ಯುನಿಸಂ...... ಜಗತ್ತಿನ ಕಾರ್ಮಿಕರು, ಮಣ್ಣಿನ ಮಕ್ಕಳು ಎಲ್ಲೆಡೆಯಂತೆ ನಮ್ಮ ದೇಶದಲ್ಲೂ ಎದ್ದು ನಿಲ್ಲುತ್ತಾರೆ. ಈ ನೆಲದ ಘನತೆ ಕುಂದಲು ಬಿಡುವುದಿಲ್ಲ. ಈ ನವ-ಫ್ಯಾಸಿಸಂ(ಹಿಂದೂ ಅಥವಾ ಇನ್ನಾವುದೋ ಬಣ್ಣದ) ನ ಕ್ಷುಲ್ಲಕ ದಾಂಧಲೆಯನ್ನು ಸುಟ್ಟುಹಾಕುತ್ತದೆ. ಇದರ ಬೂದಿಯ ಮೇಲೆ ಹೊಸದೊಂದು ಮಾನವಕುಲ ಉದಿಸುತ್ತದೆ. ಇದನ್ನು ಸಾಧ್ಯ ಮಾಡಲು ನಮ್ಮ ಶಕ್ತಿಮೀರಿ ದುಡಿಯುತ್ತೇವೆ ಎಂದು ಪಣ ತೊಡೋಣ - ಈ ಸಂದರ್ಭದಲ್ಲಿ......"

ಪ್ರತಿಗಾಮಿ ದಶಕ - ಪ್ರೊ. ಪ್ರಭಾತ್ ಪಟ್ನಾಯಕ್

.... ಎರಡು ಅಂಶಗಳನ್ನು ಗಮನಿಸಬೇಕು. ಹಿಂದುತ್ವದಂತೆ ಕಾಣುವ ಹಲವು ಪ್ರಜಾಸತ್ತೆ-ವಿರೋಧಿ ಚಳುವಳಿಗಳು ಜಗತ್ತಿನಾದ್ಯಂತ ನಾಯಿಕೊಡೆಗಳಂತೆ ಬೆಳೆದಿವೆ. ತರ್ಕ ಮತ್ತು ಪ್ರಜಾಸತ್ತೆ ಮೇಲೆ ಆಕ್ರಮಣ ಭಾರತಕ್ಕೆ ವಿಶಿಷ್ಟವಾದ ಬೆಳವಣಿಗೆಯೇನಲ್ಲ. ಎರಡನೆಯದು ಕೋಮುವಾದಿ ಫ್ಯಾಸಿಸಂ ತನ್ನದೇ ಅಜೆಂಡಾದ ಜತೆಗೆ, ಸಾಮ್ರಾಜ್ಯಶಾಹಿಯ ಅಜೆಂಡಾವನ್ನು ಸಹ ಮುಂದೆ ಒಯ್ಯುವುದರಲ್ಲಿ ತೊಡಗಿದೆ............

ಹೆಚ್ಚುತ್ತಿರುವ ನಿರುದ್ಯೋಗ ಹಲವು ರೀತಿಯ ವಿಚ್ಛಿದ್ರಕಾರಿ ಪ್ರವೃತ್ತಿಗಳಿಗೆ ಆಸ್ಪದ ಕೊಡುವುದೆಂದು ಈಗ ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ವಿಚ್ಛಿದ್ರಕಾರಿ ಪ್ರವೃತ್ತಿಗಳ ನಡುವೆ ವ್ಯತ್ಯಾಸಗಳನ್ನು ಗುರುತಿಸಬೇಕು. ಇಸ್ಲಾಮಿಕ್ ಮೂಲಭೂತವಾದ ಹಿಂದೂತ್ವ ಮಾದರಿಯ ಕೋಮುವಾದಿ ಫ್ಯಾಸಿಸಂಗಿಂತ ಬಹಳ ಭಿನ್ನವಾಗಿರುವಂಥದು. ಇಸ್ಲಾಮಿಕ್ ಮೂಲಭೂತವಾದ ಇಂದಿನ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿ ವಿರುದ್ಧ ಪ್ರತಿಭಟನೆಯಾಗಿದೆ. ಆದರೆ ಹಿಂದುತ್ವ ಸಾಮ್ರಾಜ್ಯಶಾಹಿಗೆ ಶರಣಾಗಿದೆ.

ಆದರೆ ಇದರರ್ಥ ಇಸ್ಲಾಮಿಕ್ ಮೂಲಭೂತವಾದ ಸಾಮ್ರಾಜ್ಯಶಾಹಿಗೆ ಯಾವಾಗಲೂ ವಿರೋಧವಾಗಿರುವ ಶಕ್ತಿಯಾಗಿರುತ್ತದೆ ಎಂದರರ್ಥವಲ್ಲ. ಅದು ಸಾಮ್ರಾಜ್ಯಶಾಹಿ ಹುಟ್ಟುಹಾಕಿದ ಶಿಶು ಎಂದು ಮರೆಯಬಾರದು. ಆದರೆ ಅದು ಈಗ ಬದಲಾಗಿದೆ. ಮುಂದೆಯೂ ಬದಲಾಗುತ್ತದೆ. ವರ್ಗ ಸಮೀಕರಣಗಳು, ವರ್ಗ ಹಿತಾಸಕ್ತಿಗಳು ಬದಲಾದ ಹಾಗೆ ಅದೂ ಬದಲಾಗುತ್ತದೆ.

ಆದರೆ ಇವೆರಡರ ಸಾಮ್ರಾಜ್ಯಶಾಹಿ ಬಗೆಗಿನ ಧೋರಣೆ ಬಗ್ಗೆ ಮೂಲಭೂತ ವ್ಯತ್ಯಾಸ ಇದೆ ಎಂಬುದು ನಿರ್ವಿವಾದ..... ಇದಕ್ಕೆ ಕಾರಣ 'ಚಾರಿತ್ರಿಕ ಸಾಮಿಪ್ಯ' ವಂತು ಖಂಡಿತ ಅಲ್ಲ. ನಿಜವಾಗಿಯೂ ಹೇಳಬೇಕಾದರೆ ಇಸ್ಲಾಮಿಕ್ ಮೂಲಭೂತವಾದ ಸಾಮ್ರಾಜ್ಯಶಾಹಿಗೆ ಸಾಮೀಪ್ಯ ಹೊಂದಿತ್ತು...... ಒಸಮಾ ಬಿನ್ ಲಾಡೆನ್ ಸೋವಿಯತ್ ಒಕ್ಕೂಟದ ವಿರುದ್ಧ ಹೋರಾಡಲು ಕುಮ್ಮಕ್ಕು ಪಡೆದವ..... ಆದರೂ ಆಶ್ಚರ್ಯಕರ ರೀತಿಯಲ್ಲಿ ಹಿಂದುತ್ವ ಸಾಮ್ರಾಜ್ಯಶಾಹಿಗೆ ಸಮೀಪವಾಗಿದೆ. ಅದಕ್ಕೆ ಶರಣಾಗುವ ಧೋರಣೆ ತೋರಿಸುತ್ತಿದೆ. .... ಈ ಎಲ್ಲಾ ಅತಾರ್ಕಿಕ ಸಿದ್ಧಾಂತಗಳು ಆಳುವ ವರ್ಗದ ಹಿತಾಸಕ್ತಿಗಳನ್ನು ಕಾಪಾಡುವವು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ. ಆದ್ದರಿಂದ ಅವು ಸಾಮ್ರಾಜ್ಯಶಾಹಿ ಬಗ್ಗೆ ತೆಗೆದುಕೊಳ್ಳುವ ಧೋರಣೆ ಅವು ಎತ್ತಿಹಿಡಿಯುವ ವರ್ಗದ ಮೇಲೆ ಅವಲಂಬಿಸಿರುತ್ತವೆ...........

.... ತನ್ನದೇ ಸ್ವತಂತ್ರ ಬೆಳವಣಿಗೆಯಲ್ಲಿ ವಿಫಲವಾದ ದೇಶದ ಬಂಡವಾಳಶಾಹಿ ವರ್ಗದ ಸಾಮ್ರಾಜ್ಯಶಾಹಿಯ ಜೂನಿಯರ್ ಪಾರ್ಟನರ್ ಆಗಲು ಹಾತೊರೆಯುತ್ತದೆ. ಇದಕ್ಕೆ ಜನರ ವ್ಯಾಪಕ ಬೆಂಬಲ ಗಳಿಸಲು ಅದಕ್ಕೆ ಅತಾರ್ಕಿಕ ಸಿದ್ಧಾಂತಗಳು ಸಹಾಯಕವಾಗುತ್ತದೆ. ಭಾರತದ ಹಿರೇ ಬಂಡವಾಳಶಾಹಿಗಳ ವರ್ಗ ಹಿತಾಸಕ್ತಿಗಳ



ಪ್ರತಿಫಲನವಾಗಿ, ಹಿಂದೂತ್ವದ ಸಾಮ್ರಾಜ್ಯಶಾಹಿ ಶರಣಾಗುವ ಧೋರಣೆಯನ್ನು ನೋಡಬೇಕು. .... ಇದಕ್ಕೆ ವಿರುದ್ಧವಾಗಿ ಇಸ್ಲಾಮಿಕ್ ಮೂಲಭೂತವಾದ ಪಾಳೆಯಗಾರಿ-ವ್ಯಾಪಾರಿ ವರ್ಗದ ಸಿದ್ಧಾಂತ. ಈ ವರ್ಗ ಸಾಮ್ರಾಜ್ಯಶಾಹಿ ಯಿಂದ ಬೆದರಿಕೆಗೆ ಒಳಗಾಗಿದೆ. ಜಾಗತೀಕರಣದ ಅಲೆಯಲ್ಲಿ ತಾನು ಅಳಿಸಿಹೋಗಬಹುದು ಎಂಬ ಭಯ ಅದಕ್ಕಿದೆ. ಆದ್ದರಿಂದ ಅದು ಸದ್ಯಕ್ಕೆ ಸಾಮ್ರಾಜ್ಯಶಾಹಿಗೆ ವಿರುದ್ಧವಾಗಿದೆ. ಆದರೆ ಅದನ್ನು ಸರಿಯಾಗಿ ನೋಡಿಕೊಂಡರೆ ಅದು ತನ್ನ ಧೋರಣೆ ಬದಲಾಯಿಸಿತು.

ಬಾಬ್ರಿ ಮಸೀದಿ ಧ್ವಂಸಕ್ಕೆ 'ಚಾರಿತ್ರಿಕ' ಕಾರಣ - ಮೋಸದ ಆಟ

- ಪ್ರೊ. ಇರ್‌ಫಾನ್ ಹಬೀಬ್

475 ವರ್ಷ ಹಳೆಯದಾದ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ನಂತರ ಸಂಘ ಪರಿವಾರದವರು ಹಲವು ರೀತಿಯಲ್ಲಿ ಅವರು ಮಾಡಿದ್ದು ಸರಿ ಎಂದು ಸಾಧಿಸುತ್ತಿದ್ದಾರೆ.... ಬಾಬ್ರಿ ಮಸೀದಿ ರಾಮಜನ್ಮಭೂಮಿಯಲ್ಲಿದ್ದ ದೇವಾಲಯವನ್ನು ನಾಶ ಮಾಡಿ ಕಟ್ಟಿದ್ದು ಎಂದು ಪುರಾವೆ ಹುಡುಕಲು ಈ ಧ್ವಂಸ ಕಾರ್ಯ ಅಗತ್ಯವಾಗಿತ್ತು ಎಂಬುದು ಅವರು ಕೊಡುವ ಕಾರಣಗಳಲ್ಲಿ ಒಂದು! ಕಳೆದ ಹತ್ತು ವರ್ಷಗಳಲ್ಲಿ ಈ 'ಪುರಾವೆ' ಬಗ್ಗೆ ದೇಶವೆಲ್ಲಾ ಡಂಗುರ ಸಾರಲಾಗುತ್ತಿದೆ. .... ಮಸೀದಿ ಧ್ವಂಸ ಕಾರ್ಯ ನಡೆಯುತ್ತಿದ್ದಂತೆ ಒಂದು ಶಾಸನದ ಕಲ್ಲಿನ ಫಲಕ ಮಧ್ಯ ಮತ್ತು ಬಲ ಬದಿಯ (ಪಶ್ಚಿಮದಿಂದ ನೋಡಿದಾಗ) ಗಮ್ಮಟಗಳ ನಡುವೆ ಸಿಕ್ಕಿತಂತೆ - ಸಂಘ ಪರಿವಾರದವರ ಪ್ರಕಾರ............ ಆದರೆ ಪುರಾತತ್ವ ಶಾಸ್ತ್ರಜ್ಞರ ಅಭಿಪ್ರಾಯದ ಪ್ರಕಾರ ಈ ಫಲಕ ಬಾಬ್ರಿ ಮಸೀದಿಯ ಕೆಳಗೆ ಇದ್ದದ್ದಲ್ಲ......... ಸಂಘ ಪರಿವಾರದ ವಾದ ಇದು ಅಲ್ಲೇ ಸಿಕ್ಕಿದ್ದು ಎಂದಿಟ್ಟುಕೊಂಡರು ಆ ಫಲಕ ಹೇಳುವುದೇನು? ಸಂಘ ಪರಿವಾರದವರು ಹೇಳುತ್ತಿದ್ದ 'ಚಾರಿತ್ರಿಕ ಕಾರಣ' ಕ್ಕೆ ಅದು ಪುರಾವೆಯಾಗಬಲ್ಲುದೆ? .... ಫಲಕ ಹೇಳುವುದಿಷ್ಟೆ. ಸಾಕೇತದ ಸ್ಥಳೀಯ ಸ್ವಾಮಿ ವಿಷ್ಣು-ಹರಿಗೊಂದು ಸುಂದರ ದೇವಾಲಯ ಕಟ್ಟಿದ. ಇದು ಶ್ರೀ ರಾಮಜನ್ಮ ಸ್ಥಳದಲ್ಲಿ ಕಟ್ಟಿದ್ದಕ್ಕಾಗಲೀ, ಹಿಂದೆ ಇದ್ದಿರಬಹುದಾದ ಯಾವುದೇ ದೇವಾಲಯದ ಜಾಗದಲ್ಲಿ ಕಟ್ಟಿದೆಯೆಂದಾಗಲಿ ಈ ಫಲಕದಲ್ಲಿ ಯಾವುದೇ ರೀತಿಯಲ್ಲಿ ನಮೂದಿಸಿಲ್ಲ. ಇಡೀ ಫಲಕದಲ್ಲಿ ಶ್ರೀರಾಮನ ಸುದ್ದಿಯೇ ಇಲ್ಲ. ಅದೇ ರೀತಿ ಸಂಘ ಪರಿವಾರ ಹೇಳಿಕೊಂಡಂತೆ - ಫಲಕ ಮುಸ್ಲಿಮರ ಅಪಾಯದ ಬಗೆಗಾಗಲೀ, ಮುಸ್ಲಿಮರು ಆ ಜಾಗದಲ್ಲಿ ಒಂದು ದೇವಾಲಯವನ್ನು ನಾಶ ಮಾಡಿದ್ದರ ಬಗೆಗಾಗಲಿ ಏನನ್ನು ಹೇಳುವುದಿಲ್ಲ.... ಹೀಗೆ ಬಾಬ್ರಿ ಮಸೀದಿಯ ಧ್ವಂಸ ಮಾಡಲು 'ಚಾರಿತ್ರಿಕ ಕಾರಣ'(ಬಾಬ್ರಿ ಮಸೀದಿ ಶ್ರೀರಾಮನ ಜನ್ಮಸ್ಥಳದಲ್ಲಿದ್ದ ಒಂದು ದೇವಾಲಯವನ್ನು ನಾಶ ಮಾಡಿ ಕಟ್ಟಿದ್ದು - ಆದ್ದರಿಂದ ಅದನ್ನು ನಾಶ ಮಾಡಬೇಕು) ಸಂಘ ಪರಿವಾರ ಇಡೀದೇಶದ ಮೇಲೆ ನಡೆಸಿದ ಮೋಸದ ಆಟ ಎಂದು ಬಯಲಾಗುತ್ತದೆ.

'ಹಿಂದೂ ರಾಷ್ಟ್ರ ಕಟ್ಟೋಣದ ಕೆಲಸ ಭರದಿಂದ ಸಾಗಿದೆ - ಹುಶಾರ್!"

"ಅಯೋಧ್ಯೆಯಿಂದ ಹೊರಟು ಅಹಮದಾಬಾದ್‌ನಲ್ಲಿ ಧ್ವನಿವರ್ಧಕಗಳಿಂದ ಕರ್ಕಶವಾಗಿ ಮೂಡಿಬಂದ ಘೋಷಣೆ ಇದು - ಹಿಂದೂ ರಾಷ್ಟ್ರದ ಕಟ್ಟೋಣದ ಕೆಲಸ ಭರದಿಂದ ಸಾಗಿದೆ - ಹುಶಾರ್! ಇದು ಭಾರಿ ಕರ್ಕಶ ಅನಿಸಿದರೆ ನಮಗೆ 'ಆಯ್ಕೆ'ಇದೆ. - ನಾವು ಆರೆಸ್ಸೆಸ್‌ನ ಬೆಂಗಳೂರು ನಿರ್ಣಯ ಓದಬಹುದು ಅಥವಾ ಗೋವಾದಲ್ಲಿ ವಾಜಪೇಯಿಯ 'ಆತ್ಮಪರೀಕ್ಷಣೆ' ಕೇಳಬಹುದು..... ಆದರೆ ಸಂದೇಶ ಸ್ಪಷ್ಟ. ಅದು 'ಮುಸ್ಲಿಮರು, ಕ್ರಿಶ್ಚಿಯನ್ನರು ಇತರ ಅಲ್ಪಸಂಖ್ಯಾತರಿಗೆ ಮಾತ್ರವಲ್ಲ, ಪಾಕಿಸ್ತಾನ, ಮುಶರಫ್‌ರಿಗೆ ಮಾತ್ರವಲ್ಲ, ಮುಖ್ಯವಾಗಿ 'ಕೇಸರಿ ಕಣ್ಣೋಟ'ಒಪ್ಪದ, ಭಾರತದ ಬಗ್ಗೆ ಬೇರೆ ಬದಲಿ ಕಣ್ಣೋಟ ಹೊತ್ತ ನಮಗೆಲ್ಲರಿಗೆ. ಇದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕು" ಎನ್ನುತ್ತಾರೆ ದೀಪಂಕರ ಭಟ್ಟಾಚಾರ್ಯ, ನಕ್ಸಲೈಟ್ ಗುಂಪುಗಳಲ್ಲಿ ಒಂದಾದ ಸಿಪಿಐ(ಎಂ-ಎಲ್)ನ ಕಾರ್ಯದರ್ಶಿ.

'ಕೇಸರೀಕರಣ'ದ ಗಟಾರ ನೀರು ಮುಖ್ಯ ಧಾರೆಗೆ ಸೇರುವ ಮೂರು ಪ್ರಮುಖ ದ್ವಾರಗಳನ್ನು ಗುರುತಿಸುವುದು ಅಗತ್ಯ ಎನ್ನುತ್ತಾರೆ. ಭಾರತದ ರಾಷ್ಟ್ರೀಯತೆ, ಜಾತ್ಯಾತೀತತೆ, ಸಾಮ್ರಾಜ್ಯಶಾಹಿ - ವಿರೋಧಿ ಕಣ್ಣೋಟ - ಕನಸುಗಳನ್ನು ಸಂಘ ಪರಿವಾರ ಕೆಡಿಸುವುದು, ಕೆಡವುದನ್ನು ತಡೆಯುವುದು ಅಗತ್ಯ. ಸ್ವಾತಂತ್ರ್ಯ ಹೋರಾಟ ಈ ಬಗ್ಗೆ ಕಂಡ ಕನಸುಗಳನ್ನು ರೂಪಿಸಿದ ಕಣ್ಣೋಟವನ್ನು ಮತ್ತೊಮ್ಮೆ ಜನರ ಮುಂದೆ ಇಡಬೇಕಾಗಿದೆ ಎನ್ನುತ್ತಾರೆ ಭಟ್ಟಾಚಾರ್ಯ

ಕುಂದಾಪುರ ತಾಲ್ಲೂಕು ರೈತರ ಸಮ್ಮೇಳನ

ರೈತರ ಹಿತರಕ್ಷಣೆಗೆ ಹೋರಾಡಲು ನಿರ್ಧಾರ

ಕಬ್ಬು ಬೆಳೆಗಾರರಿಗೆ ಪಾವತಿಸುವ ಬಾಕಿ ಹಣವನ್ನು ಕೂಡಲೇ ಪಾವತಿಸುವುದಲ್ಲದೆ, ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆ ಯನ್ನು ಉಳಿಸಲು ಆರು ಕೋಟಿ ರೂ ಹಣವನ್ನು ಸಹಾಯಧನವಾಗಿ ನೀಡುವ ಮೂಲಕ ಕಾರ್ಮಿಕ ನೌಕರರಿಗೆ ಕೊಡಲು ಬಾಕಿಯಾಗಿರುವ ವೇತನವನ್ನು ನೀಡಲು ಸಹಕರಿಸುವ ಮೂಲಕ ಸಹಕಾರಿ ಸಕ್ಕರೆ ಕಾರ್ಖಾನೆಯ ಇಂದಿನ ಬಿಕ್ಕಟ್ಟಿಗೆ ಪರಿಹಾರ ಹುಡುಕಲು ಕರ್ನಾಟಕ ರಾಜ್ಯ ಸರಕಾರ ಮುಂದಾಗ ಬೇಕೆಂದು ಡಿಸೆಂಬರ್ 15 ರಂದು ಕೆ.ಗೋವಿಂದ ಸೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಸೇರಿದ ಕುಂದಾಪುರ ತಾಲೂಕು ರೈತರ 14ನೇ ಸಮ್ಮೇಳನವು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿದೆ.

"1936 ರಿಂದ ಹೋರಾಟಗಳ ಮೂಲಕ ರೈತರ ಸಂಘಟನೆ ಕಟ್ಟಿ ಸ್ವಾತಂತ್ರ್ಯ ಹೋರಾಟದಲ್ಲಿ ದೊಡ್ಡ ಸಂಖ್ಯೆಯಲ್ಲಿ ರೈತರು ಭಾಗವಹಿಸುವಂತೆ ಪ್ರಯತ್ನಿಸಿದ ಅಖಿಲ ಭಾರತ ಕಿಸಾನ್ ಸಭಾದ ಭಾಗವಾಗಿ 45 ವರ್ಷಗಳಿಂದ ಕುಂದಾಪುರ ಭಾಗದಲ್ಲಿ ಚಟುವಟಿಕೆ ನಡೆಸುತ್ತಿರುವ ಗ್ರಾಮಾಂತರದ ಬಡ ಜನರ ಸಂಘಟನೆಯಾಗಿ ಬೆಳೆಸಬೇಕಾಗಿದೆ. ಗ್ರಾಮಮಟ್ಟದಲ್ಲಿ ಸಮಿತಿಗಳನ್ನು ಕಟ್ಟಿ ಬೆಳೆಸಲು ಮುಂದಾಗಬೇಕು" ಎಂದು 14ನೇ ತಾಲೂಕು ಸಮ್ಮೇಳನವನ್ನು ಉದ್ಘಾಟನೆ ಮಾಡಿದ ಉಡುಪಿ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಡೇವಿಡ್ ಎ.ಕರ್ಕಡರವರು ಹೇಳಿದರು. ವಾರಾಹಿ ನೀರಾವರಿಗಾಗಿನ ಯೋಜನೆ ಪೂರ್ಣ ಗೊಳಿಸಬೇಕು. ಅರಣ್ಯಭೂಮಿ ಒತ್ತುವರಿ ಯನ್ನು ಸಕ್ರಮಗೊಳಿಸಿ ಹಕ್ಕುಪತ್ರ ನೀಡಬೇಕು. ವಿದ್ಯುತ್ ಕಂಪನಿಗಳನ್ನು ಖಾಸಗೀಕರಣಗೊಳಿಸುವ ಪ್ರಯತ್ನವನ್ನು ಕೈಬಿಡುವಂತೆ ಒತ್ತಾಯಿಸುವ ಠರಾವುಗಳನ್ನು ಸರ್ವಾನುಮತದಿಂದ ಅಂಗೀಕರಿಸಿ ಮುಂದಿನ ದಿನಗಳಲ್ಲಿ ಹೋರಾಟಗಳ ಮೂಲಕ ಸರಕಾರವನ್ನು ಒತ್ತಾಯಿಸಲು ರೈತರಿಗೆ ಗ್ರಾಮ ಸಮಿತಿಗಳ ಮೂಲಕ ಕರೆ ನೀಡಲಾಯಿತು.

ಪ್ರಧಾನ ಕಾರ್ಯದರ್ಶಿ ಯು.ದಾಸ ಭಂಡಾರಿಯವರು ಮಂಡಿಸಿದ ವರದಿಯ ಮೇಲಿನ ಚರ್ಚೆಯಲ್ಲಿ ಪ್ರತಿನಿಧಿಗಳು ಮಾತನಾಡಿದರು.

ಸಿಪಿಐ(ಎಂ) ತಾಲೂಕು ಸಮಿತಿಯ ಕಾರ್ಯದರ್ಶಿ ಮಹಾಬಲ ಒಡೇರಹೋಬಳಿ, ಎಸ್.ಎಫ್.ಐ ಜಿಲ್ಲಾ ಮುಂದಾಳು, ರವಿಶಂಕರ್, ಡಿ.ವೈ.ಎಫ್.ಐ ತಾಲೂಕು ಕಾರ್ಯದರ್ಶಿ ಅಶ್ವಥ್‌ಕುಮಾರ್, ಜಿಲ್ಲಾ ಕಾರ್ಯದರ್ಶಿ ವಿ.ಚಂದ್ರಶೇಖರ್, ಕೋಟೇಶ್ವರ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಬಿ.ಕೆ.ದೇವಡಿಗ, ಬಳ್ಕೂರು ಪಂಚಾಯತ್ ಅಧ್ಯಕ್ಷರಾದ ಶ್ರೀ ಮಂಜು ಮೊಗೇರ, ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ಸಿ.ನಾರಾಯಣ ಮೊದಲಾದವರು ಶುಭ ಕೋರಿ ಮಾತನಾಡಿ ಗ್ರಾಮಾಂತರ ಭಾಗದ ಬಡಜನರ ಸಂಘಟನೆಯಾಗಿ ರೈತ ಸಂಘಟನೆ ಕಟ್ಟಿ ಬೆಳೆಸಲು ಕರೆ ನೀಡಿದರು.

ಮುಂದಿನ ವರ್ಷಕ್ಕೆ 26 ಮಂದಿಯ ಕಮಿಟಿಯನ್ನು ಈ ಕೆಳಗಿನವರನ್ನು ಪದಾಧಿಕಾರಿಗಳಾಗಿ ಅಧ್ಯಕ್ಷರಾಗಿ ಕೆ.ಗೋವಿಂದ ಸೆಟ್ಟಿಗಾರ, ಉಪಾಧ್ಯಕ್ಷರಾಗಿ ಸಿ.ನಾರಾಯಣ, ಬಿ.ಕೆ.ದೇವಡಿಗ, ಶೀನ ಪೂಜಾರಿ, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಬಿ.ಗೋಪಾಲ ಶೆಟ್ಟಿಗಾರ, ಜತೆಕಾರ್ಯದರ್ಶಿಗಳಾಗಿ ಬಿ.ಗೋಪಾಲ ಕುಲಾಲ, ಆನಗಳ್ಳಿ ಶಂಕರ, ಸಂಜೀವ ಪೂಜಾರಿ, ಕೋಶಾಧಿಕಾರಿಯಾಗಿ ಮಂಜು ಮೊಗೇರ ಅಲ್ಲದೇ 17 ಸಮಿತಿ ಸದಸ್ಯರನ್ನು ಆರಿಸಲಾಯಿತು. ಪ್ರಾರಂಭದಲ್ಲಿ ಶ್ರೀ ದಾಸ ಭಂಡಾರಿಯವರು ಸ್ವಾಗತಿಸಿ ಕೊನೆಯಲ್ಲಿ ಸಿ.ನಾರಾಯಣ ಧನ್ಯವಾದ ಸಲ್ಲಿಸಿದರು.

ವರದಿ: **ಬಿ.ಗೋಪಾಲ ಸೆಟ್ಟಿಗಾರ**

ಗ್ರಾಮ ಸಹಾಯಕ (ಉಗ್ರಾಣಿಗಳ)ರ ಸಂಘಟನೆಯತ್ತ

ಸರಕಾರದ ಕಂದಾಯ ಇಲಾಖೆಯ ಗ್ರಾಮ ಚಾವಡಿಗಳಲ್ಲಿ ಗ್ರಾಮ ಲೆಕ್ಕಿಗರ ಸಹಾಯಕರಾಗಿ 'ಗ್ರಾಮ ಸಹಾಯಕರು (ಉಗ್ರಾಣಿ)ಗಳು ಸರಕಾರದ ಪರವಾಗಿ ಸಾರ್ವಜನಿಕರ ಸೇವೆ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಿಂದಲೂ ಇವರ ಸೇವೆಯನ್ನು ಘನ ಸರ್ಕಾರಗಳು ಪಡೆಯುತ್ತಲೇ ಬಂದಿವೆ ಯಾದರೂ ಇವರ ಜೀವನ ಸ್ಥಿತಿ ಸುಧಾರಿಸುವತ್ತ ಹಾಗೂ [illegible] ಖಾಯಂಗೊಳಿಸಿ ವೇತನ ನಿಗದಿ ಗೊಳಿಸುವತ್ತ ಗಮನಹರಿಸದಿದ್ದುದು ಸರ್ಕಾರದ ಕಾರ್ಮಿಕ ವಿರೋಧಿ ನೀತಿಗೆ ಸಾಕ್ಷಿಯಾಗಿದೆ. ಭೂಕಂದಾಯ ವ್ಯವಸ್ಥೆಯು ಜಾರಿಯಲ್ಲಿ ಬಂದಾಗಿಂದ ಕರ್ನಾಟಕ ರಾಜ್ಯ ಸರ್ಕಾರವು ಉಗ್ರಾಣಿಗಳ ಸೇವೆಯನ್ನು ಆಯಾ ಗ್ರಾಮ ಚಾವಡಿಗಳ ವ್ಯಾಪ್ತಿಯಲ್ಲಿ ಪಡೆಯುತ್ತ ಬಂದಿದೆ. ಜೀತದಾಳುಗಳಂತೆ ದುಡಿಸಿಕೊಂಡು ಕೆಲಸ ಹೊರೆ ಹೆಚ್ಚಿಸಿದೆ, ನಿರಂತರ ಶೋಷಣೆ, ದಬ್ಬಾಳಿಕೆಗೆ ಇವರು ತುತ್ತಾಗಿದ್ದಾರೆ. ಮೊದಲು ಇವರು 'ಉಗ್ರಾಣಿ' ಎಂದಿದ್ದ ಇವರನ್ನು ಈಗ ಸರ್ಕಾರ ಗ್ರಾಮಸಹಾಯಕರೆಂದು ಕರೆಯುತ್ತಿದೆ. ಹೆಸರು ಬದಲಾದರೂ ಕೆಲಸಗಳು ಒಂದೇ ತೆರನಾಗಿವೆ; ಸರ್ಕಾರದ ಧೋರಣೆ ಕೂಡ ಒಂದೇ ತೆರನಾಗಿದೆ.

ಹುದ್ದೆಯನ್ನು ಖಾಯಂಗೊಳಿಸದೇ, ಹಂಗಾಮಿ ಅಥವಾ ಗುತ್ತಿಗೆ ಅಥವಾ ಮಿತವೇತನ ನೌಕರ ಎಂಬುದಾಗಿ ಪರಿಗಣಿಸಿ, ಕಾಲಕಾಲಕ್ಕೆ ಸೇವಾ ಅವಧಿಯನ್ನು ವಿಸ್ತರಿಸುತ್ತಾ ಬಂದಿದೆ. ಪ್ರಸ್ತುತ ವರ್ಷ ಸರ್ಕಾರದ ಆದೇಶದ ಪ್ರಕಾರ ಸೇವಾ ಅವಧಿ ದಿ.31-3-2003ರವರೆಗೆ ಮಾತ್ರ.

ಗ್ರಾಮ ಸಹಾಯಕರು ಅಥವಾ ಉಗ್ರಾಣಿಗಳಿಗೆ ಈಗ ರೂ.1000.00 ಮಾಸಿಕ ವೇತನ ಸಿಗುತ್ತಿದೆ. ಬೇರೆ ಯಾವುದೇ ಮೂಲಗಳಿಂದ ಆದಾಯವಿಲ್ಲ. ಸುಮಾರು 40-45 ವರ್ಷ ಸೇವೆ ಸಲ್ಲಿಸಿದ ನಂತರ 65 ವರ್ಷ ವಯಸ್ಸಾದ ತಕ್ಷಣ ಯಾವುದೇ ನಿವೃತ್ತಿ ಸೌಲಭ್ಯವಿಲ್ಲದೇ ಬರಿಗೈಲಿ ಮನೆಗೆ ತೆರಳುವ ಇವರ ಜೀವನ ಒಂದು ಗೋಳಿನ ದಾರುಣ ಕಥೆಯೇ ಸರಿ.

ಹಲವು ವ್ಯಕ್ತಿಗತ ಸಂಘಟನೆಗಳಿಂದ ಅಥವಾ ಅಲ್ಲಲ್ಲಿ ಸ್ವಯಂಪ್ರೇರಿತರಾಗಿ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿದರೂ 56 ವರ್ಷದ ಸ್ವತಂತ್ರ ಭಾರತದ ಘನ ರಾಜ್ಯ ಸರ್ಕಾರಗಳಾವುವೂ ಕಣ್ಣೆತ್ತಿ ನೋಡಿಲ್ಲ. ಸ್ವತಃ ಗ್ರಾಮ ಸಹಾಯಕರ ಮಗನಾಗಿ ಕರ್ನಾಟಕದ ಮುಖ್ಯಮಂತ್ರಿಯಾದ ವೀರಪ್ಪ ಮೊಯ್ಲಿಯವರೂ ಕೂಡ ಇವರನ್ನು ಮರೆತದ್ದು ದುರ್ದೈವದ ಸಂಗತಿ. ಹಾಗಾಗಿ ಉಗ್ರಾಣಿಗಳ ಸೇವಾ ಖಾಯಮಾತಿ ಕುರಿತು ಕರ್ನಾಟಕ ಆಡಳಿತಾತ್ಮಕ ನ್ಯಾಯಾಧಿಕರಣ ಬೆಂಗಳೂರು ರವರಲ್ಲಿ 1995 ರಲ್ಲಿ ಮನವಿ ಸಲ್ಲಿಸಲಾಗಿ 1996ರಲ್ಲಿ ಗ್ರಾಮ ಸಹಾಯಕರನ್ನು ಖಾಯಂಗೊಳಿಸುವಂತೆ ಹಾಗೂ ವೇತನ ನಿಗದಿಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಆದರೆ, ರಾಜ್ಯ ಸರ್ಕಾರವು ಬೇರೆ ಬೇರೆ ಕುರಿತು ನೆಪಗಳನ್ನು ಮುಂದೆ ಮಾಡಿ ತೀರ್ಪು ಜಾರಿ ಮಾಡದೇ ವೃಥಾ ಕಾಲಹರಣ ಮಾಡಿ ಇವರ ಬದುಕನ್ನು ಇನ್ನಷ್ಟು ಯಾತನೆಗೆ ದೂಡಿತು. ಅನ್ಯ ಮಾರ್ಗವಿಲ್ಲದೇ, ನ್ಯಾಯಾಧೀಶರ ತೀರ್ಪು ಜಾರಿಗೆ ತರಲು ನಿರ್ದೇಶನ ಕೋರಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಯಿತು. 27-9-2001 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ನ್ಯಾಯಾಧೀಕರಣದ ತೀರ್ಪು ಎತ್ತಿ ಹಿಡಿದು ಮುಂದಿನ 6 ತಿಂಗಳೊಳಗಾಗಿ ಉಗ್ರಾಣಿಗಳ ಸೇವೆ ಖಾಯಂಗೊಳಿಸಿ ವೇತನ ನಿಗಧಿಗೊಳಿಸುವಂತೆ ತೀರ್ಪು ನೀಡಿತು. ಇಲ್ಲಿಯೂ ಕೂಡ ಆದೇಶ ಜಾರಿಗೊಳಿಸದೇ 6 ತಿಂಗಳ ಗಡುವು ಮುಗಿಯಲು 4 ದಿನ ಇರಬೇಕಾದರೆ ಅಂದರೆ ದಿ.23-3-2002 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪುನರ್ ವಿಮರ್ಶಾ ಅರ್ಜಿ ದಾಖಲಿಸಿದ್ದರಿಂದ ರಾಜ್ಯದ ಸುಮಾರು 10,450 ಉಗ್ರಾಣಿಗಳು ಇಂದು ಮತ್ತೆ ಉಸಿರೆತ್ತದ ಸ್ಥಿತಿಗೆ ಸಿಲುಕಿದರು.

ಈ ಸಂದರ್ಭದಲ್ಲಿ ಸಂಘದ ರಾಜ್ಯ ಮುಖಂಡರು ಸರ್ಕಾರದ ತಾಳಕ್ಕೆ ಹೆಜ್ಜೆ ಹಾಕುತ್ತಿದ್ದಾರೆಂದೂ ಹಲವಾರು ನೌಕರರು ಗುರುತಿಸಿದ್ದಾರೆ. ಆದರೆ ಈಗಿರುವ ಸಂಘದ ಕೆಲಸದ ವೈಖರಿಯಿಂದ ಬೇಸತ್ತು, ಅವರ ಬೋಧನೆ ಹಾಗೂ ಸರ್ಕಾರದ ಪೊಳ್ಳು ಆಶ್ವಾಸನೆಗಳನ್ನು ನಂಬದೇ ಉತ್ತರಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಗ್ರಾಮ ಸಹಾಯಕರು ಸಿಐಟಿಯು ನೇತೃತ್ವದ ಸಂಘ ರಚಿಸಿಕೊಳ್ಳಲು ಮುಂದಾದರು.. 8-12-2002 ರಂದು ಸರ್ವಸದಸ್ಯರ ಸಭೆಯಲ್ಲಿ ಸಮರಧೀರ ಸಂಘಟನೆಯಾದ, ದುಡಿಯುವ ವರ್ಗದ ಚೈತನ್ಯ ಎಂದೇ ಪರಿಗಣಿಸಲ್ಪಟ್ಟ ಸಿಐಟಿಯು ಸಂಘಟನೆಗೆ ಸೇರಲು ಮೊಟ್ಟಮೊದಲು ತೀರ್ಮಾನಿಸಿದರು.

ಸಮ್ಮೇಳನವನ್ನು ಜಿಲ್ಲಾ ನಿವೃತ್ತ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಎಂ.ವೈ.ಪ್ರಭು ಉದ್ಘಾಟಿಸಿದರು. ಅತಿಥಿಗಳಾಗಿ ಮಾತನಾಡಿದ ಕಾರವಾರದ ಸಿರಸ್ತೇದಾರರಾದ ಎಂ.ಎ.ಖಲೇಬರು ಕಂದಾಯ ಇಲಾಖೆಯ ನೌಕರರ ಪರವಾಗಿ ಶುಭಾಶಯ ಕೋರುತ್ತಾ ಕಷ್ಟದಿಂದ ಜೀವನ ನಡೆಸುತ್ತಿರುವ ಗ್ರಾಮ ಸಹಾಯಕರುಗಳ ಸೇವೆ ಖಾಯಂ ಆಗಲೇಬೇಕು. ಸುಪ್ರಿ ಕೋರ್ಟ್‌ನ ತೀರ್ಪು ಜಾರಿಯಾಗಿ ಉಗ್ರಾಣಿಗಳು ಇನ್ನಾದರೂ ಒಳ್ಳೆ ದಿನಗಳನ್ನು ಕಾಣಲು ಸಿ.ಐ.ಟಿ.ಯು ಸಂಘಟಿತ ಹೋರಾಟ ಮುಂದುವರಿಯಲಿ ಎಂದರು. ಅಧ್ಯಕ್ಷತೆ ವಹಿಸಿದ 'ಡಿ' ಗ್ರೂಪ್ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರೂ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಡಿ.ಪಿ ಇಡೂರ್ಕರ್ ಮಾತನಾಡಿ ಗ್ರಾಮಸಹಾಯಕರಿಗೆ ಸ್ವಾತಂತ್ರ್ಯ ಸಿಕ್ಕಿಲ್ಲವಾದುದು ಸರ್ಕಾರದ ನೀತಿಯಿಂದಾಗಿ, ಅದರ ನಿರ್ಲಕ್ಷ್ಯ ಧೋರಣೆಯಿಂದಾಗಿ ಸರ್ಕಾರ ತಡಮಾಡದೇ ಬೇಡಿಕೆಗೆ ಸ್ಪಂದಿಸಬೇಕು ಎಂದು ಒತ್ತಾಯಿಸಿದರು. ಪ್ರಸ್ತಾವಿಕವಾಗಿ ಸಿ.ಐ.ಟಿ.ಯು ಜಿಲ್ಲಾ ಸಮಿತಿ ಸದಸ್ಯೆ ಯಮುನಾ ಮಾತನಾಡಿದರು.

ಪ್ರಾರಂಭದಲ್ಲಿ ಎಸ್.ಎಫ್.ಐ ನ ಭಾರತಿ ಹೋರಾಟದ ಹಾಡುಗಳನ್ನು ಹಾಡಿದರು. ಮಹಾದೇವ ನಾಯ್ಕ ಸ್ವಾಗತಿಸಿದರು. ಡಿ.ವೈ.ಎಫ್.ಐ ನ ಬೊಮ್ಮಯ್ಯ ನಾಯ್ಕ ನಿರೂಪಿಸಿದರೆ; ನಾಗೇಶ ನಾಯ್ಕ ವಂದಿಸಿದರು.

ಇಡೀ ಜಿಲ್ಲೆಯಲ್ಲಿ ಸಂಘಟನೆ ಕಟ್ಟಿ ಬೆಳೆಸಲು ಸಮ್ಮೇಳನದ ಪ್ರತಿನಿಧಿಗಳು ತೀರ್ಮಾನಿಸಿದ್ದಾರೆ.

ಪ್ರಥಮ ಸಮ್ಮೇಳನವು ಇಡೀ ರಾಜ್ಯಕ್ಕೆ ಸುಮಾರು 10,450 ಜನ ಗ್ರಾಮ ಸಹಾಯಕರಿಗೆ ಅನುಗುಣವಾದ ಬೇಡಿಕೆ ಪಟ್ಟಿಯನ್ನು ಸರ್ಕಾರಕ್ಕೆ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಿದೆ.

ನೂತನ ಸಮಿತಿ ಸದಸ್ಯರು

ಗೌರವಾಧ್ಯಕ್ಷರಾಗಿ ಯಮುನಾ ಗಾಂವ್ಕರ್, ಅಧ್ಯಕ್ಷರಾಗಿ ಮಹಾದೇವ ನಾಯ್ಕ, ಕಾರ್ಯದರ್ಶಿಯಾಗಿ ಮೋಹನ ಅಂಬಿಗ, ಖಜಾಂಚಿಯಾಗಿ ಗುರುದಾಸ್ ವಾರ್ಕರ್, ಉಪಾಧ್ಯಕ್ಷರಾಗಿ ಸುಧೀರ ಬಾನಾವಳಿ, ಅಶೋಕ ನಾಯ್ಕ ಸಹಕಾರ್ಯದರ್ಶಿ-ಯಾದು ನಾಯ್ಕ, ರಾಜೇಂದ್ರ ಗುರವ, ಸಮಿತಿ ಸದಸ್ಯರಾಗಿ- ಶಂಕರ್ ನಾಯ್ಕ, ಕೃಷ್ಣಾನಂದ ಸಾವಂತ, ನಾರಾಯಣ ನಾಯ್ಕ, ಜನಾರ್ದನ ನಾಯ್ಕ, ಬಾಬುರಾಯ್ ನಾಯ್ಕ ಆಯ್ಕೆಯಾದರು.

ವಗದಿ - **ಯಮುನಾ ಗಾಂವ್ಕರ**

ಸಂಗಾತಿ ಕಮಲಾಕ್ಷ ಬಂಗೇರ ಇನ್ನಿಲ್ಲ

ದಕ್ಷಿಣಕನ್ನಡ ಜಿಲ್ಲೆಯ ಹಿರಿಯ ಸಂಗಾತಿ ಕಮಲಾಕ್ಷ ಬಂಗೇರರವರು ಡಿಸೆಂಬರ್ 13 ರಂದು ತಮ್ಮ ಮನೆಯಲ್ಲಿ ಹೃದಯಾಘಾತದಿಂದ ಮೃತರಾದರು. 77 ವರ್ಷ ಪ್ರಾಯದ ಇವರು ಅನಾರೋಗ್ಯದ ಮಧ್ಯೆ ಕೂಡಾ ಗೋಡಂಬಿ, ಅಡಿಕೆ ಕಾರ್ಮಿಕರ ಮಧ್ಯೆ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ತನ್ನ ಮರಣದ ತನಕ ಕೂಡಾ ಕ್ಯಾಶ್ಯೂ ಆ್ಯಂಡ್ ಅಲೈಡ್ ವರ್ಕರ್ಸ್ ಯೂನಿಯನ್ನಿನ ಪ್ರಧಾನಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮಂಗಳೂರು ನಗರಸಮಿತಿಯ ಸದಸ್ಯರಾಗಿದ್ದ ಇವರು ಹಲವಾರು ವರ್ಷ ಮಂಗಳೂರು ನಗರ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು, ಮಾತ್ರವಲ್ಲದೆ ಪಕ್ಷದ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದರು. ಮಂಗಳೂರಿನ ಬಾಲ್ಕೋ ಸ್ಟುಡಿಯೋದಲ್ಲಿ ಫೋಟೋಗ್ರಾಫರ್ ಆಗಿ ದುಡಿಯುತ್ತಿದ್ದ ಅವರು ಕೆಲಸ ಬಿಟ್ಟ ತರುವಾಯ ಪಕ್ಷದ ಪೂರ್ಣಕಾಲ ಕಾರ್ಯಕರ್ತರಾಗಿ ದುಡಿದಿರುತ್ತಾರೆ. ಮಂಗಳೂರು ಪುರಸಭೆಯ ಸದಸ್ಯ (ಕೌನ್ಸಿಲರ್)ರಾಗಿ ಎರಡು ಅವಧಿಯಲ್ಲಿ ಮಂಗಳಾದೇವಿ ವಾರ್ಡಿನಿಂದ ಆಯ್ಕೆಯಾಗಿ ಸಾರ್ವಜನಿಕವಾಗಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದರೂ ಸಿ.ಐ.ಟಿ.ಯು ಜಿಲ್ಲಾ ಸಮಿತಿ ಸದಸ್ಯರಾಗಿದ್ದ ಅವರು ಜನಪ್ರೀಯ ನಾಟಕಗಳಲ್ಲಿ ನಟನಾಗಿ ಕೂಡಾ ಜನಾನುರಾಗಿಯಾಗಿದ್ದರು.

ಕಾಂ.ಕಮಲಾಕ್ಷ ಬಂಗೇರರ ನಿಧನವು ಮಂಗಳೂರಿನ ಕಾರ್ಮಿಕ ಚಳುವಳಿಗೆ ತುಂಬಲಾರದ ನಷ್ಟವಾಗಿದೆ.

ಕಮಲಾಕ್ಷ ಬಂಗೇರರ ಅಂತಿಮಯಾತ್ರೆ ಅವರ ಎಮ್ಮೆಕೆರೆ ನಿವಾಸದಿಂದ 1.15ಕ್ಕೆ ಹೊರಟು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಅಬ್ರಹಾಂ ಕರ್ಕಡ, ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ ಹಾಗೂ ಜಿಲ್ಲಾ ಸಮಿತಿ ಸದಸ್ಯರಾದ ಯು.ಬಿ.ಲೋಕಯ್ಯನವರು ಮೃತ ಶರೀರಕ್ಕೆ ಕೆಂಪು ಬಾವುಟವನ್ನು ಹಾಸಿದರು. ಮಂಗಳೂರು ಮಹಾನಗರ ಪಾಲಿಕೆಯ ಮೇಯರ್ ಶಶಿಧರ ಹೆಗ್ಡೆ ಹಾಗೂ ಸ್ಥಳೀಯ ಮೂರು ಕಾರ್ಪೋರೇಟರ್‌ಗಳು ಪುಷ್ಪಗುಚ್ಛವನ್ನು ಇಟ್ಟು ಸಂತಾಪವನ್ನು ಸೂಚಿಸಿದರು. ಜಿಲ್ಲಾ ಸಮಿತಿ ಸದಸ್ಯರುಗಳಾದ ಕೆ.ಸುಕುಮಾರ್, ಕೆ.ಮಂಜಪ್ಪ, ಬಾಬು ದೇವಾಡಿಗ, ವಾಸುಗಟ್ಟಿ, ಸಿ.ಐ.ಟಿ.ಯು ಜಿಲ್ಲಾ ಸಮಿತಿ ಸದಸ್ಯರುಗಳಾದ ಸಂಜೀವ ಬಂಗೇರ, ಪ್ರದೀಪ್ ಮೂಡಬಿದ್ರಿ, ನಾಗೇಶ್ ಕೊಟ್ಯಾನ್ ಮಂಗಳೂರು, ಶೀನ ಬಂಗೇರ ಬಂಟ್ವಾಳ, ಡಿ.ವೈ.ಎಫ್.ಐ ನಾಯಕ ಶಶಿಧರ ಶಕ್ತಿನಗರ ರವರುಗಳ ಅಂತಿಮಯಾತ್ರೆಯಲ್ಲಿ ಪಾಲ್ಗೊಂಡರು. ಅಪಾರ ಸಂಖ್ಯೆಯ ಕಾರ್ಮಿಕರು ಹಿರಿಯನಾಯಕನ ಅಂತಿಮದರ್ಶನ ಪಡೆದರು.

ವರದಿ: **ವಸಂತ ಆಚಾರಿ**

ಪ್ರಚಂಡ ಬಹುಮತದಿಂದ ಆಯ್ಕೆಯಾದ ದಕ್ಷಿಣ ಅಮೆರಿಕದ ವೆನೆಜುಲಾದ ಅಧ್ಯಕ್ಷ ಚವೇಝ್ ಅಮೆರಿಕದ ಆಳರಸರ ಕಣ್ಣು ಕೆಂಪಾಗುವಂತೆ ಮಾಡಿದ್ದಾರೆ. ಅಲ್ಲಿನ ತೈಲವನ್ನು ದೇಶದ ಹಿಸಾತಕ್ತಿಗೆ ಅನುಗುಣವಾಗಿ ಬಳಸಲು ನಿರ್ಧರಿಸಿದ್ದೇ ಅವರ 'ಅಪರಾಧ'. ಕ್ಯೂಬಾದ ಮೇಲಿನ ದಿಗ್ಬಂಧನ ಧಿಕ್ಕರಿಸಿ, ಆ ದೇಶಕ್ಕೆ ತೈಲ ರಫ್ತು ಆರಂಭಿಸಿದ್ದು 'ಅಕ್ಷಮ್ಯ ಅಪರಾಧ'. ಸಿಐಎ ಆತನನ್ನು ಅಧಿಕಾರದಿಂದ ಕೈಗಿಳಿಸಲು ಆರಂಭದಿಂದಲೂ ಶತಪ್ರಯತ್ನ ನಡೆಸುತ್ತಿದೆ. ಇದೇ ಏಪ್ರಿಲ್‌ನಲ್ಲಿ ಸಿಐಎ ಕುಮ್ಮಕ್ಕಿನಿಂದ ಪ್ರಯತ್ನಿಸಿದ ಮಿಲಿಟರಿ ಕ್ಷಿಪ್ರಕ್ರಾಂತಿ ಎರಡನೇ ದಿನದಲ್ಲಿ ಜನರ ಒತ್ತಡದಿಂದ ಕುಸಿದು ಬಿದ್ದಿತ್ತು. ಈಗ ಆರ್ಥಿಕ-ರಾಜಕೀಯ ಅರಾಜಕತೆ ಸೃಷ್ಟಿಸಿ ಇನ್ನೊಂದು ಮಿಲಿಟರಿ ಕ್ಷಿಪ್ರಕ್ರಾಂತಿ ತರಲು ಸಿಐಎ ಪುನಃ ಪ್ರಯತ್ನಿಸುತ್ತಿದೆ. ಅದೂ ಸರ್ಕಾರದ ಮತ್ತು ಜನರ ಪ್ರಜ್ಞಾಪೂರ್ವಕ ಪ್ರತಿಭಟನೆಯಿಂದ ಕುಸಿಯುತ್ತಿರುವ ಎಲ್ಲಾ ಲಕ್ಷಣಗಳೂ ಕಂಡು ಬಂದಿವೆ.



ವೆನೆಜುವೆಲಾ

ಅಧ್ಯಕ್ಷ ಚವೇಝ್ ಪದಚ್ಯುತಗೊಳಿಸಲು ಇನ್ನೊಂದು ಸಿಐಎ ಯತ್ನ ಕುಸಿಯುತ್ತಿದೆ

ಶರತ್‌ಚಂದ್ರ

ಸಿಐಎ ವೆನೆಜುವೆಲಾದ ತೈಲ ಕಂಪನಿಯ ಭ್ರಷ್ಟ ಅಧಿಕಾರಿಗಳು, ಯೂನಿಯನ್ ನಾಯಕರೂ ಜತೆ ಸೇರಿ ದೇಶದ ಆರ್ಥಿಕವನ್ನು 'ಲಾಕೌಟ್' ಮಾಡಿದೆ. ಡಿಸೆಂಬರ್ 2 ರಿಂದ ನಡೆಯುತ್ತಿರುವ ಈ 'ಲಾಕೌಟ್' ಎರಡು ವಾರಗಳನ್ನು ಮುಗಿಸಿ ಮೂರನೇ ವಾರಕ್ಕೆ ಕಾಲಿಟ್ಟಿದೆ. PDVSA ಯೆಂಬುದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿ. ಅದರ ಡೈರೆಕ್ಟರುಗಳು ಸೇರಿದಂತೆ ಆಡಳಿತ ವರ್ಗದ ದೊಡ್ಡ ವಿಭಾಗ ತೈಲ ಕಂಪನಿಯ ನಿರ್ವಹಣೆಯಲ್ಲಿ ಜನವರಿ 2003 ರಿಂದ ಸರ್ಕಾರ ತರಲಿರುವ ಮಹತ್ವದ - ದೇಶದ ಹಿತಾಸಕ್ತಿಗೆ ಅನುಗುಣವಾದ ಬದಲಾವಣೆಗಳನ್ನು ವಿರೋಧಿಸುತ್ತಿದ್ದಾರೆ. ಈಗ ತೈಲ ಕಂಪನಿಯ ಲಾಭದ ದೊಡ್ಡ ಭಾಗವನ್ನು ಈ ಭ್ರಷ್ಟಕೂಟ ಜೇಬಿಗೆ ಸೇರಿಸುತ್ತಿದೆ. ಈ ಭ್ರಷ್ಟಕೂಟಕ್ಕೆ ಸಿಐಎ ಕುಮ್ಮಕ್ಕು ನೀಡುತ್ತಿದೆ. ತೈಲ ಕಂಪನಿಯ ಭ್ರಷ್ಟ ಅಧಿಕಾರಿಗಳು - ಯೂನಿಯನ್ ನಾಯಕರ ಕೂಟಕ್ಕೆ ದೊಡ್ಡ ಮಾಲಕರ FEDE CAMARAS ಎಂಬ ಸಂಘಟನೆ, ಕಾರ್ಮಿಕರ ಸಂಘಟನೆ CTV ಯ ಬೆಂಬಲವಿದೆ. ಈ ಎರಡೂ ಸಂಘಟನೆಗಳಿಗೆ NED (ಪ್ರಜಾಸತ್ತೆಗೆ ರಾಷ್ಟ್ರೀಯ ನಿಧಿ) ಎಂಬ ಸಿಐಎಯ'ಫ್ರಾಕ್ಸಿ' ಸಂಸ್ಥೆಯ ವಿಪುಲ ಧನಸಹಾಯ ಸಿಗುತ್ತಿದೆ. ಇವರಿಬ್ಬರೂ ಸೇರಿ 'ಸಾರ್ವತ್ರಿಕ ಮುಷ್ಕರ' ಕ್ಕೆ ಕರೆ ನೀಡಿದ್ದಾರೆ. ಆದರೆ ಇದಕ್ಕೆ ಬಹುಸಂಖ್ಯಾತ ಕಾರ್ಮಿಕರ ಬೆಂಬಲ ಇಲ್ಲ. ತೈಲ ಕಂಪನಿಯಲ್ಲಿ ಮ್ಯಾನೇಜ್‌ಮೆಂಟ್ ಕಾರ್ಮಿಕರು ಕೆಲಸಕ್ಕೆ ಬರದಂತೆ ತಡೆಯುತ್ತಿರುವುದರಿಂದ ಕೆಲಸ ನಿಲುಗಡೆ ಆಗಿದೆ. ಆದರೆ ಉಳಿದ ಆರ್ಥಿಕವನ್ನು ನಿಲ್ಲಿಸಲು ಅವರಿಗೆ ಸಾಧ್ಯವಾಗಿಲ್ಲ.

ಮಾಲಕರ ಲಾಕೌಟ್ ಮುರಿಯುವುದು ಪ್ರಜಾಸತ್ತೆ ಮೇಲೆ ಧಾಳಿ!?

ದೇಶದ ಆರ್ಥಿಕದ ಬೆನ್ನೆಲುಬಾದ ತೈಲ ಕೈಗಾರಿಕೆಯ ಈ 'ಲಾಕೌಟ್' ನ್ನು ಮುರಿಯಲು ಸರ್ಕಾರ ಮತ್ತು ಜನ ಕೈಗೊಳ್ಳುತ್ತಿರುವ ಕಾನೂನುಬದ್ಧ ಕ್ರಮಗಳನ್ನು ಆ ದೇಶದ ಮಾಲಕರ ಕೈಗೊಂಬೆಯಾದ ಖಾಸಗಿ ಸುದ್ದಿ ಮಾಧ್ಯಮಗಳು (ಮುಖ್ಯವಾಗಿ ಟಿ.ವಿ. ಚಾನಲ್‌ಗಳು) 'ಪ್ರಜಾಸತ್ತೆ ಮೇಲೆ ಧಾಳಿ' ಇತ್ಯಾದಿ ಅಪಪ್ರಚಾರ ಮಾಡುತ್ತಿವೆ. ಏಪ್ರಿಲ್ ಮಿಲಿಟರಿ ಕ್ಷಿಪ್ರಕ್ರಾಂತಿಯ ಸಮಯದಲ್ಲಿ ಇದೇ ತಂತ್ರ ಬಳಸಿ, ಅದೂ ವಿಫಲವೂ ಆಗಿತ್ತು. ತಂತ್ರದಹೂರಣ ಬಟಾಬಯಲಾಗಿತ್ತು. ಆದರೂ ಅದೇ ಹಳೆ ಆಟ ಆಡುತ್ತಿವೆ. ತೈಲ ಉತ್ಪಾದನೆ, ಶುದ್ಧೀಕರಣ, ವಿತರಣೆ ಕೇಂದ್ರಗಳಲ್ಲಿ 'ಲಾಕೌಟ್' ನ್ನು ಮುರಿಯಲು ಸರ್ಕಾರ ಹಲವು ಕಡೆ ಮಿಲಿಟರಿ ಪಡೆಗಳನ್ನು, ಖಾಸಗಿ ಸಾಗಾಣಿಕೆದಾರರನ್ನು ಬಳಸಲು ನಿರ್ಧರಿಸಿದೆ. ತೈಲ ಕ್ಷೇತ್ರದ ಒಂದು ವಿಭಾಗ ಕೆಲಸ ಮಾಡಲು ಆರಂಭಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ.

ಸುಳ್ಳು ಬೊಗಳುವ ಖಾಸಗಿ ಟಿ.ವಿ. ಚಾನಲ್‌ಗಳಿಗೆ ಮುತ್ತಿಗೆ

ಮಾಲಕರ ಸಂಘಟನೆ FEDECAMARA ಕರೆ ಕೊಟ್ಟಿರುವ 'ಸಾರ್ವತ್ರಿಕ ಮುಷ್ಕರ' ರಾಜಧಾನಿಯ ಉಚ್ಚ ವರ್ಗದ ಕಾಲೋನಿಗಳಲ್ಲಿ ಬಿಟ್ಟರೆ ಬೇರೆ ಎಲ್ಲೂ ಯಶಸ್ವಿಯಾಗಿಲ್ಲ. ಈ ವಿಫಲ ಪ್ರಯತ್ನ ಮುಚ್ಚಿಕೊಳ್ಳಲು ಮಿಲಿಟರಿ ಅಧಿಕಾರಿಗಳ ಒಂದು ವಿಭಾಗ (ಇವರಲ್ಲಿ ಹೆಚ್ಚಿನವರು ಏಪ್ರಿಲ್‌ನ ಕುಸಿದು ಬಿದ್ದ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಭಾಗವಹಿಸಿದವರು) ಪ್ರತಿದಿನ 'ಪ್ರಜಾಸತ್ತೆ ಮೇಲೆ ಧಾಳಿಗೆ ಪ್ರತಿಭಟನಾ ಪ್ರದರ್ಶನ' ಸಂಘಟಿಸುತ್ತಿದೆ. ಮೊದಮೊದಲು ಖಾಸಗಿ ಟಿವಿ ಚಾನೆಲ್‌ಗಳ ಭಾರಿ ಅಪಪ್ರಚಾರದಿಂದ ಉಚ್ಚ ಮಧ್ಯಮ ಮತ್ತು ಮಧ್ಯಮ ವರ್ಗಗಳ ಒಂದು ದೊಡ್ಡ ವಿಭಾಗ ಭಾಗವಹಿಸಿದರೂ, ದಿನೇ ದಿನೇ ಪ್ರದರ್ಶನಕಾರರ ಸಂಖ್ಯೆ ಕುಸಿಯುತ್ತಿದೆ. ಇದನ್ನೇ ಇಡೀ ದಿನ ಟಿವಿ ಚಾನಲ್‌ಗಳು ತೋರಿಸಿ ಇಡೀ ದೇಶ ಅಧ್ಯಕ್ಷ ಚವೇಝು ವಿರುದ್ಧ ಎದ್ದು ನಿಂತಿದೆ, ಆತ ರಾಜಿನಾಮೆ ಕೊಡಬೇಕು ಎಂದು ಪಟ್ಟು ಹಿಡಿದಿವೆ. ಈ ಅಪಪ್ರಚಾರದ ವಿರುದ್ಧ ಜನ ಬೀದಿಗಿಳಿದಿದ್ದಾರೆ. ಸರ್ಕಾರವನ್ನು ಬೆಂಬಲಿಸುವ ಲಕ್ಷಗಟ್ಟಲೆ ಭಾಗವಹಿಸುವ ಜನರ ರ‍್ಯಾಲಿಯನ್ನು ಖಾಸಗಿ ಟಿವಿ ಚಾನೆಲ್‌ಗಳು, ಸುದ್ದಿ ಮಾಧ್ಯಮಗಳು (ಸರಕಾರಿ ಸ್ವಾಮ್ಯದ ಟಿವಿ ಚಾನಲ್ ಬಿಟ್ಟರೆ) ಕ್ಯಾಮೆರಾ ಕಣ್ಣಿಗೆ ಬೀಳುವುದೇ ಇಲ್ಲ. ಅಂತರ್‍ರಾಷ್ಟ್ರೀಯ ಸುದ್ದಿ ಮಾಧ್ಯಮಗಳೂ ಚವೇಝ್ ವಿರುದ್ಧ 'ಜನರ ಆಕ್ರೋಶ' 'ಸಾರ್ವತ್ರಿಕ ಮುಷ್ಕರ' ದಲ್ಲಿ ವ್ಯಕ್ತವಾಗುತ್ತಿದೆ ಎಂಬ ಹಸಿಸುಳ್ಳು ಸಾರುತ್ತಿದ್ದಾರೆ. ಇದರಿಂದ ಕುಪ್ತವಾದ ಸರ್ಕಾರದ ಬೆಂಬಲಿಗರು ಖಾಸಗಿ ಟಿವಿ ಚಾನಲ್‌ಗಳ ಕಚೇರಿಗಳ ಸುತ್ತ ಮುತ್ತಿಗೆ ಹಾಕಿದ್ದಾರೆ. ಸರ್ಕಾರದ ಪರ ರ‍್ಯಾಲಿಗಳ ಸುದ್ದಿಯನ್ನು ಬಿತ್ತರಿಸಿ ಎನ್ನುವುದು ಅವರ ಒತ್ತಾಯ. ಇದೂ 'ಪ್ರಜಾಸತ್ತೆ ಮೇಲೆ ಧಾಳಿ' ಎಂಬುದು ಖಾಸಗಿ ಟಿವಿ ಚಾನಲ್‌ಗಳ ಅಂಬೋಣ. 'ಸ್ವತಂತ್ರ (ಬಹುಶಃ ಜನಸಾಮಾನ್ಯರ ಹಿತಾಸಕ್ತಿಗಳಿಂದ ಸ್ವತಂತ್ರವಾದ, ಮಾಲಿಕರ ಸ್ವಾತಂತ್ರ್ಯ ಕಾಣಲಿರುವ) ಮಾಧ್ಯಮಗಳ ಮೇಲೆ ಸರ್ಕಾರದ ಕುಮ್ಮಕ್ಕಿನಿಂದ ದೊಂಬಿ, ದಾಳಿ ಎಂದು ಬಣ್ಣಿಸಲಾಗುತ್ತಿದೆ. ಹೀಗೆ ಒಟ್ಟಾರೆ ವೆನಿಜುವೆಲಾದಲ್ಲಿ ಸರ್ಕಾರದ, ಅದರ ಬಹುಸಂಖ್ಯಾತ ಬಡ ಬೆಂಬಲಿಗರು (ವೆನೆಜುವೆಲಾದ ಶೇಕಡ 80 ಜನ ಬಡವರು. ಸರ್ಕಾರದ ಹಲವರು ಬಡವರ-ಪರ ಮತ್ತು ದೇಶಪ್ರೇಮಿ ಕ್ರಮಗಳಿಂದ ಅದರ ಬೆಂಬಲಿಗರಾಗಿದ್ದಾರೆ) ಒಂದು ಕಡೆ. ಇನ್ನೊಂದು ಕಡೆ ತೈಲ ಕ್ಷೇತ್ರದ ಭ್ರಷ್ಟ ಅಧಿಕಾರಿಗಳು - ಮಿಲಿಟರಿ ಅಧಿಕಾರಿಗಳು - ಮತ್ತು ಅವರ ಉಚ್ಚ-ಮಧ್ಯಮ ವರ್ಗದ ಜನ (ಸ್ವಾಭಾವಿಕವಾಗಿಯೇ ಇವರು ಅಲ್ಪಸಂಖ್ಯಾತರು, ಆದರೆ ದೇಶದ ಆರ್ಥಿಕ ಚುಕ್ಕಾಣಿ ಹಿಡಿದವರು). ಈ ಎರಡು ಬಣಗಳ ನಡುವೆ ಆಂತರಿಕ ಯುದ್ಧವೇ ಆರಂಭವಾಗಿದೆ. ಸರ್ಕಾರ ಮತ್ತು ಅದರ ಬೆಂಬಲಿಗರು ಶಾಂತಿಯುತವಾಗಿ ಈ ಸಂಘರ್ಷ ನಡೆಸುತ್ತಿದ್ದರೂ, ಅದನ್ನು ಸಶಸ್ತ್ರ ಕಲಹವಾಗಿ ಪರಿವರ್ತಿಸಲು ವಿರೋಧಿ ಬಣ ಎಲ್ಲಾ ಪ್ರಯತ್ನ ನಡೆಸಿದೆ.

ಹಿಂಸಾಚಾರಕ್ಕೆ ಪ್ರಚೋದನೆಗೆ ಪ್ರಯತ್ನ

ಡಿಸೆಂಬರ್ 10 ರಂದು ಒಬ್ಬ ಬಂದೂಕಧಾರಿ ಸರ್ಕಾರಿ-ವಿರೋಧಿ ಪ್ರದರ್ಶನದ ಮೇಲೆ ಗುಂಡು ಹಾರಿಸಿ ಮೂವರು ಸತ್ತು, ಇಪ್ಪತ್ತು ಜನ ಗಾಯಗೊಂಡರು. ಬಂದೂಕಧಾರಿ ಗಲಭೆ ಕೋರರನ್ನು ಬಂಧಿಸಲಾಗಿದ್ದು, ಆತ ಒಬ್ಬ ಪೋರ್ಚುಗಲ್‌ನಿಂದ ಬಂದ ಮತಿಗೆಟ್ಟ ವ್ಯಕ್ತಿ ಎಂದು ಹೇಳಲಾಗಿದೆ. ಆದರೆ ಆತನನ್ನು ಮತ್ತು ಇತರ ಬಂದೂಕುಧಾರಿಗಳನ್ನು ವೆನೆಜುಲಾ ರಾಜಧಾನಿ ಕ್ಯಾರಕಾಸ್‌ನ ಮೇಯರ್(ಈತ ಸಹ ಏಪ್ರಿಲ್ ಮಿಲಿಟರಿ ಕ್ಷಿಪ್ರಕ್ರಾಂತಿ ಬೆಂಬಲಿಗರಲ್ಲಿ ಒಬ್ಬ) ಜತೆಗೆ ಹಲವು ಜನ ನೋಡಿದ್ದಾಗಿ ವರದಿಯಾಗಿದೆ. ಬಂದೂಕಧಾರಿ ಜನರಲ್ ಗೊಮೆಝ್(ಏಪ್ರಿಲ್ ಮಿಲಿಟರಿ ಕ್ಷಿಪ್ರಕ್ರಾಂತಿಯ ನಾಯಕ) ಈ ಗಲಭೆ ಸೃಷ್ಟಿಸಲು ಹಣ ಕೊಟ್ಟಿದ್ದಾನೆ ಎಂದು ಹೇಳಿದ್ದಾನೆ ಎಂದು ವರದಿಯಾಗಿದೆ. ಆತ ಯಾರೇ ಇರಲಿ, ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪ್ರಯತ್ನ ಇದು ಎಂಬುದು ಸ್ಪಷ್ಟ. ಖಾಸಗಿ ಟಿವಿ ಚಾನಲ್‌ಗಳು ಈಗಾಗಲೇ 'ಪ್ರಜಾಸತ್ತೆ ವಿರುದ್ಧ ದಾಳಿಗೆ ಪ್ರತಿಭಟನೆ ಮೇಲೆ ಸರ್ಕಾರಿ ಧಾಳಿ' ಎಂದು ಅಪಪ್ರಚಾರ ಮಾಡುತ್ತಿವೆ. ಆದರೆ ಸರ್ಕಾರಿ ಬೆಂಬಲಿಗರನ್ನು ವ್ಯಾಪಕ ಹಿಂಸಾಚಾರಕ್ಕೆ ಪ್ರಚೋದಿಸಲು ಈ ಘಟನೆ ವಿಫಲವಾಗಿದೆ. ಬದಲಾಗಿ ಖಾಸಗಿ ಚಾನಲ್‌ಗಳ ಸುಳ್ಳು ಪ್ರಚಾರದ ವಿರುದ್ಧ ಸರ್ಕಾರಿ-ವಿರೋಧಿ ಪ್ರದರ್ಶನಗಳ ವಿರುದ್ಧ ಪ್ರತಿಭಟನೆ ದಿನೇದಿನೇ ವ್ಯಾಪಕವಾಗುತ್ತಿದೆ.

ಮಧ್ಯಸ್ತಿಕೆ ಹೆಸರಲ್ಲಿ ವಿದೇಶಿ ಮಧ್ಯಪ್ರವೇಶ ಯತ್ನ

ಉಳಿದ ಕ್ರಮಗಳು ಬಿದ್ದು ಹೋಗುತ್ತಿರುವ ಸಂದರ್ಭದಲ್ಲಿ ವೆನೆಜುವೆಲಾದಲ್ಲಿ ನೇರ ಮಧ್ಯಪ್ರವೇಶ ನಡೆಸಲು ಪ್ರಯತ್ನ ನಡೆದಿದೆ. ವೆನೆಜುವೆಲಾದ ಸರ್ಕಾರ ಮತ್ತು ಅದರ ವಿರೋಧಿಗಳ ನಡುವೆ ಮಧ್ಯಸ್ತಿಕೆ ಮಾತುಕತೆ ನಡೆಸಿ ವಿವಾದ ಇತ್ಯರ್ಥ ಮಾಡಲು (ದಕ್ಷಿಣ) ಅಮೆರಿಕದ ಸರ್ಕಾರಗಳ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಜನರಲ್ ಗವಿರಿಯಾ ಕ್ಯಾರಕಸ್‌ಗೆ ಬಂದಿದ್ದಾನೆ. ಈತ ಸಿಐಎ ಬೆಂಬಲದಿಂದ ಕೊಲಂಬಿಯದ ಅಧ್ಯಕ್ಷನಾದವನು. ಅವರು ಎಷ್ಟರ ಮಟ್ಟಿಗೆ ಪ್ರಾಮಾಣಿಕ ಮಧ್ಯಸ್ಥಿಕೆ ಮಾಡಲು ಸಾಧ್ಯ. ಇದೂ ವೆನೆಜುವೆಲಾದಲ್ಲಿ ಏನಕೇನ ಪ್ರಕಾರೇಣ. ಅಧ್ಯಕ್ಷ ಚವೇಝ್‌ರನ್ನು ಪದಚ್ಯುತಗೊಳಿಸಲು ಸಿಐಎ ಪ್ರಯತ್ನ. ಈತ ಮಿಲಿಟರಿ ಅಧಿಕಾರಿಗಳು ನಡೆಸುವ ಪ್ರತಿಭಟನೆಯಲ್ಲಿ ಭಾಗವಹಿಸುವ ಮೊಟಾರ್-ಬೈಕ್‌ಧಾರಿ ಸಶಸ್ತ್ರ ಗೂಂಡಾಗಳು ಎಬ್ಬಿಸುವ ದಾಂಧಲೆ ಬಗ್ಗೆ, ತೈಲ ಲಾಕೌಟ್ ಬಗ್ಗೆ ಚಕಾರವೆತ್ತುವುದಿಲ್ಲ. ಆದರೆ ಖಾಸಗಿ ಚಾನಲ್‌ಗಳ ಸುಳ್ಳು ಪ್ರಚಾರದ ವಿರುದ್ಧ ರೊಚ್ಚಿಗೆದ್ದ ಜನಸಾಮಾನ್ಯರ ಪ್ರದರ್ಶನವನ್ನು ಖಂಡಿಸುತ್ತಾನೆ. ಅದನ್ನು ನಿಯಂತ್ರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತಾನೆ.

ಸಂವಿಧಾನ-ವಿರೋಧಿ ಮರುಚುನಾವಣೆಗೆ ಕರೆ

ವೆನೆಜುವೆಲಾದ ಸರ್ಕಾರ-ವಿರೋಧಿಗಳು, ಅಮೆರಿಕನ್ ಸರ್ಕಾರವೂ ಅಧ್ಯಕ್ಷ ಚವೇಝ್ ರಾಜಿನಾಮೆಗೆ ಕರೆ ನೀಡಿದ್ದಾರೆ. ಇದಕ್ಕಾಗಿ ಒತ್ತಡ, ಪ್ರಚಾರ ನಡೆದಿದೆ. ಆದರೆ ಇದೂ ಪ್ರಜಾಸತ್ತೆ ಪರ ಎಂದು ಹೇಳಿಕೊಳ್ಳುವವರ ಪ್ರಜಾಸತ್ತೆ-ವಿರೋಧಿ ಮತ್ತು ಸಂವಿಧಾನ-ವಿರೋಧಿ ಕ್ರಮ. ವೆನೆಜುವೆಲಾದ ಸಂವಿಧಾನ ಅತ್ಯಂತ ಪ್ರಜಾಸತ್ತಾತ್ಮಕವಾಗಿದ್ದು ನಾಲ್ಕು ವರ್ಷಕ್ಕೆ ಆಯ್ಕೆಯಾದ ಅಧ್ಯಕ್ಷರನ್ನು ವಾಪಸು ಕರೆಯಲು ಎರಡು ವರ್ಷದ ಅವಧಿ ನಂತರ ಅವಕಾಶ ಕೊಡುತ್ತಿದೆ. ಆಗಸ್ಟ್ 2003 ರಲ್ಲಿ ಸಂವಿಧಾನದಲ್ಲಿ ವಿಧಿಸಿದ ಕ್ರಮ ಅನುಸರಿಸಿದರೆ ಈ ವಿಧಾನವನ್ನು ಚವೇಝ್ - ವಿರೋಧಿಗಳು ಏಕೆ ಬಳಸಲು ತಯಾರಿಲ್ಲ? ನಿಜವಾಗಿ ಚವೇಝ್ -ವಿರೋಧಿಗಳಿಗೆ ಜನರ ಬೆಂಬಲವಿದ್ದರೆ ಈ ವಿಧಾನವನ್ನು ಆರಾಮವಾಗಿ ಬಳಸಬಹುದು. ಒಂದನೆಯದಾಗಿ ಅಲ್ಲಿವರೆಗೆ ಕಾಯಲು ಅವರಿಗೆ ತಾಳ್ಮೆ ಇಲ್ಲ. ಜನವರಿಯಲ್ಲಿ ಚವೇಝ್ ಸರ್ಕಾರ ತರಲಿರುವ ಬಡವರ-ಪರ ಮತ್ತು ದೇಶದ ಹಿತಾಸಕ್ತಿ ಕಾಪಾಡುವ ಕಾನೂನುಕ್ರಮಗಳು, ಅಲ್ಲಿನ ಭ್ರಷ್ಟ ಉಚ್ಚ ವರ್ಗಗಳ ಮತ್ತು ಅಮೆರಿಕದ ಆರ್ಥಿಕ ಹಿತಾಸಕ್ತಿಗಳ ಗೋಣು ಮುರಿಯಲಿದೆ. ಅಲ್ಲದೆ ಸಂವಿಧಾನ ವಿಧಿಸಿರುವ ಸಂಖ್ಯೆಯಲ್ಲಿ 'ಅಧ್ಯಕ್ಷ ವಾಪಾಸಿಗೆ' ಜನರ ಸಹಿ ಸಂಗ್ರಹ ಮತ್ತು ಚುನಾವಣೆಯಲ್ಲಿ ಅಗತ್ಯ ಬೆಂಬಲ ಸಾಧಿಸುವ ಸಾಧ್ಯತೆಯೂ ಇಲ್ಲ. ಅಧ್ಯಕ್ಷ ಚವೇಝ್ ಆಗಸ್ಟ್ 2003 ರಲ್ಲಿ ಈ ಸಂವಿಧಾನಬದ್ಧ ಕ್ರಮಕ್ಕೆ ತಯಾರು ಎಂದು ವಿರೋಧಿಗಳಿಗೆ ಸವಾಲು ಹಾಕಿದ್ದಾರೆ. ಆರ್ಥಿಕ ಅರಾಜಕತೆ, ಹಿಂಸಾಚಾರ-ದೊಂಬಿ, ಅಪಪ್ರಚಾರಗಳ ಭರಾಟೆ ಮೂಲಕ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸಿ ಅಧ್ಯಕ್ಷ ಚವೇಝ್ ಪದಚ್ಯುತಗೊಳಿಸಲು ಸಿಐಎ ಮತ್ತು ಜಾರ್ಜ್ ಬುಶ್ ಸರ್ಕಾರ ಹೆಣಗುತ್ತಿದೆ. 1973 ರಲ್ಲಿ ಚಿಲಿಯ ಜನಪ್ರಿಯ ಅಧ್ಯಕ್ಷ ಅಲೆಂದೆ ವಿರುದ್ಧ ಬಳಸಿದ ಎಲ್ಲಾ ತಂತ್ರಗಳನ್ನು ಪುನಃ ಪ್ರಯೋಗಿಸಲಾಗುತ್ತಿದೆ. ಆದರೆ ಅದು ಸಫಲವಾಗುವ ಲಕ್ಷಣಗಳಿಲ್ಲ. ವೆನೆಜುವೆಲಾದಲ್ಲಿ ಸಿಐಎ ಪ್ರಯತ್ನಗಳಿಗೆ ಸೋಲಾಗುತ್ತದೋ ಇಲ್ಲವೋ ಎಂಬುದು ಅಂತರ್‍ರಾಷ್ಟ್ರೀಯ ಮಹತ್ವದ್ದಾಗಿದೆ. ○

ದಿನಕರ್‌ರವರ 'ರಾಜರಹಸ್ಯ'

ಮಾನವೀಯತೆ ಮರೆತ 'ಪೊಲೀಸ್ ಕರ್ತವ್ಯ'




ಪೋಲೀಸ್ ಮಹಾ ನಿರ್ದೇಶಕರಾಗಿದ್ದ ಸಿ.ದಿನಕರ್‌ರವರ ಪುಸ್ತಕ 'ವೀರಪ್ಪನ್ಸ್ ಪ್ರೈಜ್ ಕ್ಯಾಚ್: ರಾಜ್‌ಕುಮಾರ್' ಕನ್ನಡದಲ್ಲಿಯೂ ಭಾಷಾಂತರಿಸಲ್ಪಟ್ಟು ಎಲ್ಲರ ಗಮನ ಸೆಳೆದಿದೆ. ಮುಂದುವರಿದ ವೀರಪ್ಪನ್ ಅಟ್ಟಹಾಸ, ನಾಗಪ್ಪನವರ ಅಪಹರಣ-ಹತ್ಯೆಗಳಿಂದಾಗಿ ಪುಸ್ತಕ ಖರೀದಿಸುವವರು ಹೆಚ್ಚಿದ್ದಾರೆ.

ಡಾ. ರಾಜ್‌ರವರ ಅಪಹರಣ ಮತ್ತು ಬಿಡುಗಡೆಯವರೆಗಿನ ಹಲವಾರು ವಿದ್ಯಮಾನಗಳ ವಿವರಗಳು ಮುಖ್ಯವಾಗಿ 313 ಪುಟಗಳ ಈ ಪುಸ್ತಕದ ಹೂರಣ. ಆಳುವವರು ಮತ್ತು ಅಧಿಕಾರಶಾಹಿಗಳ ಬಗೆಗಿನ ಸಂಘರ್ಷಗಳ ವಿದ್ಯಮಾನಗಳ ಚಿತ್ರಣ ನೀಡುತ್ತದೆ. ನರಹಂತಕ ಕಾಡುಗಳ್ಳ ವೀರಪ್ಪನ್‌ನ ತಂಡದ ಒಳ-ಹೊರಗಿನವರ ಗ್ರಾನೈಟ್ ಲಾಭಗಳು, ಕಾರ್ಯಾಚರಣೆ ಪಡೆ- ಅಧಿಕಾರಿಗಳ ಸಂಬಂಧಗಳ ಕೆಲ ವಿಚಾರಗಳತ್ತಲೂ ಕೊಂಚ ಇಣುಕು ಇವೆ. ಆದರೆ 'ವೀರಪ್ಪನ್ ಸಮಸ್ಯೆ'ಯ ಉಗಮ- ಈ ಪ್ರಮಾಣಕ್ಕೆ ಬೆಳೆದ ಬಗೆಯ ಒಳನೋಟ ಕೊಡುವುದಿಲ್ಲ. ಹತ್ತಾರು ವರುಷಗಳು ರಾಜ್ಯದಲ್ಲಿ ಪೋಲೀಸ್ ಅಧಿಕಾರಿಯಾಗಿದ್ದು, ಉನ್ನತ ಹುದ್ದೆಗೇರಿ, ಕಾರ್ಯನಿರ್ವಹಿಸಿದ್ದರೂ ಇದು ಯಾಕಾಗಲಿಲ್ಲ ಎಂಬುದು ಉಳಿಯುವ ಪ್ರಶ್ನೆ. ದಿನಕರ್ ಪುಸ್ತಕದಲ್ಲಿ ಅಸಂಗತ, ಅಪ್ರಾಸಂಗಿಕವಾದ ಹಲವಾರು ಸಂಗತಿಗಳನ್ನು ಎಳೆದು ತಂದಿದ್ದಾರೆ. ರಾಜಕೀಯವನ್ನು- ರಾಜಕೀಯ ನಾಯಕರನ್ನು ಇಡಿಯಾಗಿ ತಿರಸ್ಕಾರದಿಂದಲೇ ನೋಡುವುದು ಒಬ್ಬ ಕೆಟ್ಟ ಬ್ಯಾರಾಕ್ರಾಟ್ (ಅಧಿಕಾರಶಾಹಿಯ)ನ ಪ್ರಜಾತಂತ್ರಕ್ಕೆ ಒಗ್ಗದ ಮುಖ ಕಾಣುತ್ತದೆ. ಡಾ.ರಾಜ್ ಬಿಡುಗಡೆಗಾಗಿ ಅವರ ಪತ್ನಿ, ಮಕ್ಕಳು, ಕುಟುಂಬದವರ ಪರಿತಾಪಗಳು, ಜರ್ಝರಿತ -ಆತಂಕಗಳೂ ಸಹ ದಿನಕರ್‌ನ ಲೇವಡಿಯ, ವಸ್ತುಗಳಾಗುತ್ತವೆ. ವೀರಪ್ಪನ್‌ಗೆ ತನ್ನ ಗಂಡನನ್ನು ಬಿಡುಗಡೆಗೊಳಿಸು ಎಂದು ಪಾರ್ವತಮ್ಮ ಕೇಳುವುದಾಗಲೀ, ಕರುಣಾನಿಧಿಯ ಬಳಿ ಮಕ್ಕಳು ವಿನಂತಿಸುವುದಾಗಲಿ ಬ್ಯೂರಾಕ್ರಾಟ್ ದಿನಕರ್‌ಗೆ ಕಾಣುವುದೇ ಬೇರೆ. ರಾಜ್ ಕುಟುಂಬ ಮತ್ತು ಅವರ ಅಭಿಮಾನಿಗಳು ರಾಜ್‌ಗಾಗಿ ಹಂಬಲಿಸಿದರೆ ಅದು ಲಾಭ-ನಷ್ಟದ ವಿಷಯವಾಗಿಯೇ (ಚಿನ್ನಇಡುವ ಕೋಳಿ) ಗ್ರಹಿಸುತ್ತಾರೆ ದಿನಕರ್.

ಆತ ಮಾನವೀಯ ಸೌಜನ್ಯರಹಿತನಾದ ರೀತಿಯಲ್ಲಿ ವರ್ತಿಸುತ್ತಿರುವುದು ಎದ್ದುಕಾಣುತ್ತದೆ. ಹೀಗೆ ವರ್ತಿಸುವುದೇ 'ಕರ್ತವ್ಯ'ವೆಂದು ಭಾವಿಸಿದಂತಿದೆ ದಿನಕರ್. ಪೋಲೀಸ್ ಅಧಿಕಾರಿಗಳೆಂದರೆ ಹೀಗೆಯೇ ಎಂದು ಸಹಜವಾಗಿ ನಿರ್ಧರಿಸಿಬಿಡಬಹುದು.

ರಾಜ್ ಬಿಡುಗಡೆಗಾಗಿ ಹತ್ತಾರು ಕೋಟಿ ಹಣ ನೀಡಲಾಗಿದೆಯೆಂಬ ಬಗ್ಗೆ ಯಾರಿಗೂ ಅನುಮಾನ ಉಳಿದಿಲ್ಲ. ಈ ಬಗೆಗೆ ಎತ್ತಿದ ಹಣದ ವಿವರಗಳತ್ತ ಬೆಳಕು ತೋರುವ ದಿನಕರ್, ಕೊಡುವ ಮಾಹಿತಿಗಳು ಹೇಳಿಕೆಗಳಂತಿದೆ. ಬದಲಾಗಿ ಹೆಚ್ಚಿನ ಖಚಿತ ವಿವರಗಳಿದ್ದರೆ ಉನ್ನತ ಹುದ್ದೆ ನಿರ್ವಹಿಸಿದ್ದರ ಪ್ರಯೋಜನ ದೊರಕುತ್ತಿತ್ತು. ಇತರ ಮೇಲಿನ ದೂಷಣೆಗಿಂತ ಹೊಣೆಗಾರಿಕೆಯನ್ನಾದರೂ ತೋರಬಹುದಿತ್ತು. ನಮ್ಮ ಓದುಗರಿಗಾಗಿ ಕೆಲ ತುಣುಕುಗಳು ಇಲ್ಲಿವೆ. ಕೆಲವನ್ನು ಪುಸ್ತಕದಿಂದಲೂ ಲಂಕೇಶ್ ಪತ್ರಿಕೆಯಿಂದಲೂ ಆಯ್ಕೆ ಮಾಡಲಾಗಿದೆ.



ಇಂತಹ ಸಿನಿಕತನ ಅಧಿಕಾರಶಾಹಿಯ ವೈಭವೀಕರಣದ ಪುಸ್ತಕಗಳನ್ನು ರಾತ್ರೋರಾತ್ರಿ ಭೂಗತವಾಗಿ ಅನುವಾದಿಸಿ, ಕಾಸು ಕೊಡುವ ಕನ್ನಡಿಗರ ಕೈಗೆ ಇಕ್ಕಿದ್ದಾರೆ ಪತ್ರಕರ್ತ ರವಿ ಬೆಳಗೆರೆಯವರು. **- ಎಸ್‌ವೈಜಿ**


ರಾಜ್ ಅಪಹರಣವಾಗಿ 50 ದಿನಗಳು ಸಂದಿವೆ; ಜನರಲ್ಲಿ ಅವರ ಬಗ್ಗೆ ಕಾಳಜಿ ಮತ್ತು ಉತ್ಸಾಹ ಎರಡೂ ಕುಗ್ಗುತ್ತಿರುವ ಸಂದರ್ಭ. ಪಾರ್ವತಮ್ಮ ಇದ್ದಕ್ಕಿದ್ದ ಹಾಗೆ ಆಸ್ಪತ್ರೆಗೆ ದಾಖಲಾಗುತ್ತಾರೆ. ಅವರ ಪರವಾಗಿ ಕನ್ನಡ ಚಿತ್ರೋದ್ಯಮದ 5000 ಜನ ಮೆರವಣಿಗೆಯನ್ನು ಮಾಡುತ್ತಾರೆ.

★ ★ ★

ಪಾರ್ವತಮ್ಮ ದಿಟ್ಟ ಹಾಗೂ ಧೈರ್ಯಸ್ಥ ಮಹಿಳೆ. ರಾಜ್‌ಕುಮಾರ್ ಹಿಂದೆ ಇರುವ ಹೆಂಗಸು. ಜನರನ್ನು ಸಂಘಟಿಸುವುದರಲ್ಲಿ ಯಾವುದೇ ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲಿ ಪಾರ್ವತಮ್ಮ ಎತ್ತಿದ ಕೈ. ಆದರೆ ಆಕೆಯ ತಾಳ್ಮೆಗೂ ಮಿತಿ ಇದೆ. ಪಾರ್ವತಮ್ಮನಿಗೆ, ಆಕೆಯ ಸಂಸಾರದ ಸದಸ್ಯರಿಗೆ, ರಾಜ್ ಕುಮಾರ್ ಅಭಿಮಾನಿಗಳಿಗೆ ರಾಜ್‌ಕುಮಾರ್ ಒಂದು ಭಂಡಾರವಿದ್ದಂತೆ. ಅವರಿಗೆಲ್ಲಾ ಚಿನ್ನದ ಮೊಟ್ಟೆಗಳನ್ನಿಡುವ ಚಿನ್ನದ ಕೋಳಿಯಂತೆ ರಾಜ್‌ಕುಮಾರ್. ರಾಜ್‌ಕುಮಾರ್ ಇಲ್ಲದಿದ್ದರೆ ಅವರೆಲ್ಲಾ ದಾಡಿ ಬಿಡುತ್ತಾರೆ. ಆದ್ದರಿಂದಲೇ ಕಾವನ್ನು ನೀಡುತ್ತಲೇ ಇರಬೇಕಾಗಿದೆ ಎಂದೆನಿಸುತ್ತದೆ ದಿನಕರ್‌ಗೆ.

★ ★ ★

ಅಕ್ಟೋಬರ್ 9, 2000 ಕರ್ನಾಟಕ ಬಂದ್ ಸಂಪೂರ್ಣ ವಿಫಲವಾಗಿದ್ದು ಎಲ್ಲಾ ಪುಂಡುಪೋಕರಿಗಳನ್ನು ಮತ್ತು ರೌಡಿಗಳನ್ನು ನಿಯಂತ್ರಿಸಲಾಗಿದೆ. ಮತ್ತೆ ಜನರ ಭಾವನೆಗಳನ್ನು ಕೆರಳಿಸಲು ಪಾರ್ವತಮ್ಮ ತಯಾರಿಲ್ಲ. ಹಿಂದೆ ಪಾರ್ವತಮ್ಮ ಹೇಗೆ ಗರ್ವದಿಂದ ಎಲ್ಲವನ್ನು ನಿಭಾಯಿಸುತ್ತಿದ್ದರು ಎಂದು ನೆನೆಸಿಕೊಳ್ಳುತ್ತಾರೆ ದಿನಕರ್. ಹಾಗೆಯೇ ತಾನು ಯಾರ ಪ್ರಭಾವಕ್ಕೂ ಒಳಗಾಗದೆ ಆಕೆಯ ವಿರುದ್ಧ ಕಾನೂನಿನನ್ವಯ ಕ್ರಮವನ್ನು ತೆಗೆದುಕೊಳ್ಳುವ ವ್ಯಕ್ತಿ ಎಂದು ಪಾರ್ವತಮ್ಮನಿಗೆ ಗೊತ್ತು ಎಂದೂ ದಿನಕರ್‌ಗೆ ಗೊತ್ತು. ಅವರ ಏನೇ ಆದರೂ ಪಾರ್ವತಮ್ಮನವರ ಮನೆಗೆ ಭೇಟಿ ನೀಡುವುದಿಲ್ಲ. ಆಕೆ ರಾಣಿ ಜೇನು ಅಲ್ಲ ಎಂಬುದೇ ದಿನಕರ್ ಅವರ ದೃಢವಾದ ಅಭಿಪ್ರಾಯ.



ಈ ದೇಶದಲ್ಲಿ ಪ್ರತಿಯೊಂದಕ್ಕೂ ಒಂದು ಬೆಲೆ ಅಂತ ನಿಗದಿಯಾಗಿರುತ್ತದೆ. ಹಾಗೆಯೇ ರಾಜಕುಮಾರ್‌ಗೂ! ಅವರಿಗಾಗಿ ತೆತ್ತ ಬೆಲೆ:

1. ಎರಡು ಸಲ ಎಸ್.ಎಂ.ಕೃಷ್ಣ ತಮ್ಮ ಅಳಿಯ ವಿ.ಜಿ.ಸಿದ್ಧಾರ್ಥ ಮೂಲಕ ಕಳಿಸಿದ 5 ಕೋಟಿರೂಪಾಯಿಗಳು. ಮತ್ತು ಡಿಐಜಿ ಜಯಪ್ರಕಾಶ್ ಕೈಲಿ ಕಳಿಸಿದ 5 ಕೋಟಿ ರೂಪಾಯಿಗಳು
2. ಪಾರ್ವತಮ್ಮ ಚೆನ್ನೈನ ಕರುಣಾನಿಧಿ ಅವರ ಮನೆಗೆ ಕಳುಹಿಸಿದ 1 ಕೋಟಿ ರೂಪಾಯಿ
3. ಇಂದಿರಾನಗರದ ಮನೆಯಲ್ಲಿ ಪಾರ್ವತಮ್ಮ ಭಾನುಗೆ ಖುದ್ದಾಗಿ ಕೊಟ್ಟ 2 ಕೋಟಿ ರೂಪಾಯಿ
4. ಚಿತ್ರರಂಗದವರು ಚೆನ್ನೈನಲ್ಲಿ ಕರುಣಾನಿಧಿಯ ಮನೆಯಲ್ಲಿ ಕೊಟ್ಟ 2 ಕೋಟಿ ರೂಪಾಯಿ

ಪಾರ್ವತಮ್ಮ, ಪುನೀತ್, ಅಳಿಯ ರಾಮಕುಮಾರ್, ಮಧು ಬಂಗಾರಪ್ಪ ಮುಂತಾದವರು ರಾಜಕುಮಾರರನ್ನು ಕರೆತರಲು ಈರೋಡ್‌ಗೆ ಕಾರುಗಳಲ್ಲಿ ತೆರಳಿದರು. ಸುದ್ದಿ ಹರಡುತ್ತಿದ್ದಂತೆಯೇ ಬೆಂಗಳೂರಿನಲ್ಲಿ ಪಟಾಕಿ ಸಿಡಿದವು. ವಿಧಾನಸಭೆಯಲ್ಲಿ ಕೃಷ್ಣ ಅದನ್ನು ಘೋಷಿಸುತ್ತಿದ್ದಂತೆಯೇ ಚಪ್ಪಾಳೆಯ ಸುರಿಮಳೆ. ಕೃಷ್ಣ ಅವರದೊಂದು ಚಿಕ್ಕ ಭಾಷಣ.ಎಲ್ಲರಿಗೂ ಧನ್ಯವಾದಗಳು.

★ ★ ★

ಭಾನು ಇತಿಹಾಸ

ಭಾನು ಪ್ರಥಮ ಬಾರಿಗೆ ದಿನಕರ್‌ರವರನ್ನು ಅವರ ಕಚೇರಿಯಲ್ಲಿ ಭೇಟಿಯಾದ ಸಂದರ್ಭ.

ರಾಜ್‌ಕುಮಾರ್‌ರವರನ್ನು ಹೇಗೆ ಬಚಾವ್ ಮಾಡಬಹುದೆಂದು ವಿವರಿಸುವ ಭಾನು, ತಾನು ಮತ್ತು ಕೊಳತ್ತೂರು ಮಣಿ ಕ್ವಾರಿಗಳನ್ನು ಹೊಂದಿರುವುದಾಗಿ ತಿಳಿಸುತ್ತಾಳೆ. ಕೊಳತ್ತೂರು ಮಣಿಯ ಅತಿಥಿ ಗೃಹದಲ್ಲಿ ಹಲವು ಬಾರಿ ವೀರಪ್ಪನ್ ತಂಗಿದ್ದನೆಂದೂ, ತಾನು ವೀರಪ್ಪನ್‌ನ ಚಿಕ್ಕಪುಟ್ಟ ಕಾಯಿಲೆಗಳಿಗೆ ಚಿಕಿತ್ಸೆ ನೀಡಿರುವುದಾಗಿಯೂ ತಿಳಿಸುತ್ತಾಳೆ. " ಏನನ್ನಾದರೂ ಕೊಟ್ಟರೆ" ರಾಜ್‌ಕುಮಾರ್‌ರನ್ನು ಬಿಡುವಂತೆ ಕೊಳತ್ತೂರು ಮಣಿ ಮತ್ತು ತಾನು ವೀರಪ್ಪನ್ ಮನವೊಲಿಸುವುದಾಗಿ ಭಾನು ಹೇಳುತ್ತಾಳೆ.

ಯಾರೀ ಭಾನು? ತಮಿಳುನಾಡಿನಲ್ಲಿನ ಮಧುರೈ ಸಮೀಪದ ಪುಂಗನಾಕುಲಮ್ ಗ್ರಾಮದಲ್ಲಿ ರಾಮಸ್ವಾಮಿ ಮತ್ತು ಚಂದ್ರ ಎಂಬ ದಂಪತಿಗಳಿಗೆ ಮೇ 5, 1961ರಂದು ಜನಿಸಿದಾಕೆ ಭಾನು. ಆಕೆಯ ತಂದೆ ಸೈನ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೂ ಆ ನಂತರ ರಾಜೀನಾಮೆ ನೀಡಿ ಸರ್ಕಾರಿ ಡ್ರೈವರ್ ಆಗಿದ್ದವರು. ಭಾನು ಪರಿಶಿಷ್ಟ ಜಾತಿಗೆ ಸೇರಿದ್ದರಿಂದ ಶಾಲಾಭ್ಯಾಸ ಸುಲಭವಾಯಿತು. ತಾನು ಮಧುರೈ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಮಾಡಿದ್ದೇನೆಂದು ಭಾನು ಹೇಳುತ್ತಾಳಾದರೂ ಆಕೆ ಓದಿದ್ದು ನರ್ಸಿಂಗ್.

★ ★ ★

ವೀರಪ್ಪನ್‌ಗೆ ಮಣಿ 'ಭಾಯ್', ಭಾನು 'ಬೆಹನ್'

ಭಾನು, ರಾಂಕುಮಾರ್, ಕೊಳತ್ತೂರು ಮಣಿ ಮತ್ತು ಷಣ್ಮುಗಂ ಸುಂದರಂ ವೀರಪ್ಪನ್ ಶಿಬಿರ... ತಲುಪುತ್ತಾರೆ. ವೀರಪ್ಪನ್ ಅವರುಗಳ... ಆತ್ಮೀಯವಾಗಿ ಸ್ವಾಗಿಸುತ್ತಾನೆ. ವೀರಪ್ಪ... ಕೊಳತ್ತೂರು ಮಣಿ ಮತ್ತು ಭಾನು ನಡ... ಸರಿಯಾದ ಅರ್ಥವಂತಿಕೆ ಇದೆ. ಅವರೆಲ್ಲ... ಹಕ್ಕಿಗಳು, ಆದರೆ ಬೇರೆ ಬೇರೆ ಬಣ್ಣದ ಪುಕ್ಕಗ... ಹೊಂದಿರುವ ಹಕ್ಕಿಗಳು. ಮಣಿ ಮತ್ತು ಭ... ಅದೇ ಪ್ರದೇಶದಲ್ಲಿ ಅಕ್ರಮ ಗಣಿಗಾ... ನಡೆಸುತ್ತಿರುವುದರಿಂದಲೇ ಅವರಿಗ ವೀರ... ನೊಂದಿಗೆ ಹಲವಾರು ವರ್ಷಗಳ ಸಂಪರ್ಕ...

ನಕ್ಕೀರನ್ ಗೋಪಾಲ್ ವಿರುದ್ಧ ವೀ... ಭಾನುಗೆ ದೂರುತ್ತಾನೆ. ಎಸ್.ಎ... ಎರಡು ಬಾರಿ ಐದೈದು ಕೆ... ಗೋಪಾಲ್‌ಗೆ ಕೊಟ್ಟಿದ್ದರೂ ಸಂಪೂರ್ಣ... ಕೋಟಿ ರೂ.ಗಳು ತನ್ನ ಕೈ ಸೇರಿಲ್ಲ... ವೀರಪ್ಪನ್ ಶಪಿಸುತ್ತಾನೆ. "ಪಾರ್ವ... ಕಳುಹಿಸಿದ್ದ ಹಣವೂ ಸಂಪೂರ್ಣ... ನನಗೆ ನೀಡಿಲ್ಲ" ಎಂದು ಗೋ... ಹೊಯ್ಯುತ್ತಾನೆ.

"ಚಿಂತಿಸಬೇಡ. ಮುಖ್ಯಮ... ಗಳು ಎಲ್ಲವನ್ನು ಈಡೇರಿಸು... ಎಂದು ಭರವಸೆ ನೀಡಿದ್ದಾ... ಎಂದು ಭಾನು ಹೇಳುತ... ಆಕೆಯನ್ನು ನಂಬಿ ವೀರಪ್ಪನ್ ಸಂತೋಷ... ಬೀಗುತ್ತಾನೆ.

ಭಾನು ತಾನು ಬಹಳ ಬುದ್ಧಿವಂತೆ ಎಂಬ... ವರ್ತಿಸುತ್ತಾಳೆ. ಇದು ಒಂದು ದೊಡ್ಡ ಆತ್ಮವಂ... ವೀರಪ್ಪನ್ ಕೂಡಾ ಆಕೆ ವೈದ್ಯಳೆಂದೇ ನಂಬುತ್ತಾ... ಇದು ವೀರಪ್ಪನ್‌ಗೆ ಭಾನು ಹೇಳಿರುವ ಸುಳ್ಳು...

ಗೋವಿಂದರಾಜು ಬಿಡುಗಡೆಯಾಗಿ ಬಂದಾಗಿನಿಂದ ದೊಡ್ಡಮಟ್ಟದ ಹಣದ ಎತ್ತುವಳಿ ನಡೆದುಹೋಯಿತು. ಎತ್ತಿದ ಹಣವೆಷ್ಟು? ಲೆಕ್ಕವಿಟ್ಟವರ್‍ಯಾರು?

ಅಷ್ಟು ಹೊತ್ತಿಗಾಗಲೇ ಟಾಡಾ ಬೈದಿಗಳ... ಸುಪ್ರಿಂ ಕೋರ್ಟ್ ತೀರ್ಮಾನಗಳನ್ನು ರೇಡಿ... ದಲ್ಲಿ ಕೇಳಿದ್ದಾರೆ. "ಮುಂದೇನು?" ಎಂ... ವೀರಪ್ಪನ್ ಕೇಳುತ್ತಾನೆ. ಹೇಗಾದರೂ ಮಾ... ವೀರಪ್ಪನ್‌ಗೆ ಭಂಗಬಾರದಂತಹ ತಂತ್ರಗಳ... ಚರ್ಚಿಸುತ್ತಾನೆ. ವೀರಪ್ಪನೊಂದಿಗೆ ಮಾತಾಡು... ಎಸ್.ಎಂ.ಕೃಷ್ಣ ವಿಶೇಷ ನ್ಯಾಯಾಲಯದ ಬ... ಆಶ್ವಾಸನೆ ನೀಡುತ್ತಾರೆ. ಪಾರ್ವತಮ್ಮ ಕೂಡಾ ವೀರಪ್ಪನೊಂದಿಗೆ ಮಾತನಾಡುತ್ತಾರೆ. ನಂ... ರಾಜ್‌ಕುಮಾರ್ ಪಾರ್ವತಮ್ಮ ಮಕ್ಕ... ಕೃಷ್ಣರೊಂದಿಗೆ ಮಾತನಾಡುತ್ತಾರೆ.

ಎಸ್.ಎಂ.ಕೃಷ್ಣರೊಂದಿಗೆ ಮಾತನಾಡಿ... ನಂತರ ವೀರಪ್ಪನ್ ಉಲ್ಲಸಿತನಾಗುತ್ತಾ... ರಾಜ್‌ಕುಮಾರ್‌ನನ್ನು ಬಿಡುವುದಾಗಿ ಹೇಳುತ್ತಾ... ವೀರಪ್ಪನ್ ಈ ಉಲ್ಲಾಸಭರಿತ ಸ್ಥಿತಿಯಲ್ಲಿ... ವಾಗಲೇ ಭಾನು ರಾಜ್‌ರವರ ಕಿವಿಯಲ್ಲಿ ಪಿಸು... ಗುಡುತ್ತಾಳೆ. ತಮ್ಮ ಆರೋಗ್ಯ ಸರಿಯಿಲ್ಲವೆಂಬ... ನಟಿಸಿ ಎಂದು ಹೇಳುತ್ತಾಳೆ. ಅವರ ಕೈಗೆ ಒಂ... ಔಷಧಿ ಪ್ಯಾಕೆಟ್ ತುರುಕುತ್ತಾಳೆ. ... ಔಷಧಿಯಿಂದಾಗಿ ಅವರ ಮುಖ ಮತ್ತು ತುಟ... ಬಿಳಚಿಕೊಳ್ಳುತ್ತವೆ.

★ ★ ★

ಕುಡುಕರಿಗೆ ಕಷ್ಟ, ಬೊಕ್ಕಸಕ್ಕೆ ನಷ್ಟ

ರಾಜ್ ಅಪಹರಣದ ದಿನದಿಂದ ಎ... ಹೆಂಡದಂಗಡಿಗಳು ಮತ್ತು ಬಾರ್‌ಗಳು ಬ... ಆಗಿದ್ದವು. ಆಗ ಸಭೆಯೊಂದಕ್ಕೆ ಅಬ್ಕಾರಿ ಸ... ಎಂ.ಎಂ. ನಾಣಯ್ಯನವರು ತಮ್ಮ ಇಲಾಖೆ... ಆಯುಕ್ತರೊಂದಿಗೆ ಆಗಮಿಸಿ, "12 ಕೋ... ರೂಪಾಯಿಗಳ ನಷ್ಟವಾಗಿದೆ" ಎಂದು ತಿಳಿಸುತ್ತಾರೆ.

"ಒಳ್ಳೆಯದೇ ಆಯಿತು. ರಾಜ್‌ಕುಮಾರ...

ಪುಟ 8 ನೋ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
...: ಹವಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
...ed & Published by Communist Party of India(Marxist), Karnataka State Committee. Editor: S.Y.GURUSHANTH